
ನಮ್ಮ ಮಾನಸ

ಸಂಪುಟ : 6 ಸೆಪ್ಟೆಂಬರ್ 2012 ಸಂಚಿಕೆ: 5 ಬೆಲೆ: 10/-



ನಮ್ಮ ಮಾನಸ

ಸೆಪ್ಟೆಂಬರ್ 2012
ಸಂಪುಟ : 6 ಸಂಚಿಕೆ : 5

Editor, Printer and Publisher
Rajeshwari H.S.,
No. 114/5, 9th Cross, 2nd Main
Chamarajpet, Bangalore - 560 018.
Mobile : 98804 67372 / 98869 18910

Printed at
ILA Mudrana
No. 36, 40 Ft. Road, Raghavanagara,
New Timberyard Layout
Bangalore-26.
© : 26757159

ಚಂದಾ ವಿವರ

ಬಿಡಿಪ್ರತಿ	**10–00 ರೂ.**
ವಾರ್ಷಿಕ ಚಂದಾ	**100–00 ರೂ.**
(ವಿಶೇಷ ಸಂಚಿಕೆಯೊಂದಿಗೆ)	
ಸಂಸ್ಥೆಗಳಿಗೆ	**150–00 ರೂ.**

ನಮ್ಮ ಮಾನಸ
114/5, 9ನೇ ತಿರುವು, 2ನೇ ಮುಖ್ಯರಸ್ತೆ,
ಚಾಮರಾಜಪೇಟೆ, ಬೆಂಗಳೂರು – 560 018

ಚಂದಾಹಣವನ್ನು ಈ ವಿಳಾಸಕ್ಕೆ ಚೆಕ್ ಅಥವಾ ಡಿ.ಡಿ. ಮೂಲಕ ಕಳಿಸಬಹುದು

ಪ್ರಾರಂಭ : 'ಮಾನವಿ' (1985ರಲ್ಲಿ), ಅನಂತರ 'ಮಾನಸ', ಈಗ 'ನಮ್ಮ ಮಾನಸ'

ಒಳಗಿನ ಪುಟಗಳಲ್ಲಿ....

ಸಹೃದಯ ಓದುಗರಲ್ಲಿ...

ನೀವು ನಮ್ಮ ಚಿಂತನೆ–ಗುರಿಯನ್ನು ಬಲಪಡಿಸುವಿರೆಂದು ನಮಗೆ ನಂಬಿಕೆ ಇದೆ. ನೀವು ಓದುತ್ತಿರುವ ಮಾನಸವನ್ನು ಹೊರತರಲು ನಿಮ್ಮ ಆರ್ಥಿಕ ನೆರವು, ಪ್ರೋತ್ಸಾಹ ಮುಖ್ಯ. ಮಾನಸವನ್ನು ಮತ್ತೊಮ್ಮೆ ನಿರಂತರವಾಗಿ ಜೀವಂತವಾಗಿಡಲು ಸಹೃದಯ ಓದುಗರ ಬೆಂಬಲದ ಅಗತ್ಯವಿದೆ. ನೀವು ಯಾವುದಾದರೊಂದು ಬಗೆಯಲ್ಲಿ ನಮ್ಮೊಂದಿಗೆ ಕೈಜೋಡಿಸಬಹುದು.

- ಪ್ರತಿ ತಿಂಗಳಿಗೊಮ್ಮೆ ಲೇಖನಗಳನ್ನು ಬರೆಯಿರಿ ಇಲ್ಲವೇ ಬೇರೆಯವರಿಂದ ಬರೆಯಿಸಿ ಕಳುಹಿಸಿ.
- ವಾರ್ಷಿಕ ಚಂದಾದಾರರಾಗಿ ಮತ್ತು ಇನ್ನಷ್ಟು ಚಂದಾದಾರರನ್ನು ಪರಿಚಯಿಸಿ.
- ಮಾನಸದ ಒಂದು ತಿಂಗಳ ಮುದ್ರಣದ ಖರ್ಚು ರೂ. 7,000/– ರಲ್ಲಿ ಪೂರ್ತಿ ಇಲ್ಲವೇ ನಿಮಗೆ ಸಾಧ್ಯವಾದಷ್ಟು ಹಣವನ್ನು ಕೊಟ್ಟು ಬೆಂಬಲಿಸಿ ಕೈ ಜೋಡಿಸುವಿರೆಂಬ ಆಶಯದೊಂದಿಗೆ,

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ

E-mail: nammamanasa@gmail.com
Contact: Disha K.R.: 9880467372, Lekha: 9686757053, Samudyatha : 88922 48351, Nirmala K.: 98869 18910

ಚಿತ್ರಕೃಪೆ: ಅಂತರಜಾಲ

ಸಂಪಾದಕೀಯ

ವಲಸೆ ಮಹಿಳೆಯರ ಸಮಸ್ಯೆಗಳು

ಕೈಗಾರೀಕರಣ, ನಗರೀಕರಣ ಹಾಗೂ ಜಾಗತೀಕರಣದ ಪ್ರತಿಫಲವಾಗಿ ಗ್ರಾಮೀಣ ಪ್ರದೇಶದಿಂದ ನಗರ ಪ್ರದೇಶಗಳಿಗೆ ಪುರುಷರು ಹಾಗೂ ಮಹಿಳೆಯರು ವಲಸೆ ಬರುತ್ತಿರುವುದು ಸರ್ವೇಸಾಮನ್ಯವಾಗಿದೆ. ಬಡತನ, ನಿರುದ್ಯೋಗ, ಅತಿವೃಷ್ಟಿ, ಅನಾವೃಷ್ಟಿಗಳಿಂದಾಗಿ ಭೂಮಿಹೀನ ಕೃಷಿಕಾರ್ಮಿಕರು ಉದ್ಯೋಗವನ್ನರಸಿ ನಗರ ಪ್ರದೇಶಗಳಿಗೆ ವಲಸೆ ಬರುತ್ತಿದ್ದಾರೆ.1980ರ ನಂತರ ಗ್ರಾಮೀಣ ಪ್ರದೇಶದಿಂದ ನಗರ ಪ್ರದೇಶಗಳಿಗೆ ವಲಸೆ ಬರುವ ಮಹಿಳೆಯರ ಸಂಖ್ಯೆ ಹೆಚ್ಚಾಗಿರುವುದು ಕಂಡುಬರುತ್ತಿದೆ. ಶೇ 70ರಷ್ಟು ಮಹಿಳೆಯರು ಉದ್ಯೋಗವನ್ನರಿಸಿ ನಗರ ಪ್ರದೇಶಗಳಿಗೆ ಬರುತ್ತಿದ್ದಾರೆ. ಜಿಲ್ಲೆಯಿಂದ ಜಿಲ್ಲೆಗೆ, ಹೊರ ರಾಜ್ಯಗಳಿಗೆ, ಹೊರ ದೇಶಗಳಿಗೆ ವಲಸೆ ಹೋಗುವ ಮಹಿಳೆಯರು ಎದುರಿಸುವ ಸಮಸ್ಯೆ ವಿಭಿನ್ನವಾಗಿದೆ. ಮಹಿಳೆಯರು ಎದುರಿಸುವ ಸಮಸ್ಯೆಗಳನ್ನು ಲಿಂಗಸೂಕ್ಷತೆಯ ದೃಷ್ಠಿಕೋನದಿಂದ ವಿಶ್ಲೇಷಿಸುವ ಪ್ರಯತ್ನಗಳು ಸಹ ನಡೆಯುತ್ತಿದೆ.

ಗ್ರಾಮೀಣ ಪ್ರದೇಶಗಳಿಂದ ನಗರ ಪ್ರದೇಶಗಳಿಗೆ ಖಾಯಂ ಆಗಿ ವಲಸೆ ಬರುವ ಮಹಿಳೆಯರ ಸಮಸ್ಯೆಗಳಿಗಿಂತ ಗುಳೆ ಹೋಗುವ ಮಹಿಳೆಯರ ಸಮಸ್ಯೆಗಳು ಭಿನ್ನವಾಗಿವೆ. ದಶಕಗಳಿಂದ ಕರ್ನಾಟಕದಲ್ಲಿ, ಉತ್ತರ ಕರ್ನಾಟಕ, ರಾಯಚೂರು, ಗುಲ್ಬರ್ಗ, ಬೀದರ ಭಾಗದ ಭೂಮಿ ಹೀನ ಕೃಷಿ ಕಾರ್ಮಿಕರು, ಮಹಿಳೆಯರು, ಸಣ್ಣ ಹಿಡುವಳದಾರರ ಕುಟುಂಬಗಳು ಸಕಾಲದಲ್ಲಿ ಮಳೆಯಾಗದ ಕಾರಣ ಉದ್ಯೋಗವನ್ನರಿಸಿ ತಾತ್ಕಲಿಕವಾಗಿ ನಗರ ಪ್ರದೇಶಗಳಿಗೆ ವಲಸೆ ಬರುವುದು ಕಂಡುಬರುತ್ತಿದೆ. ಮಲೆನಾಡು, ಅರೆಮಲೆನಾಡಿನ ಭಾಗದಲ್ಲಿ ವಾಸಿಸುವ ಕೃಷಿಕಾರ್ಮಿಕರ ಕುಟುಂಬಗಳು ಕಾಫಿ ತೋಟದಲ್ಲಿ ಉದ್ಯೋಗವನ್ನರಿಸಿ ಇತರ ಪ್ರದೇಶಗಳಿಗೆ ಹೋಗುತ್ತಾರೆ. ದಶಕಗಳಿಂದಲೂ ಭೂ ಹೀನ ಕಾರ್ಮಿಕರು, ಕೃಷಿ ಕಾರ್ಮಿಕರು ಕುಟುಂಬ ನಿರ್ವಹಣೆಗಾಗಿ ವರ್ಷದ ಕೆಲವು ತಿಂಗಳು ಉದ್ಯೋಗವನ್ನರಸಿ ನಗರ ಪ್ರದೇಶಗಳಿಗೆ ವಲಸೆ ಹೋಗುವುದು ಸಾಮಾನ್ಯವಾಗಿದೆ.

ಇಂದು ಗಾಮೀಣ ಪ್ರದೇಶಗಳಲ್ಲಿ ಕಂಡು ಬರುತ್ತಿರುವ ಆರ್ಥಿಕ ಸಾಮಾಜಿಕ ಬದಲಾವಣೆಗಳು ಸಹ ಇದಕ್ಕೆ ಪ್ರೇರಣೆ ನೀಡುತ್ತಿವೆ. ಸರ್ಕಾರದ ನಿರ್ಲಕ್ಷೆ, ಕೃಷಿ ಭೂಮಿಯನ್ನು ರೈತರು ಮಾರುತ್ತಿರುವುದು, ರೀಯಲ್ ಎಸ್ಟೇಟ್ ವ್ಯವಹಾರಗಳು ಹೀಗೆ ಮುಂತಾದ ಸಮಸ್ಯೆಗಳಿಂದಾಗಿ ವಲಸೆ ಹೋಗುವವರ ವಿಶೇಷವಾಗಿ ಮಹಿಳೆಯರ ಸಂಖ್ಯೆಯು ಹೆಚ್ಚುತ್ತಿದೆ. ಹೀಗೆ ಬರುವ ಕುಟುಂಬಗಳಲ್ಲಿನ ಮಹಿಳೆಯರ ಸ್ಥಿತಿ ಶೋಚನೀಯವಾಗಿದೆ. ಇಂತಹ ಮಹಿಳೆಯರು ಸಾಮಾನ್ಯವಾಗಿ ಕಟ್ಟಡದ ಕೆಲಸ, ರಸ್ತೆ ಕೆಲಸ, ಗಾರ್ಮೆಂಟ್ಸ ಕಾರ್ಖಾನೆಗಳಲ್ಲಿ, ಮನೆ ಕೆಲಸ, ಮುಂತಾದ ಕಡೆ ಕೆಲಸಗಳನ್ನು ಹುಡುಕುತ್ತಾರೆ. ಅವಿದ್ಯಾವಂತರಾದ, ಯಾವುದೇ ಕೌಶಲ್ಯವಿರದ ಇವರು ಇಂತಹ ಕೆಲಸಗಳನ್ನೆ

ಆಶ್ರಯಿಸುವುದು ಅನಿವಾರ್ಯವಾಗುತ್ತದೆ. ಇಂತಹ ಮಹಿಳೆಯರು ಎದುರಿಸುತ್ತಿರುವ ಪ್ರಮುಖವಾದ ಸಮಸ್ಯೆ ವಸತಿಯದು. ದುಬಾರಿ ಮುಂಗಡ, ಬಾಡಿಗೆ ನೀಡಲಾಗದ ಮಹಿಳೆಯರು ಖಾಲಿ ಜಮೀನುಗಳಲ್ಲಿ ತಾತ್ಕಾಲಿಕ ಶೆಡ್ಗಳಲ್ಲಿ, ತಾವು ಕಟ್ಟುತ್ತಿರುವ ಕಟ್ಟಡಗಳಲ್ಲಿಯೇ ವಾಸಿಸುತ್ತಾರೆ. ಶೌಚಾಲಯ, ನೀರು, ವಿದ್ಯುಚ್ಛಕ್ತಿ ಮುಂತಾದ ಸಮಸ್ಯೆಗಳನ್ನು ದಿನನಿತ್ಯ ಎದುರಿಸಬೇಕಾಗುತ್ತದೆ. ಕೆಲವೊಮ್ಮೆ ಎಳೆಮಕ್ಕಳ ಜೊತೆ ಮಹಿಳೆಯರು ಕಲ್ಲು, ಮರುಳು ಇರುವಲ್ಲಿಯೇ ನಿದ್ರಿಸುತ್ತಾರೆ. ಕೆಲಸ ಮಾಡುವ ಜಾಗಕ್ಕೆ ಮಕ್ಕಳನ್ನು ಕರೆದೊಯ್ಯುವುದು ಅನಿವಾರ್ಯವಾಗುತ್ತದೆ. ಕೆಲವೊಮ್ಮೆ ತಾತ್ಕಾಲಿಕ ಶೆಡ್‌ಗಳಲ್ಲಿಯೇ ಬಿಟ್ಟು ಹೋಗುತ್ತಾರೆ.

ದುಡಿಯುವ ಸ್ಥಳಗಳಲ್ಲಿ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳು ಹಲವಾರು. ಮಹಿಳೆಯರಿಗೆ ಕಡಿಮೆ ವೇತನ ನೀಡಿ ದುಡಿಸಿಕೊಳ್ಳಲಾಗುತ್ತಿದೆ. ಕೆಲವೊಮ್ಮೆ ಇಂತಹ ಮಹಿಳೆಯರು ಹಾಗೂ ಮನೆಗೆಲಸ ಮಾಡುವ ಮಹಿಳೆಯರು ಮಾಲೀಕರಿಂದ ಲೈಂಗಿಕ ಹಲ್ಲೆ ಮತ್ತು ದೌರ್ಜನ್ಯಕ್ಕೆ ಒಳಗಾಗುತ್ತಾರೆ. ಇದನ್ನು ಪ್ರತಿಭಟಿಸುವ ಶಕ್ತಿ ಮಹಿಳೆಯರಿಗಿರುವುದಿಲ್ಲ. ಕೆಲಸ ಕಳೆದುಕೊಳ್ಳುವ ಭಯದಿಂದಾಗಿ ಅವರ ಮೇಲಿನ ದೌರ್ಜನ್ಯವನ್ನು ಮೌನವಾಗಿ ಸಹಿಸ ಬೇಕಾಗುತ್ತದೆ. ಮೂಲಭೂತ ಸೌಲಭ್ಯಗಳಿಂದ ವಂಚಿತರಾಗುವ ಈ ಮಹಿಳೆಯರು ಆರೋಗ್ಯದ, ಶುಚಿತ್ವದ ಬಗ್ಗೆ, ಮಕ್ಕಳ ಶಿಕ್ಷಣದ ಬಗ್ಗೆ ಯೋಚಿಸಲು ಸಾಧ್ಯವಾಗುವುದಿಲ್ಲ. ಇಂತಹ ಸಂದರ್ಭದಲ್ಲಿ ಕುಟುಂಬದ ಬಗ್ಗೆಯಾಗಲಿ, ಕುಟಂಬದಲ್ಲಿ ತಮ್ಮ ಪಾತ್ರದ ಬಗ್ಗೆಯಾಗಲಿ ನಿರ್ಧರಿಸುವ ಹಕ್ಕು ಅವಳಿಗಿರುವುದಿಲ್ಲ.

ಅಸಂಘಟಿತ ಕ್ಷೇತ್ರದಲ್ಲಿ ಇವರು ಕೆಲಸ ಮಾಡುವುದರಿಂದ ಯಾವುದೇ ಕಾನೂನು ಇವರ ರಕ್ಷಣೆಗಿಲ್ಲ. ಶ್ರಮ ಮಾರುಕಟ್ಟೆಯಲ್ಲಿ ಇವರದು ಅಗ್ಗದ ಶ್ರಮ. ಬಂಡವಾಳ ಸಮಾಜಕ್ಕೆ ಇವರ ಅಗ್ಗದ ಶ್ರಮವೇ ತಳಪಾಯ. ಯಾವುದೇ ಲೇಬರ್ ಕಾನೂನಿನ್ವಯ

ಹೋರಾಟ ಮಾಡುವ ಸಂಘಟಣೆ ಇವರಿಗಿಲ್ಲ. ಸಾರ್ವಜನಿಕರ ಬೆಂಬಲವೂ ಇವರಿಗೆ ಸಿಗುವುದಿಲ್ಲ. ಮಹಿಳೆಯ ಶ್ರಮವನ್ನು ಅಪಮೌಲ್ಯ ಗೊಳಿಸುತ್ತಿರುವುದು ಪ್ರಮುಖ ಸಂಗತಿಯಾಗಿ ಕಂಡುಬರುತ್ತಿದೆ. ಇವರು ಶ್ರಮವರ್ಗಕ್ಕೆ ಅದೃಶ್ಯರಾಗಿ ಸೇರುತ್ತಾರೆ. ಇಂತಹ ಕ್ಷೇತ್ರದಲ್ಲಿ ದುಡಿಯುತ್ತಿರುವ ಮಹಿಳೆಯರು, ಮಹಿಳೆಯರಾಗಿ, ಪಿತೃಪ್ರಧಾನ ಮೌಲ್ಯಗಳಿಂದಲೂ, ಅಗ್ಗದ ಶ್ರಮವಾಗಿ ಬಂಡವಾಳಶಾಹಿಗಳಿಂದ, ವಲಸೆಗಾರರಾಗಿಯೂ ಸಂಕೀರ್ಣವಾದ ಸಮಸ್ಯೆಗಳಿಂದ ನರಳುತ್ತಾರೆ.

ರಾಜಕೀಯ ಪಕ್ಷಗಳು, ಸರ್ಕಾರಗಳು ಮಹಿಳೆಯರ ಸಬಲೀಕರಣವನ್ನು ತಮ್ಮ ಪ್ರಚಾರಕ್ಕೆ ಬಳಸುತ್ತಿರುವುದು ಸ್ಪಷ್ಟವಾಗಿದೆ. ವಾಸ್ತವದಲ್ಲಿ ಮಹಿಳೆಯ ಪುರುಷ ಪ್ರಧಾನ ಮೌಲ್ಯಗಳ ಮುಷ್ಠಿಯಲ್ಲಿದ್ದುಕೊಂಡೇ ಆರ್ಥಿಕ ಮಾರುಕಟ್ಟೆಯಲ್ಲಿ ಅಗ್ಗದ ಶ್ರಮಿಕರಾಗಿರುವುದೇ ಸಮಾಜಕ್ಕೆ ಬೇಕಾಗಿದೆ. ಕುಟುಂಬದಲ್ಲಿನ ಹಾಗೂ ಸಮಾಜದಲ್ಲಿ ಪುರುಷ ಪ್ರಧಾನ ಮೌಲ್ಯಗಳು ಇವರ ದೈನಂದಿನ ಜೀವನವನ್ನು ನರಕವಾಗಿಸುತ್ತದೆ. ಇಂದು ನಗರ ಕೇಂದ್ರಿತ 'ಅಭಿವೃದ್ಧಿ' ಪರಿಕಲ್ಪನೆಯ ಹಿಂದಿರುವ ಟೊಳ್ಳು ತನವನ್ನು, ರಾಜಕೀಯ ಉದ್ದೇಶವನ್ನು ಅರ್ಥಮಾಡಿಕೊಳ್ಳಬೇಕಾಗಿದೆ. ಪ್ರತಿ ವರ್ಷ ಕರ್ನಾಟಕ ಸರ್ಕಾರ ಬಜೆಟ್ ರೂಪಿಸುವಾಗಲೂ ಗ್ರಮೀಣ ಜನತೆಯ ಕಣ್ಣೊರೆಸಲು, ಮತದಾರರ ಗಮನ ಸೆಳೆಯಲು ಮಹಿಳೆಯರನ್ನು ಆಕರ್ಷಿಸಲು, ಪುರುಷಪ್ರಧಾನ ಮೌಲ್ಯಗಳನ್ನು ಒಳಗೊಂಡ ಯೋಜನೆ ಹಾಗೂ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ. ಮಹಿಳೆಯರನ್ನು ಆರ್ಕಷಿಸಲು ಹಾಗೂ ಮತಗಳಿಸಲು ರಾಜಕೀಯ ಪ್ರಭಾವಿ ವ್ಯಕ್ತಿಗಳು, ತಾವು ಏರ್ಪಡಿಸುವ ಕಾರ್ಯಕ್ರಮಗಳಲ್ಲಿ ಸೀರೆ, ಕಾಲುಂಗರ ಹಂಚುವುದು, ಸೀಮಂತ, ಮಾಡುವುದು, ಫಲ ತಾಂಬೂಲ ನೀಡುವುದು ಹಾಸ್ಯಾಸ್ಪದವಾದರೂ ಅವುಗಳ ಹಿಂದಿರುವ ರಾಜಕೀಯ ಹುನ್ನಾರ ಮತಗಳಿಸುವುದಾಗಿದೆ.

ಮಹಿಳೆಯರು ಗ್ರಾಮೀಣ ಪ್ರದೇಶದಲ್ಲೆ ನೆಲೆಸಲು ಅಗತ್ಯವಾದ ಭದ್ರತೆಯನ್ನು ನೀಡುವಂತಹ ಯೋಜನೆಗಳನ್ನು ಸರ್ಕಾರ ರೂಪಿಸಬೇಕು. ಉದ್ಯೋಗಖಾತರಿ ಯೋಜನೆ ಈ ನಿಟ್ಟಿನಲ್ಲಿ ರೂಪಿತವಾಗಿದ್ದರೂ ಗ್ರಾಮೀಣ ಪ್ರದೇಶಗಳಲ್ಲಿನ ಫ್ಯೂಡಲ್ ವ್ಯವಸ್ಥೆಯಿಂದಾಗಿ ಮಹಿಳೆಯರಿಗೆ ಸಿಗಬೇಕಾದ ಉದ್ಯೋಗ ಸಿಗುತ್ತಿಲ್ಲ. ಬಹುಪಾಲು ಕೆಲಸಗಳನ್ನು ಯಂತ್ರಗಳನ್ನು ಬಳಸಿ ಕಾರ್ಮಿಕರ ಲೆಕ್ಕ ತೋರಿಸಿ ಈ ಹಣವನ್ನು ಕಾಂಟ್ರ್ಯಕ್ಟರುಗಳು ಲಪಟಾಯಿಸುತ್ತಾರೆ. ಇದಕ್ಕೆ ಸ್ಥಳೀಯ ನಾಯಕರ ಬೆಂಬಲ ಮತ್ತು ಪ್ರೋತ್ಸಾಹ ಕೂಡ ದೊರೆಯುತ್ತದೆ. ಇಂತಹ ಸಂದರ್ಭದಲ್ಲಿ ಬಡ ಅಮಾಯಕ ಮಹಿಳೆಯರು ವಲಸೆ ಹೋಗದೆ ಅನ್ಯಮಾರ್ಗವಿಲ್ಲ.

ಮಹಿಳೆಯರ ಆರ್ಥಿಕ, ಸಾಮಾಜಿಕ ಅಭಿವೃದ್ಧಿಗೆ ದೀರ್ಘಾವಧಿ ಗ್ರಾಮೀಣ, ರೈತ ಪರ ಯೋಜನೆಯನ್ನು ರೂಪಿಸುವುದು ಅತ್ಯಗತ್ಯವಾಗಿದೆ. ಇಂತಹ ಯೋಜನೆಗಳ ಹಿನ್ನಲೆಯಲ್ಲಿ ಗ್ರಾಮೀಣ ಮಹಿಳೆಯರು ಸಂಘಟಿತವಾಗಬೇಕಿದೆ. ಇದು ಸಮಾಜದ ಮೂಲಭೂತ, ಆರ್ಥಿಕ, ಸಾಮಾಜಿಕ ಬದಲಾವಣೆಯೊಂದಿಗೆ ತಳಕುಹಾಕಿಕೊಂಡಿದೆ. ಜನಮುಖಿ ಸರ್ಕಾರಗಳು ಮಾತ್ರ ಇಂತಹ ಯೋಜನೆಗಳನ್ನು ರೂಪಿಸಲು ಸಾಧ್ಯ. ❑

ಇತ್ತೀಚೆಗೆ ಗುಜರಾತಿನಲ್ಲಿ ಮಹಿಳೆಯರಲ್ಲಿ ಅಪೌಷ್ಠಿಕತೆ ಹೆಚ್ಚಾಗುತ್ತಿರುವ ಬಗ್ಗೆ ಅಲ್ಲಿನ ಮುಖ್ಯಮಂತ್ರಿಯವರ ಹೇಳಿಕೆ ಹಾಸ್ಯಸ್ಪದವಾಗಿದೆಯಲ್ಲದೆ ವಿವಾದಾತ್ಮಕವಾಗಿದೆ. ಮಹಿಳೆಯರ ಅಪೌಷ್ಠಿಕತೆಗೆ ಮಧ್ಯಮ ವರ್ಗದ ಹೆಣ್ಣು ಮಕ್ಕಳು ಸೌಂದರ್ಯ ಪ್ರಜ್ಞೆಯಿಂದ ಕಡಿಮೆ ಆಹಾರವನ್ನು ತೆಗೆದು ಕೊಳ್ಳುತ್ತಾರೆ ಎಂಬ ಹೇಳಿಕೆ ಚರ್ಚೆಗೆ ಗ್ರಾಸವಾಗಿದೆ. ಅಪೌಷ್ಠಿಕತೆ ಯಾವ ವರ್ಗದ ಮಹಿಳೆಯರನ್ನು ಕಾಡುತ್ತಿದೆ? ಗುಜರಾತಿನಲ್ಲಿರುವ ಮಹಿಳೆಯರೆಲ್ಲಾ ಮದ್ಯಮ ವರ್ಗದ ಮಹಿಳೆಯರು ಮಾತ್ರವೇ? ಬಡಮಹಿಳೆಯರು, ಭೂಹೀನ ಕೃಷಿಕಾರ್ಮಿಕರು, ಕೂಲಿ ಕಾರ್ಮಿಕ ಮಹಿಳೆಯರು ಗುಜರಾತಿನಲ್ಲಿ ಇಲ್ಲವೆ? ಅವರಲ್ಲಿ ಅಪೌಷ್ಠಿಕತೆ ಇಲ್ಲವೆ? ರಾಜಕೀಯ ನಾಯಕರು ನೀಡುವ ಇಂತಹ ಬಾಲಿಷ ಹೇಳಿಕೆಗಳನ್ನು ಮಹಿಳೆಯರು ಒಪ್ಪಬೇಕೇ? ಕರ್ನಾಟಕದಲ್ಲೂ ಅಪೌಷ್ಠಿಕತೆಯ ಬಗ್ಗೆ ನ್ಯಾಯಾಲಯ ಸಾರ್ವಜನಿಕ ಹಿತಾಸಕ್ತಿಯಿಂದ ವಿಚಾರಣೆಯ ಸಂದರ್ಭದಲ್ಲಿ ಸರ್ಕಾರ ಸಮಂಜಸವಾದ ಹೇಳಿಕೆಯನ್ನು ನೀಡಿ ಜಾರಿಕೊಂಡಿತ್ತು. ಅವರ ಆರೋಗ್ಯ ಕುಂಠಿತವಾಗಿರುವುದಕ್ಕೆ ಅವರಿಗಿರುವ ಕಾಯಿಲೆಗಳೆ ಕಾರಣ ಎಂದು ನ್ಯಾಯಾಲಯ ಹೇಳಿಕೆ ನೀಡಿತ್ತು. ಉತ್ತರಕರ್ನಾಟಕದ ಹಲವಾರು ಭಾಗದಲ್ಲಿ ಮಕ್ಕಳ ಅಪೌಷ್ಠಿಕತೆಯಿಂದ ನರಳುತ್ತಿರುವ ನಿದರ್ಶನಗಳು ನಮ್ಮ ಮುಂದಿದೆ. ಪಶ್ಚಿಮ ಬಂಗಾಳದಲ್ಲಿ ಸರ್ಕಾರಿ ಆಸ್ಪತ್ರೆಯಲ್ಲಿ ಶಿಶು ಮರಣಕ್ಕೆ ಸಂಬಂಧಪಟ್ಟ ಹಾಗೆ ಮುಖ್ಯಮಂತ್ರಿಯಾದ ಮಮತ ಬ್ಯಾನರ್ಜಿ ಇದಕ್ಕೆ ಕಾರಣ ಹಿಂದಿನ ಸರ್ಕಾರವೆಂದು ಹೇಳಿ ಜವಾಬ್ದಾರಿಯಿಂದ ಜಾರಿಕೊಂಡರು.

ಇತ್ತೀಚಿಗೆ ಕರ್ನಾಟಕದಲ್ಲಿ ಹೆಣ್ಣುಮಕ್ಕಳು ಕಾಣೆಯಾಗುವ ಬಗ್ಗೆ ವಿದ್ಯಾಲಯ ಅಧ್ಯಾಯನ ನಡೆಸಿ ವರದಿಯನ್ನು ನೀಡಿದೆ. ಈ ವರದಿಯನ್ವಯ 200-300 ಹೆಣ್ಣುಮಕ್ಕಳು ಕಣ್ಮರೆಯಾಗುತ್ತಿದ್ದಾರೆಂದು ವರದಿಯಲ್ಲಿ ಲೆಕ್ಕಿಸಲಾಗಿದೆ. ಇದು ಆಘಾತಕಾರಿ ಹಾಗೂ ಆತಂಕಾರಿ ಸುದ್ದಿಯಾಗಿದೆ. ಸೂಕ್ತವಾದ ತನಿಖೆ ನಡೆಸಿ, ಕಾರಣಗಳನ್ನು ಅರಿತು, ಇದನ್ನು ತಡೆಯಲು ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳಬೇಕಾಗಿದೆ.

ಬೆಂಬಲಿಗರೇ,


ಈ ಸಂಚಿಕೆಯನ್ನು ಹೊರತರುವಲ್ಲಿ ನಮ್ಮೊಟ್ಟಿಗೆ ಕೈಜೋಡಿಸಿರುವ ಪದ್ಮರೇಖಾ, ಸ್ವರ್ಣಮಾಲಾ-ಸಿರ್ಸಿ ಹಾಗೂ ಮಾನಸ ಬಳಗದವರಿಗೆ ಹಾಗೂ ಲೇಖನ, ಪತ್ರಗಳ ಮೂಲಕವೂ ನಮ್ಮ ಉತ್ಸಾಹವನ್ನು ಇಂಗದಂತೆ ನೋಡಿಕೊಳ್ಳುತ್ತಿರುವ ನಿಮ್ಮೆಲ್ಲರಿಗೂ ನಾವು ಸದಾ ಋಣಿ.

ರಂಗಭೂಮಿ ಮತ್ತು ಮಹಿಳೆ

■ ಮೇಘ ಸಮೀರಾ

ರಂಗಭೂಮಿ ಮತ್ತು ಮಹಿಳೆ ಇದು ಬಹಳ ವಿಸ್ತಾರವಾದ ಮತ್ತು ಆಳವಾದ ವಿಷಯ. ಈ ಪ್ರಸಕ್ತ ಸಂದರ್ಭದಲ್ಲಿ ಈ ವಿಷಯದ ಮೇಲೆ ಬೆಳಕು ಚೆಲ್ಲುವುದು ಪ್ರಸ್ತುತ ಎಂದೆನಿಸುತ್ತದೆ. ಈ ವಿಷಯು ಅಗಾಧವಾದ ಆಯಾಮುಗಳನ್ನು ಮತ್ತು ಅರ್ಥಗಳನ್ನು ಪಡೆದಿದ್ದರೂ ಈ ಬರವಣಿಗೆ ಎಲ್ಲಾ ಆಯಾಮ ಗಳನ್ನೂ ಒಳಗೊಂಡಿಲ್ಲ. ಇಲ್ಲಿ ರಂಗಭೂಮಿಯ ಉಗಮದಿಂದ ಪ್ರಾರಂಭಿಸುವ ಸಾಹಸವನ್ನೂ ಮಾಡೋದಿಲ್ಲ. ಈ ಲೇಖನ 16ನೆಯ ಶತಮಾನದ ನಂತರದ ಬೆಳವಣಿಗೆಗಳ ಮೇಲೆ ಅವಲಂಬಿತವಾಗಿದೆ.

ಮಹಿಳೆ ಮತ್ತು ರಂಗಭೂಮಿಯ ಸಂಬಂಧ ತೀರಾ ಹಳೆಯದಲ್ಲ. ಮಹಾನಾಟಕಕಾರ ಷೇಕ್ಸ್ಪಿಯರ್‌ನ ಕಾಲವಾದ 16ನೇ ಶತಮಾನದಲ್ಲಿ ಇಂಗ್ಲೆಂಡ್‌ನಲ್ಲಿ ಕೆಲ ಕಾಲ ನಾಟಕ ವಾಡುವುದೇ ಅಪರಾಧವಾಗಿತ್ತು. ಅಂತದ್ದರಲ್ಲಿ ಒಬ್ಬ ಮಹಿಳೆ ರಂಗದಲ್ಲಿ ಕಾಣಿಸಿಕೊಳ್ಳುವುದೆಂದರೆ! ಮತ್ತು ಅಂದಿನ ಸಾಮಾಜಿಕ ಪರಿಸ್ಥಿತಿಯಲ್ಲಿ ಮಹಿಳೆಯ ಸ್ಥಾನ ಯಾವ ಸ್ತರದಲ್ಲಿತ್ತು ಎಂದು ಎಲ್ಲರಿಗೂ ಗೊತ್ತೇ ಇದೆ. ರಂಗಭೂಮಿ ಸಮಾಜಕ್ಕೆ ಹಿಡಿದ ಕನ್ನಡಿಯಾದ್ದರಿಂದ ಅದರಲ್ಲಿನ ವಾತಾವರಣ ಭಿನ್ನವಾಗಿರಲಿಲ್ಲ ಎಂದೇನು ಹೇಳಬೇಕಾಗಿಲ್ಲ. ಹಾಗಾಗಿ ಅಂದಿನಿಂದ ಇಂದಿನ ವರೆಗಿಗೂ ಮಹಿಳೆಯನ್ನೇ ಕೇಂದ್ರೀಕರಿಸಿದ ಅಥವಾ ಮಹಿಳಾಪರ ಬಂದ ಪ್ರಬುದ್ಧ ರಂಗಕೃತಿಗಳು ಬೆರಳೆಣಿಕೆಯಷ್ಟೇ. ಮೊದಲನೆಯ ದಾಗಿ ಸಾಮಾಜಿಕ ನಿಬಂಧನೆಗಳಿಂದ ರ 'ಂಗಭೂಮಿಯಲ್ಲಿ ಮಹಿಳೆಯರ ಭಾಗವಹಿಸುವಿಕೆ ಇಲ್ಲದ್ದರಿಂದ ಕೃತಿಕಾರರು ಅತೀ ಕಡಿಮೆ ಮಹಿಳಾ ಪಾತ್ರಗಳನ್ನು ಬಳಸಿಕೊಳ್ಳುತ್ತಿದ್ದರು. ಪುರುಷರೇ ಆ ಪಾತ್ರಗಳನ್ನು ನಿರ್ವಹಿಸುತ್ತಿದ್ದರು. ಮತ್ತು ಮಹಿಳೆ ಸಮಾಜದ ಕಟ್ಟಕಡೆಯ ವ್ಯಕ್ತಿ ಎನ್ನುವ ಮನೋಭಾವ ಬೇರೂರಿದ್ದರಿಂದ ರಂಗಕೃತಿಗಳ ವಸ್ತು ಬೇರೆಯೇ ಆಗಿತ್ತು. ತದನಂತರದಲ್ಲಿ ಮಹಿಳೆಯರು ಸಮಾಜದ ಎಲ್ಲಾ ಕ್ಷೇತ್ರಗಳಲ್ಲಿ ಗುರುತಿಸಕೊಳ್ಳ ತೊಡಗಿದರೂ ಹೇಳುವಂತಹ ಮಹಿಳಾ ನಾಟಕಕಾರರು ಬರಲಿಲ್ಲ. ಬದಲಾಗಿ ನಾಟಕೇತರ ಸಾಹಿತ್ಯ ಕ್ಷೇತ್ರದಲ್ಲಿ ಸಾಧನೆಗೈದವರೇ ಹೆಚ್ಚು. ರಂಗದಲ್ಲಿ ಅದೆಷ್ಟೋ ನಟಿಯರು ಮಿಂಚಿ ಮರೆ 'ಯಾಗಿದ್ದಾರೆ. ಆದರೆ ಅವರ ಸ್ಥಿತಿ ಪುರುಷ ನಟರಿಗಿಂತ ಬೇರೆಯದೇ ಆಗಿತ್ತು ಎನ್ನುವುದು ಸಾಮಾನ್ಯಜ್ಞಾನ. ಅವರಿಗೆ ಸಿಗುತ್ತಿದ್ದ ಗೌರವದಲ್ಲಾಗಲೀ, ಪಾತ್ರದಲ್ಲಾಗಲೀ ಅಥವಾ ಭತ್ಯೆಯಲ್ಲಾಗಲೀ ಎಳ್ಳಷ್ಟೂ ಸಮಾನತೆ ನುಸುಳಿರಲಿಲ್ಲ. ಆದರೆ ಈಗ ಪಾಶ್ಚಾತ್ಯ ರಂಗಭೂಮಿ ಊಹಿಸಲಸಾಧ್ಯವಾದ ಬದಲಾವಣೆ ಕಂಡುಕೊಂಡಿದೆ. ಅಲ್ಲಿ ರಂಗಭೂಮಿ ಕೇವಲ ಹವ್ಯಾಸ ಅಥವಾ ಮನರಂಜನಾ ಮಾಧ್ಯಮವಾಗಿ ಉಳಿದಿಲ್ಲ. ಬದಲಾಗಿ ಉದ್ಯಮವಾಗಿದೆ ಮತ್ತು ರಂಗಕರ್ಮಿಗಳಲ್ಲಿ ವೃತ್ತಿಪರತೆ ಮತ್ತು ಕಾರ್ಯತತ್ಪರತೆ ಅಗಾಧವಾಗಿ ಬೆಳೆದಿದೆ. ಹಾಗಾಗಿ ಮಹಿಳೆ ಮತ್ತು ಪುರುಷ ರಂಗಕರ್ಮಿಗಳ ಅಂತರ ಬಹಳಷ್ಟು ಕಡಿಮೆ ಯಾಗಿದೆ ಎಂದೇ ಹೇಳಬಹುದು. ಇಲ್ಲಿ ಉದ್ಯಮ ಎಂದರೆ ಆರ್ಥಿಕ ಉದಾರೀಕರಣ ಮತ್ತು ಜಾಗತೀಕರಣದ ಛಾಯೆಯಲ್ಲಿ ಕೃತಕವಾಗಿ ಉಸಿರಾಡುವ ಕೈಗೊಂಬೆಯಲ್ಲ ಎನ್ನುವುದನ್ನು ಸ್ಪಷ್ಟಪಡಿಸುತ್ತೇನೆ. ಇಲ್ಲಿ ಉದ್ಯಮ ಸೂಚಿಸುವುದು ಪ್ರಚಲತೆ, ವ್ಯಾಪಕತೆ, ಹಾಗೂ ಗಂಭೀರ ಕಾರ್ಯತತ್ಪರತೆಯನ್ನು ಮಾತ್ರ.



ಯಾಕೆಂದರೆ ಯಾವುದೇ ಕಲಾ ಮಾಧ್ಯಮ ಉದ್ಯಮವಾದರೆ ಅದು ಕಲೆಯಾಗಿ ಉಳಿಯಲಾರದು.

ಇನ್ನು ಭಾರತದ ಅಂದಿನ ಪರಿಸ್ಥಿತಿ ಪಾಶ್ಚಾತ್ಯರಿಗಿಂತ ಭಿನ್ನವಾಗಿರಲಿಲ್ಲ. ಪಾರ್ಸಿ ಶೈಲಿಯ ಕಂಪೆನಿ ನಾಟಕಗಳಲ್ಲಿ ಮಹಿಳೆಯರು ಅಭಿನಯಿಸ ತೊಡಗಿದರೂ ಅವರು ಜನಾಕರ್ಷಕ ಹಾಗೂ ಮಾಲೀಕರ ಭೌತಿಕ ಸರಕುಗಳಾಗಿದ್ದರು. ಆದರೂ ಇದಕ್ಕೆ ಅಪವಾದವೆಂಬಂತೆ ಕೆಲವು ಉದಾಹರಣೆಗಳು ಸಿಗಬಹುದು. ಆದರೆ ಯಾವಾಗ ನಾಟಕ ಕಂಪೆನಿಗಳು ಕೀಳು ಮನರಂಜನೆಯನ್ನು ಅಳವಡಿಸಿಕೊಂಡಿತೋ ಆಗ ಮಹಿಳೆ ಅಕ್ಷರಶಃ ಮಾನವ ಚೌಕಟ್ಟಿನಿಂದ ಹೊರಗುಳಿದಳು. ಆದರೆ 70ರ ಶತಕದ ರಂಗಚಳವಳಿ, ಮಹಿಳಾಪರ, ಜನಪರ ಚಳವಳಿಗಳಿಂದ ಸಾಮಾಜಿಕ ವಾತಾವರಣದಲ್ಲಿ ಬಹುದೊಡ್ಡ ಬದಲಾವಣೆ ಕಂಡಿತು. ರಂಗಭೂಮಿ ಇಡೀ ಸಮಾಜವನ್ನು ಚಿಕಿತ್ಸಕ ದೃಷ್ಟಿಯಿಂದ ನೋಡಬಯಸಿದ ಕಾಲವದು. ಆದರೆ ಎಲ್ಲೋ ಒಂದು ಕಡೆ ಸಾಮಾಜಿಕ ಸಮಾನತೆ, ವರ್ಗ ಸಮಾನತೆ ಸಾಧಿಸುವ ತವಕದಲ್ಲಿ ಲಿಂಗ ಸಮಾನತೆ ಮೂಲೆಗುಂಪಾಯಿತೆನಿಸುತ್ತದೆ. ಬಹಳಷ್ಟು ಚೇತೋಹಾರಿ ರಂಗಕೃತಿಗಳು, ಪ್ರಯೋಗಗಳು ಬಂದರೂ ಮಹಿಳಾ ಪರ ಧ್ವನಿ ಎತ್ತಿದ ಉದಾಹರಣೆಗಳೆಲ್ಲಿವೆ? ಮಹಿಳೆಯರು ರಂಗ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡರೂ ಪುರುಷರ ಸರಿ ಸಮಾನಕ್ಕೆ ನಿಲ್ಲಲು ಸಾಧ್ಯವಾಗಿದೆಯೇ? ಭಾರತದ ಇಂದಿನ ಪರಿಸ್ಥಿತಿ ಪಾಶ್ಚಾತ್ಯರಿಗಿಂತ ಬೇರೆಯಾಗಿದ್ದರೂ ಅವರ 'ಪ್ರೊಫೆಶನಲಿಸಮ್' ಅನ್ನು ನಮ್ಮಲ್ಲಿ ತರಲು ಸಾಧ್ಯವಾದೇ ಇರುವುದು ಮತ್ತು ಇಲ್ಲಿನ ಒಟ್ಟು ಸಾಮಾಜಿಕ ಸ್ಥಿತಿಗತಿ ರಂಗಭೂಮಿಯ ಮೇಲೆ ತನ್ನ ಪ್ರಭಾವ

ಬೀರುತ್ತಿರುವುದರಿಂದ ಇದು ಸಾಧ್ಯವಾಗಿಲ್ಲ ಎಂದೆನ್ನ ಬಹುದೇನೋ. ಇದಕ್ಕಿಂತ ಮುಖ್ಯವಾಗಿ ಭಾರತೀಯ ರಂಗಭೂಮಿ ಎಷ್ಟರ ಮಟ್ಟಿಗೆ ಆಂತರಿಕ ಮತ್ತು ಸೇವಾಭದ್ರತೆ ಒದಗಿಸುತ್ತದೆ ಅನ್ನುವುದು ನಮ್ಮ ಮುಂದಿರುವ ಮೂಲಭೂತ ಪ್ರಶ್ನೆ. ಈಗಿನ ಭಾರತೀಯ ವಿದ್ಯಮಾನದಲ್ಲಿ ಕಲಾಮಾಧ್ಯಮವನ್ನು ವೃತ್ತಿಯಾಗಿಸಿಕೊಂಡವರು ಬಹಳಷ್ಟು ಸಮಸ್ಯೆಗಳೊಂದಿಗೆ ಮುಖಾಮುಖಿ ಯಾಗುತ್ತಿದ್ದಾರೆ. ಅದು ರಂಗಭೂಮಿ ಇರಲಿ, ಸಿನೆಮಾ ಇರಲಿ, ಅಥವಾ ಇನ್ನಾವುದೇ ಕಲೆಗಳಿರಲಿ, ಮೇಲ್ನೋಟಕ್ಕೆ ಸಮಸ್ಯೆಗಳು ಬೇರೆಯಾದರೂ ಅವುಗಳ ಮೂಲ ಸ್ವರೂಪ ಒಂದೇ. ಅದರಲ್ಲೂ ಮಹಿಳಾ ಕಲಾವಿದರ, ತಂತ್ರಜ್ಞರ ಸ್ಥಿತಿಯನ್ನು 50–60 ವರ್ಷ ಹಿಂದಿನ ಪರಿಸ್ಥಿತಿಗೆ ಹೋಲಿಸಿದರೆ ಹೇಳುವಂತಹ ವ್ಯತ್ಯಾಸ ಕಾಣಸಿಗದು. ಕರ್ನಾಟಕದಲ್ಲಿ ಮಹಿಳಾ ರಂಗಕರ್ಮಿಗಳೆಂದು ಗುರುತಿಸಲ್ಪಡುವ ಕೆಲವೇ ಕೆಲವರು ನಿಲ್ಲಲು ಸಾಧ್ಯವಾಗಿದ್ದು ವೈಯಕ್ತಿಕ ಸಾಮರ್ಥ್ಯದೊಂದಿಗೆ, ಅವರ ಕೌಟುಂಬಿಕ ಹಿನ್ನೆಲೆಯಿಂದ ಎನ್ನುವುದನ್ನು ಮರೆಯುವ ಹಾಗಿಲ್ಲ. ಯಾವಾಗ ಇಡೀ ಸಮಾಜದ ದೃಷ್ಟಿ ಬದಲಾಗುತ್ತದೋ ಆಗ ಮಾತ್ರ ರಂಗಭೂಮಿಯಲ್ಲೂ ಹೊಸ ನೆಲೆ ಕಂಡುಕೊಳ್ಳಲು ಸಾಧ್ಯ. ಇದರ ಜೊತೆಜೊತೆಗೆ ವೃತ್ತಿಪರತೆ ಪ್ರತಿಯೊಬ್ಬ ರಂಗಕರ್ಮಿಯಲ್ಲಿ ಯಾವುದೇ ಭೇದವಿಲ್ಲದೇ ಜಾಗೃತವಾದಾಗ ಮಾತ್ರ ಬದಲಾವಣೆ ಮತ್ತು ಬೆಳವಣಿಗೆ ನಿರಂತರವಾಗುತ್ತದೆ. ಇಲ್ಲವಾದರೆ ಅದೇ ದೌರ್ಜನ್ಯ, ದಬ್ಬಾಳಿಕೆ ಶೋಷಣೆ ನಿರಾತಂಕವಾಗಿ ಸಾಗುತ್ತದೆ.

ಇದೆಲ್ಲದಕ್ಕಿಂತ ಮುಖ್ಯವಾಗಿ ರಂಗಭೂಮಿ ಮಹಿಳೆಗೆ ಬೇರೆಯೇ ಆದ ಸಾಧ್ಯತೆ ನೀಡಿದೆ. ಅದೇನೆಂದರೆ, ಸಮಾಜ ಮಹಿಳೆಯನ್ನು ಕೆಲವು ಸ್ತ್ರೀ ಲಕ್ಷಣಗಳೊಂದಿಗೆ ಸಮೀಕರಿಸುತ್ತದೆ. ಅಂದರೆ ಒಬ್ಬ ಮಹಿಳೆ ನಾಚಿಕೆ, ಮೃದುತನ, ಸಹನೆ, ಸೌಂದರ್ಯ ಮುಂತಾದ ಗುಣಗಳನ್ನು ಹೊಂದಿರಬೇಕು ಎನ್ನುವುದು ಒಟ್ಟು ಸಮಾಜದ ಆಶಯ. ಮತ್ತು ಈ ಸಮಾಜ ಸ್ತ್ರೀಯನ್ನು ಸೌಂದರ್ಯಯುತ ವಸ್ತುವಾಗಿ ನೋಡ ಬಯಸುತ್ತದೆ. ಆದರೆ ರಂಗಭೂಮಿ ಇದಕ್ಕೆ ವಿರುದ್ಧವೆಂಬಂತೆ ಮಹಿಳೆಯ ಈ ಯಾವ ಗುಣಲಕ್ಷಣವನ್ನೂ ಬಯಸದೆ ಮಾನವತಾನೆಲೆಯಲ್ಲಿ ಸಮಾನತೆಯನ್ನು ಕಲ್ಪಿಸಿದೆ ಎನ್ನುವುದು ಹೇಳಲೇಬೇಕಾದ ಅಂಶ. ಇದಕ್ಕೆ ಪೂರಕವಾಗಿ ಕರ್ನಾಟಕ ವೃತ್ತಿ ರಂಗಭೂಮಿಯ ಇತಿಹಾಸದ ಪುಟಗಳನ್ನು ನೋಡ ಹೊರಟರೆ, ಗುಳೇದಗುಡ್ಡದ 'ಯಲ್ಲೂಬಾಯಿ' ವೃತ್ತಿ ಕಂಪೆನಿಗಳ ಮೊದಲ ಮಹಿಳಾ ಕಲಾವಿದೆ ಎಂದು ತಿಳಿದು ಬರುತ್ತದೆ. ಆದರೆ ಇದಕ್ಕಿಂತ ಮೊದಲೇ ಪಾಪಸಾನೆಯವರ ಸ್ತ್ರೀ ನಾಟಕ ಮಂಡಳಿ ಅಸ್ತಿತ್ವದಲ್ಲಿದ್ದು, 'ಹರಿಶ್ಚಂದ್ರ' , 'ಪ್ರಭಾವತಿ ದರ್ಬಾರು' ಮುಂತಾದ ನಾಟಕಗಳನ್ನಾಡುತ್ತಿದ್ದರೆಂದೂ ಕೆಲ ಇತಿಹಾಸಕಾರರು ಹೇಳಿದ್ದಾರೆ. ತದನಂತರದಲ್ಲಿ ಕಾಣಿಸಿಕೊಂಡ ಬಚ್ಚಸಾನೆಯವರ 'ಮಹಿಳಾ ನಾಟಕ ಮಂಡಳಿ', ಗಂಗೂಬಾಯಿ ಯವರ 'ಶ್ರೀಕೃಷ್ಣ ನಾಟಕ ಮಂಡಳಿ', ಅಂಬುಜಮ್ಮ ಅವರ 'ಶ್ರೀ ಸ್ತ್ರೀ ನಾಟಕ ಮಂಡಳಿ', ಸೋನುಬಾಯಿ ದೊಡ್ಡಮನಿ ಯವರ 'ನೂತನ ಸಂಗೀತ ನಾಟಕ ಮಂಡಳಿ', ರೆಹಮಾನವ್ವ ಅವರ 'ಶ್ರೀ ಲಲಿತಕಲಾ ನಾಟ್ಯ ಸಂಘ' ಮಳವಳ್ಳಿ ಸುಂದರಮ್ಮನವರ ನಾಟಕ ತಂಡ, ಬೆಂಗಳೂರಿನ 'ಸರಸ್ವತಿ ನಾಟಕ ಮಂಡಳಿ', 'ಗಾಯತ್ರಿ ಸ್ತ್ರೀ ನಾಟಕ ಮಂಡಳಿ', 'ಅಕ್ಕಮಹಾದೇವಿ ಕೃಪಾಪೋಷಿತ ನಾಟಕ ಸಭಾ' ಹೀಗೆ ಹಲವಾರು ಮಹಿಳಾ ನಾಟಕ ಕಂಪೆನಿಗಳು ಇತರ ಕಂಪೆನಿ ಗಳಿಗೂ ಮಿಗಿಲಾದ ಜನಮನ್ನಣೆಗಳಿಸಿತು ಮತ್ತು ಕರ್ನಾಟಕ ಮಾತ್ರವಲ್ಲದೆ ಮರಾಠ ನೆಲದಲ್ಲಿಯೂ ಕನ್ನಡ ನಾಟಕ ಪ್ರದರ್ಶನ ನೀಡಿತ್ತು ಎನ್ನುವುದರ ಬಗ್ಗೆ ದಾಖಲೆಗಳಿವೆ.

ಇವು ಕೆಲವು ಕಂಪನಿಗಳಾದರೆ ಇನ್ನು ತಮ್ಮ ಅಭಿನಯ, ಮಾಲೀಕತ್ವ ಮತ್ತು ಇತರೆ ಕ್ಷೇತ್ರದಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸಿದವರಲ್ಲಿ ಸುಂದರಮ್ಮ, ಸ್ವರ್ಣಮ್ಮ, ಮೋಹನ್ ಕುಮಾರಿ, ಜುಬೇದಾಬಾಯಿ ಸವಣೂರ, ಲಲಿತಮ್ಮ, ಲಕ್ಷ್ಮೀಬಾಯಿ, ಬಿ.ಜಯಮ್ಮ, ಆದವಾನಿ ಲಕ್ಷ್ಮೀದೇವಿ, ನಾಗರತ್ನಮ್ಮ, ಏಣಗಿ ಲಕ್ಷ್ಮೀಬಾಯಿ, ಮರಿಯಮ್ಮ, ಸೋಹನ್ ಕುಮಾರಿ, ಚಿಂದೋಡಿ ಲೀಲಾ ಮುಂತಾದವರು ಪ್ರಮುಖರು.

ಈ ಮೇಲಿನದು ವೃತ್ತಿ ರಂಗಭೂಮಿಯಾದರೆ ಇನ್ನು ಹವ್ಯಾಸೀ ರಂಗಭೂಮಿಯಲ್ಲಿ ಪ್ರೇಮಾ ಕಾರಂತ್, ಬಿ. ಜಯಶ್ರೀ, ಆರ್.ಟಿ.ರಮಾ, ಉಮಾಶ್ರೀ, ಅರುಂಧತಿ ನಾಗ್, ಮಾಲತಿ.ಕೆ., ಹಾಗೂ ರಾಷ್ಟ್ರೀಯ ನಾಟಕಶಾಲೆ, ನೀನಾಸಂ ಮುಂತಾದ ರಂಗಶಿಕ್ಷಣ ಕೇಂದ್ರದಿಂದ ಹೊರಬಂದ ಅದೆಷ್ಟೋ ನಟಿಯರು, ತಂತ್ರಜ್ಞರು ನಾಡಿನ ಉದ್ದಗಲ ರಂಗಭೂಮಿಯ ಎಲ್ಲಾ ವಿಭಾಗಗಳಲ್ಲಿ ಯಾವುದೇ ತಾರತಮ್ಯವಿಲ್ಲದೇ ಕೆಲಸಮಾಡಿದ್ದಾರೆ ಹಾಗೂ ಮಾಡುತ್ತಿದ್ದಾರೆ. ಇದು ರಂಗಭೂಮಿಯ ಹೆಗ್ಗಳಿಕೆ....

ಇಲ್ಲಿ ಪ್ರಸ್ತಾಪವಾದ ವಿಷಯಗಳು ಮತ್ತು ಹೆಸರುಗಳು ಅತ್ಯಲ್ಪವೇ ಸರಿ. ಈ ಲೇಖನದಲ್ಲಿ ಬಿಟ್ಟುಹೋದ ಮತ್ತು ಹೇಳಲೇ ಬೇಕಾದ ಅಂಶಗಳು ಬಹಳಷ್ಟಿವೆ. ಹಾಗಾಗಿ ಈ ಬರವಣಿಗೆ ಬದಲಾವಣೆ ತರಬಲ್ಲದು ಎನ್ನುವ ಮೂಢನಂಬಿಕೆ ನನಗಿಲ್ಲ. ಆದರೆ ಈ ವಿಷಯ ಒಂದಷ್ಟು ಚರ್ಚೆಗೆ ಗ್ರಾಸವಾಯಿತೆಂದರೆ ನನ್ನ ಈ ಪುಟ್ಟ ಕೆಲಸ ಸಾರ್ಥಕವಾದಂತೆ.

❑

ನೆನೆಯುವರೇನೇ ನಿನ್ನನ್ನು?


ನಗುತಲಿದ್ದರೆ ನಗುವಿನ ಹಿಂದೆಯೂ ಏನೋ ಇದೆಯೆಂದು
ನಿರ್ಮಲ ಮನಸಿನ ಒಳಗಡೆ ಏನೋ ಅಡಗಿರಬಹುದೆಂದು
ಮಾತನಾಡದೆ ಇದ್ದರೂ ಮೌನದೇ ಮಾತನಾಡ್ವೆ ಎಂದು
ತಿಳಿದವರ್‍ಯಾರೆ ನೀರೆ ನಿನ್ನಯ ಅಂತರಂಗವನ್ನು

ಕಳೆವವರ್‍ಯಾರೆ ನಿನ್ನ ನೋವಿನ ಅಂಧಕಾರವನ್ನು
ನೆನೆಯುವರೇನೆ ನಿನ್ನಯ ತಾಳ್ಮೆಯ ಮಮತೆಯ ಗುಣವನ್ನು
ಕರೆಯುವರೇನೇ ಎಲ್ಲ ಒಳಿತಿಗೂ ನೀ ಕಾರಣವೆಂದು
ಎಲ್ಲ ಕರೆದರು ಅನಿಷ್ಟಕೆಲ್ಲ ನೀನೇ ಹೊಣೆಯೆಂದು

ಹುಟುವಾಗಲೇ ಕಷ್ಟವ ಹೊತ್ತೆ, ಹುಟ್ಟಿದ ಕ್ಷಣವೇ ಕಷ್ಟವ ಹೆತ್ತೆ
ಎಲ್ಲ ಬಾರವನು ನೀನೆ ಹೊತ್ತೆ. ಜಗದ ಮುನ್ನಡೆಗೆ ಕೊಡುಗೆಯನಿತ್ತೆ
ದಾರಿಯ ತೋರಲು ಬೆಳಕನಿತ್ತೆ. ಕತ್ತಲೆಯಲ್ಲಿ ನೀನೇ ಕುಳಿತೆ
ಖುಷಿಯ ನೀಡಲು ದುಃಖವ ಹೊತ್ತೆ, ದುಃಖಹೋಗಿಸಲು ನಿನ್ನನೇ ತೆತ್ತೆ.

■ ಪವಿತ್ರ

ಕಾರ್ಪೋರೇಟ್ ವಲಯದಲ್ಲಿ ಮಹಿಳೆಯ ಮುಂದಿರುವ ಸವಾಲುಗಳು



■ ಚಂದ್ರಮತಿ ಸೋಂದಾ



ಭಾರತದಲ್ಲಿ ಮಹಿಳೆಯರು ಕಾರ್ಪೋರೇಟ್ ಜಗತ್ತಿಗೆ ಕಾಲಿಟ್ಟುದು ಸುಮಾರು ಮೂರು ದಶಕಗಳಿಂದೀಚೆಗೆ. ಮಹಿಳೆಗೆ ದೊರೆತ ಶಿಕ್ಷಣ ಸವಲತ್ತಿನಿಂದ ಏಳೆಂಟು ದಶಕಗಳಿಂದ ಅವಳು ಉದ್ಯೋಗ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದರೂ ಅವಳ ಕೆಲಸ ಮನೆಯ ಕೆಲಸದ ವಿಸ್ತರಣೆ ಎನ್ನುವಂತಿತ್ತು. ಹೆಚ್ಚಾಗಿ ಅವಳು ಸೇವಾವಲಯಕ್ಕೆ ಸೀಮಿತಳಾಗಿದ್ದಳು. ಕಾರ್ಪೋರೇಟ್ ವಲಯ ಏನಿದ್ದರೂ ಪುರುಷನ ಕ್ಷೇತ್ರ ಎನ್ನುವಂತಾಗಿತ್ತು. ಮೊದಲ ಹಂತದಲ್ಲಿ ಕುಟುಂಬದ ಪುರುಷ ಸದಸ್ಯರು ಹುಟ್ಟುಹಾಕಿದ್ದ ಸಂಸ್ಥೆಯನ್ನು ಮಹಿಳೆಯರು ಮುನ್ನಡೆಸಿದ್ದು ಕಂಡುಬರುತ್ತದೆ. ನಿಧಾನವಾಗಿ ಮಹಿಳೆಯರು ಮಹಿಳೆಗೆ ನಿಷೇಧವಾಗಿದ್ದ ಅಥವಾ ಅವಳನ್ನು ದೂರವಿರಿಸಿದ್ದ ವಲಯವನ್ನು ಸವಾಲಾಗಿ ಸ್ವೀಕರಿಸಿ ಸಫಲರಾಗುವ ಮೂಲಕ ಇತಿಹಾಸ ನಿರ್ಮಿಸಿದರು. ಹೀಗೆ ಸಾಧನೆ ಮಾಡಿದ ಮಹಿಳೆಯರ ದಾರಿ ಸುಲಭವಾದುದಾಗಿರಲಿಲ್ಲ. ಹಿಂದಿಗಿಂತ ಈಗ ಕಾರ್ಪೋರೇಟ್ ವಲಯದಲ್ಲಿ ಕೆಲಸ ಮಾಡುವ ಮಹಿಳೆಯರ ಸಂಖ್ಯೆ ಹೆಚ್ಚಿದೆ ನಿಜ. ಆದರೆ ಸಮಸ್ಯೆಗಳು ವಿಭಿನ್ನ ರೂಪದಲ್ಲಿ ವೃದ್ಧಿಸುತ್ತಿವೆ.

ಪ್ರಸ್ತುತ ಹಲವು ಬಗೆಯ ಉದ್ಯೋಗಗಳು ಕಾರ್ಪೋರೇಟ್ ವಲಯದ ವ್ಯಾಪ್ತಿಗೆ ಸೇರುತ್ತವೆ. ಅವುಗಳಲ್ಲಿ ಉದ್ಯಮ, ಪ್ರಸಾರ ಮಾಧ್ಯಮ, ವಿಮಾನಯಾನ ಮತ್ತು ಮಾಹಿತಿ ತಂತ್ರಜ್ಞಾನ ಕ್ಷೇತ್ರಗಳು ಶೀಘ್ರಗತಿಯಲ್ಲಿ ಬೆಳೆಯುತ್ತಿವೆ. ಆದಾಗ್ಯೂ, ಇತರ ದೇಶಗಳಿಗೆ ಹೋಲಿಸಿದರೆ ಭಾರತದಲ್ಲಿ ಕಾರ್ಪೋರೇಟ್ ವಲಯದಲ್ಲಿ ಕೆಲಸ ಮಾಡುತ್ತಿರುವ ಮಹಿಳೆಯರ ಪ್ರಮಾಣ ಕಡಿಮೆಯೇ. 2011ರ 'ವಿಶ್ವ ಆರ್ಥಿಕ ಫೋರಂ'ನ ಸ್ತ್ರೀ–ಪುರುಷ ಉದ್ಯೋಗಿಗಳ ನಡುವಿನ ಅಂತರ ಕುರಿತ ವರದಿಯ ಪ್ರಕಾರ ಒಟ್ಟಾರೆ ಮಹಿಳಾ ಉದ್ಯೋಗಿಗಳ ಪ್ರಮಾಣ ಶೇ.23 ಮಾತ್ರ. ಒಂದು ಕಾಲಕ್ಕೆ ಕಾರ್ಪೋರೇಟ್ ವಲಯಕ್ಕೆ ಮಹಿಳೆಗೆ ಪ್ರವೇಶವಿರಲಿಲ್ಲ. ಈಗ ಮಹಿಳೆಯರಿಗೆ ಅವಕಾಶ ದೊರೆತಿದೆ ಎನ್ನುವುದು ನಿಜವಾದರೂ ಮಹಿಳೆ ಅಲ್ಲಿ ಎದುರಿಸುತ್ತಿರುವ ಸವಾಲು ಬಹಳ ಸಂಕೀರ್ಣವಾದುವು. ಕೆಲವು ಸಮಸ್ಯೆಗಳು ಎಲ್ಲ ಕ್ಷೇತ್ರದಲ್ಲಿಯೂ ಸಮಾನವಾದುವು. ಇನ್ನು ಕೆಲವು ಆಯಾ ಕ್ಷೇತ್ರಕ್ಕೆ ಸೀಮಿತವಾದುವು. ಉದ್ಯಮ ಯಾವುದೇ ಆಗಿರಲಿ, ಪುರುಷಪ್ರಧಾನ ಧೋರಣೆ ಅಲ್ಲಿ ಕೆಲಸ ಮಾಡುತ್ತದೆ. ಹಾಗಾಗಿ, ಮಹಿಳೆಯ ದಾರಿ ಸುಗಮವಾದುದಲ್ಲ. ಸಾಂಪ್ರದಾಯಿಕ ಮನೋಭಾವ, ಸಮಾಜೋ–ಸಾಂಸ್ಕೃತಿಕ ಮೌಲ್ಯಗಳು, ನೈತಿಕತೆ, ತಾಯ್ತನ, ಅಭದ್ರತೆ, ಸೀಮಿತ ಚಲನಶೀಲತೆ ಇವೆಲ್ಲವೂ ಅವಳು ವೃತ್ತಿಯಲ್ಲಿ ಔನ್ನತ್ಯ ಸಾಧಿಸಲು ಇರುವ ಅಡ್ಡಿ–ಆತಂಕಗಳು.


ಸಾಮಾಜಿಕ ತಡೆಗೋಡೆಗಳು

ಮಹಿಳೆಯ 'ಕೆರಿಯರ್'ಷರತ್ತು ಮುಕ್ತವಲ್ಲ. ಕಾರ್ಪೋರೇಟ್ ವಲಯದಲ್ಲಿ ಕೆಲಸ ಮಾಡುವ ಮಹಿಳೆಯರೂ ಇತರ ಮಹಿಳಾ ಉದ್ಯೋಗಿಗಳಂತೆ ಕೌಟುಂಬಿಕ, ಸಾಮಾಜಿಕ ಎರಡೂ ನೆಲೆಯಲ್ಲಿ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಜೊತೆಗೆ ಇಲ್ಲಿನ ಕೆಲಸ ನಿಗದಿತ ಅವಧಿಗೆ ಸೀಮಿತವಲ್ಲ. ಹೆಚ್ಚಿನ ಸಮಯವನ್ನು ಇವು ಬೇಡುತ್ತವೆ. ಪುರುಷನಂತೆ ಮಹಿಳೆ ಕುಟುಂಬದ ಹೊಣೆಯನ್ನು ವರ್ಗಾಯಿಸಿ ಅಥವಾ ಬದಿಗೊತ್ತಿ ವೃತ್ತಿಗೆ ಪೂರ್ಣವಾಗಿ ತನ್ನನ್ನು ತೆತ್ತುಕೊಳ್ಳಲು ಸಾಧ್ಯವಾಗುವ ಸಾಮಾಜಿಕ ಪರಿಸರ ನಿರ್ಮಾಣವಾಗಿಲ್ಲ. ಈಗಲೂ ಮನೆ ಮತ್ತು ಕುಟುಂಬ ನಿರ್ವಹಣೆ ಮಹಿಳೆಯದೇ ಎಂದು ಕುಟುಂಬ–ಸಮಾಜಗಳು

ಭಾವಿಸುತ್ತವೆ. ಈಗಾಗಲೇ ಚಾಲ್ತಿಯಲ್ಲಿರುವ ಮಹಿಳಾ ಮಾದರಿಯ ಅನುಸರಣೆಯ ನಿರೀಕ್ಷೆ ಇರುತ್ತದೆ. ಇದರಿಂದಾಗಿ ಮಹಿಳೆ ಸಂಪೂರ್ಣವಾಗಿ ತನ್ನ ಸಾಮರ್ಥ್ಯವನ್ನು ವೃತ್ತಿಯಲ್ಲಿ ವಿನಿಯೋಗಿಸಲು ಸಾಧ್ಯವಾಗದೆ, ಅಸಮರ್ಥಳು ಎನ್ನುವ ಆಪಾದನೆಗೆ ಗುರಿಯಾಗುವ ಸಂದರ್ಭವಿದೆ.

ತಾಯ್ತನ ಮಹಿಳೆಯ ಸ್ವಂತ ಆಯ್ಕೆಯದಲ್ಲ. ಕುಟುಂಬ, ಸಮಾಜಗಳು ಅವಳನ್ನು ತಾಯಿಯಾಗಲು ಒತ್ತಾಯಿಸುತ್ತವೆ. ಮಹಿಳೆಗೆ ಉದ್ಯೋಗ ನೀಡುವ ಸಂಸ್ಥೆಗಳು ಮಹಿಳೆಯ ಉದ್ಯೋಗಪರತೆಯನ್ನು ಬಯಸುತ್ತವೆಯೇ ವಿನಾ ಅವಳ ತಾಯ್ತನಕ್ಕೆ ಅಗತ್ಯವಾದ ಅನುಕೂಲಗಳನ್ನು ಒದಗಸುವುದು ತಮ್ಮ ಹೊಣೆಗಾರಿಕೆ ಎಂದು ತಿಳಿಯುವುದಿಲ್ಲ. ಪ್ರಜನತ್ವ ವೈಯಕ್ತಿಕವಾದುದು ಎಂದು ತಿಳಿಯಲಾಗುತ್ತದೆಯೇ ವಿನಾ ಅದೊಂದು ಸಾಮಾಜಿಕ ಚಟುವಟಿಕೆ ಎಂದು ಸಮಾಜ, ಸಂಸ್ಥೆಗಳು ಭಾವಿಸುವುದಿಲ್ಲ. ಉದಾ: ವಿಮಾನ ಚಾಲಕಿಯರು ಮತ್ತು ಗಗನ ಸಖಿಯರು ತಾಯಿಯಾಗುವ ವೇಳೆ ತಮ್ಮ ಕರ್ತವ್ಯ ನಿರ್ವಹಿಸುವಂತಿಲ್ಲ. ಆರೋಗ್ಯದ ದೃಷ್ಟಿಯಿಂದ ಅವರು ಕಡ್ಡಾಯವಾಗಿ ರಜೆ ಹಾಕುವಂತೆ ಕಾನೂನು ರಚಿಸಲಾಗಿದೆ. ಆದರೆ ಹೆರಿಗೆ ರಜೆಯ ಸವಲತ್ತು ಇತರರಂತೆ ಅವರಿಗೂ 135 ದಿನಗಳು ಮಾತ್ರ. ಗರ್ಭಿಣಿಯಾಗಿರುವಾಗಲೇ ಈ ರಜೆ ಮುಗಿದು ಹೋಗುತ್ತದೆ. ಆನಂತರ ಅವಳು ಸಂಬಳರಹಿತ ರಜೆಯನ್ನು ಪಡೆಯಬೇಕು. ಇಂಥ ತಾಪತ್ರಯವೇ ಬೇಡವೆಂದು ಮಗುವನ್ನು ದತ್ತು ಪಡೆದ ಮಹಿಳೆಗೆ ಅವಳು ಗರ್ಭ ಧರಿಸದ ಕಾರಣದಿಂದ ಮಗುವಿನ ಪಾಲನೆಗೆ ಹೆರಿಗೆ ರಜೆಯನ್ನು ನಿರಾಕರಿಸಲಾಯಿತು. 40ಕ್ಕೂ ಅಧಿಕ ಮಹಿಳೆಯರು ಕೆಲಸ ಮಾಡುವ ಸಂಸ್ಥೆಗಳಲ್ಲಿ ಮಕ್ಕಳ ಪಾಲನಾ ಕೇಂದ್ರವಿರಬೇಕೆನ್ನುತ್ತದೆ ಕಾನೂನು. ಎಷ್ಟು ಸಂಸ್ಥೆಗಳನ್ನು ಇದನ್ನು ಅನುಸರಿಸುತ್ತಿವೆ?

ಕೆಲವೊಮ್ಮೆ ವೃತ್ತಿಯ ಸಾಮರ್ಥ್ಯವನ್ನು ಉದ್ಯೋಗಿಯ ಕೆಲಸದಿಂದ ಅಳೆಯುವುದಿದೆ. ಮಹಿಳೆ ಹೆರಿಗೆ ರಜೆ ಮುಗಿಸಿ ಮರಳಿ ಕೆಲಸಕ್ಕೆ ಬಂದಾಗ ಅವಳು ಆ ಅವಧಿಯಲ್ಲಿ ಯಾವ ಸಾಧನೆ ಮಾಡಿದ್ದಾಳೆ ಎನ್ನುವುದನ್ನು ಸಾಬೀತುಪಡಿಸಲು ಸಾಧ್ಯವಾಗದೆ ಉದ್ಯೋಗ ಕಳೆದುಕೊಳ್ಳುವ ಸಂದರ್ಭವಿದೆ. (ಈ ಶತಮಾನದ ಮೊದಲ ದಶಕದಲ್ಲಿ ಪೂರ್ವ ಮತ್ತು ಮಧ್ಯ ಭಾರತದ ರಾಜ್ಯಗಳಲ್ಲಿ ಮಾಧ್ಯಮಗಳಲ್ಲಿ ಕೆಲಸ ಮಾಡುತ್ತಿದ್ದ ಮಹಿಳೆಯರು ಇಂಥ ಪರಿಸ್ಥಿತಿಯನ್ನು ಎದುರಿಸಿದ್ದರು)



ಅಭದ್ರತೆ

ಹಿಂದೆ ಮಹಿಳೆಗೆ ರಾತ್ರಿ ಪಾಳಿಯ ಕೆಲಸವನ್ನು ನಿರಾಕರಿಸಲಾಗಿತ್ತು. ಈಗ ಪತ್ರಿಕಾ ಮಾಧ್ಯಮ, ದೃಶ್ಯ ಮಾಧ್ಯಮ, ಮಾಹಿತಿ ತಂತ್ರಜ್ಞಾನ ಮುಂತಾದ ಹಲವಾರು ಕ್ಷೇತ್ರಗಳಲ್ಲಿ ಮಹಿಳೆಯರು ರಾತ್ರಿ ಪಾಳಿಯಲ್ಲಿ ಕೆಲಸ ಮಾಡಲು ನಿರ್ಬಂಧವಿಲ್ಲ, ನಿಜ. ಆದರೆ ಕೌಟುಂಬಿಕ ಜವಾಬ್ದಾರಿಯ ಜೊತೆಯಲ್ಲಿ ಇದನ್ನೂ ನಿಭಾಯಿಸುವುದು ಮಹಿಳೆಗೆ ಹೊರೆಯಾಗುತ್ತಿದೆ. ಮಕ್ಕಳ ಪಾಲನೆಯೂ ಸೇರಿದಂತೆ ಮನೆಯ ಹೆಚ್ಚಿನ ಕೆಲಸಗಳು ಮಹಿಳೆಯದೇ ಎನ್ನುವ ಸಾಂಪ್ರದಾಯಿಕ ಮನೋಭಾವದಲ್ಲಿ ಬದಲಾವಣೆ ಆಗದಿರುವುದರಿಂದ ಅವಳಿಗೆ ರಾತ್ರಿಯ ಪಾಳಿ ಸಮಸ್ಯೆಯನ್ನು ಸೃಷ್ಟಿಸುತ್ತಿದೆ. ಜೊತೆಗೆ, ಅಭದ್ರತೆಗೂ ಕಾರಣವಾಗಿದೆ.

ಬಿಪಿಓ ಮತ್ತು ಕಾಲ್ ಸೆಂಟರ್‌ಗಳಲ್ಲಿ ಮಹಿಳೆಯರು ರಾತ್ರಿ ಪಾಳಿಯಲ್ಲಿಯೂ ಕೆಲಸಮಾಡಬೇಕಾಗುತ್ತದೆ. ಅವರ ಭದ್ರತೆಗೆ ಕಂಪನಿಗಳು ಪ್ರಾಧಾನ್ಯ ನೀಡುವುದು ತೀರ ಕಡಿಮೆ. ಬೆಂಗಳೂರಿನಲ್ಲಿ ಬಿಪಿಓ ಆಗಿ ಕೆಲಸ ಮಾಡುತ್ತಿದ್ದ ಪ್ರತಿಭಾ ಎನ್ನುವ ಮಹಿಳೆಯ ಕೊಲೆಯಾದ ನಂತರದಲ್ಲಿ ಕೆಲವು ಮಾಹಿತಿ ತಂತ್ರಜ್ಞಾನ ಸಂಸ್ಥೆಗಳು ಮುನ್ನೆಚ್ಚರಿಕೆ ವಹಿಸುತ್ತಿವೆ. ಕೆಲವು ಸಂಸ್ಥೆಗಳು ಉದ್ಯೋಗಿಯ ಭದ್ರತೆಯ ಜವಾಬ್ದಾರಿಯನ್ನು ಹೊರಲು ನಿರಾಕರಿಸುವುದೂ ಇದೆ. ಪ್ರಸಾರ ಮಾಧ್ಯಮಗಳು ಮೊದಲಿನಿಂದಲೂ ರಾತ್ರಿ ಪಾಳಿಯ ಮಹಿಳಾ ಉದ್ಯೋಗಿಗಳ ವಿಷಯದಲ್ಲಿ ಹೆಚ್ಚಿನ ಕಾಳಜಿ ತೋರಿಸುತ್ತಿವೆ. ಅವರನ್ನು ಕರೆತರುವ, ಮರಳಿ ಕಳುಹಿಸುವ ವ್ಯವಸ್ಥೆಯನ್ನು ಸಾಧಾರಣವಾಗಿ ತಾವೇ ನಿರ್ವಹಿಸುತ್ತಿವೆ.

ಪೂರ್ವಗ್ರಹಗಳು

2010ರ ಒಂದು ಸಮೀಕ್ಷೆ ತಿಳಿಸುವಂತೆ ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಬಿಪಿಓ ವಲಯದ ಉದ್ಯೋಗಿಗಳಲ್ಲಿ ಸುಮಾರು ಮೂರನೆಯ ಒಂದರಷ್ಟು ಮಹಿಳೆಯರು. ಇಷ್ಟೊಂದು ಪ್ರಮಾಣದಲ್ಲಿ ಮಹಿಳೆ ಕೆಲಸ ಮಾಡುತ್ತಿದ್ದರೂ ಗುಂಪಿನ ಮುಂದಾಳತ್ವ ನೀಡಲು, ನಿರ್ಧಾರ ತೆಗೆದುಕೊಳ್ಳಲು ಅವಳಿಗೆ ಅವಕಾಶ ನೀಡುವುದು ತೀರ ಕಡಿಮೆ. ಇತರ ಕ್ಷೇತ್ರದಲ್ಲಿಯೂ ಇದು ಕಂಡುಬರುತ್ತದೆ. ಬಹುರಾಷ್ಟ್ರೀಯ ಕಂಪನಿಗಳಲ್ಲಿ, ದೊಡ್ಡ ದೊಡ್ಡ ಉದ್ಯಮಗಳಲ್ಲಿ ಸೀನಿಯರ್ ಮ್ಯಾನೇಜರ್ ಸ್ಥಾನದಲ್ಲಿ ಕುಳಿತಿರುವವರು ಹೆಚ್ಚಾಗಿ ಪುರುಷರು. ಮಹಿಳೆಗೆ ನಾಯಕತ್ವದ ಗುಣವಿಲ್ಲ, ಅವಳ ಮ್ಯಾನೇಜಿರಿಯಲ್ ಸ್ಕಿಲ್ ಸೊನ್ನೆ ಎನ್ನುವಂಥ ಭಾವನೆ ಸಾಮಾನ್ಯವಾದುದಾಗಿದೆ. ಅವಳ ವ್ಯಾವಹಾರಿಕ ಕೌಶಲ್ಯದ ಬಗೆಗೆ ಅಪನಂಬಿಕೆ, ಮಹಿಳೆ ಈ ಜವಾಬ್ದಾರಿಯನ್ನು ನಿಭಾಯಿಸಲಾರಳು ಎನ್ನುವ ಪೂರ್ವಗ್ರಹ, ಮಹಿಳೆಯ ನೇತೃತ್ವದಲ್ಲಿ ಕೆಲಸ ಮಾಡಲು ಹಿಂದೇಟು ಹಾಕುವ ಪುರುಷಶಾಹಿ ಮನೋಭಾವಗಳು ಇದಕ್ಕೆ ಕಾರಣ.

ಸಮಕಾಲೀನ ಸಮಾಜದ ಆಗುಹೋಗುಗಳಿಗೆ ಕನ್ನಡಿ ಹಿಡಿಯುತ್ತಿರುವ ಮಾಧ್ಯಮ ಕ್ಷೇತ್ರ ಇದಕ್ಕೆ ಹೊರತಲ್ಲ. ಕರ್ನಾಟಕದಲ್ಲಿ ಸಾಕಷ್ಟು ಕನ್ನಡ ಪತ್ರಿಕೆಗಳು ಹೊರಬರುತ್ತಿವೆ. ಬೆರಳೆಣಿಕೆಯ ಪತ್ರಿಕೆಗಳು ಮಹಿಳಾ ಸಂಪಾದಕತ್ವವನ್ನು ಹೊಂದಿವೆ. ಈಗ ಕನ್ನಡದಲ್ಲಿ 15ಕ್ಕೂ ಮಿಕ್ಕಿ ಟಿವಿ ವಾಹಿನಿಗಳಿವೆ. ಎಲ್ಲ ಕಡೆ ಪುರುಷರೇ ಅಧಿಕಾರದ ನೆಲೆಯಲ್ಲಿರುವವರು. ಪ್ರಧಾನ ಚರ್ಚೆಯ ಮುಂದಾಳತ್ವವೂ ಅವರದೇ. ರಾಜಕೀಯ ವಿಶ್ಲೇಷಣೆ, ಸುದ್ದಿ ವಿಶ್ಲೇಷಣೆಗಳಲ್ಲಿ ಪುರುಷರದೇ ಮೇಲುಗೈ.

ಆರ್ಥಿಕ ನೆರವಿಗೆ ಹಿಂಜರಿತ

ಇತರ ಕ್ಷೇತ್ರಗಳಿಗೆ ಹೋಲಿಸಿದರೆ ಉದ್ಯಮ ಕ್ಷೇತ್ರದಲ್ಲಿ ಮಹಿಳೆಯರ ಪ್ರಮಾಣ ತೀರ ಕಡಿಮೆ. ಮಹಿಳಾ ಉದ್ಯಮಿಗೆ ಸಾಲ ನೀಡಲು ಆರ್ಥಿಕ ಸಂಸ್ಥೆಗಳು ಹಿಂದೇಟು ಹಾಕುತ್ತವೆ. ಮಹಿಳೆಗೆ ಸಾಲ ನೀಡುವುದು

ತೊಂದರೆಗೆ ಕಾರಣವೆಂದು ಭಾವಿಸುತ್ತವೆ. ಒಮ್ಮೆ ಸಾಲ ನೀಡುವುದಾದರೂ ಹೆಚ್ಚಿನ ಭದ್ರತೆ ಕೇಳುತ್ತವೆ. ಮಹಿಳೆ ಸಮಯಕ್ಕೆ ಸರಿಯಾಗಿ ಸಾಲವನ್ನು ಮರುಪಾವತಿಸಲಾರಳು ಎಂದು ಹೇಳಲಾಗುತ್ತದೆ. ಆದರೆ ಗುಜರಾತಿನ ಮಹಿಳಾ ಸೇವಾ ಸಹಕಾರೀ ಬ್ಯಾಂಕ್‌ನಲ್ಲಿ ಸಾಲ ಪಡೆದ ಮಹಿಳೆಯರು ಮತ್ತು ಬಾಂಗ್ಲಾದೇಶಲ್ಲಿ ಮಹಮದ್ ಯೂನಸ್ ಯೋಜನೆಯಡಿಯಲ್ಲಿ ನಡೆಯುತ್ತಿರುವ ಬ್ಯಾಂಕ್‌ನಲ್ಲಿ ಸಾಲ ಪಡೆದ ಮಹಿಳೆಯರು ಸಾಲವನ್ನು ಪ್ರಾಮಾಣಿಕವಾಗಿ ಮರುಪಾವತಿಸುವ ಮೂಲಕ ಇದು ಸುಳ್ಳು ಎನ್ನುವುದನ್ನು ಸಾಬೀತುಪಡಿಸಿದ್ದಾರೆ. ಮಹಿಳೆಯ ಆರ್ಥಿಕ ಸಾಮರ್ಥ್ಯದ ಬಗೆಗಿನ ಅನುಮಾನ ಮತ್ತು ಅವಳ ವ್ಯಾವಹಾರಿಕತೆ ಕುರಿತ ಪೂರ್ವಗ್ರಹಗಳು ಅವಳ ವೃತ್ತಿಪರತೆಗೆ ಅಡ್ಡಿಯುಂಟುಮಾಡುತ್ತಿವೆ.

ಲೈಂಗಿಕ ಕಿರುಕುಳ

ಯಾವುದೇ ಉದ್ಯಮವೂ ಲೈಂಗಿಕ ಕಿರುಕುಳಮುಕ್ತ ಎನ್ನುವಂತಿಲ್ಲ. ಮಹಿಳೆ ಕೆಳ ಹಂತದ ಉದ್ಯೋಗಿಯಾಗಿರಲಿ ಅಥವಾ ಮೇಲಧಿಕಾರಿಯಾಗಿರಲಿ ಮಹಿಳೆಯನ್ನು 'ಲೈಂಗಿಕ ವಸ್ತು'ವಾಗಿ ಕಾಣುವ ಮನೋಭಾವದಲ್ಲಿ ವ್ಯತ್ಯಾಸವಿಲ್ಲ. ಸಹೋದ್ಯೋಗಿಗಳು, ಮೇಲಧಿಕಾರಿ ಎನ್ನುವ ಭೇದವಿಲ್ಲದೆ ಲೈಂಗಿಕ ಕಿರುಕುಳಕ್ಕೆ ಆಕೆ ಒಳಗಾಗಬಹುದು. ಆಕೆಯ ಸಾಮರ್ಥ್ಯ, ಪರಿಶ್ರಮಗಳು ಹಿನ್ನೆಲೆಗೆ ಸರಿದು ಅವಳ ಜೈವಿಕತೆಯ ಮೇಲೆ ಸವಾರಿ ಮಾಡುವ ವರ್ತನೆಯನ್ನು ಅವಳು ಎದುರಿಸಬೇಕಾಗುತ್ತದೆ. ಮಹಿಳೆಯನ್ನು ತಮ್ಮ ಲೈಂಗಿಕ ತೃಪ್ತಿಗೆ ಬಳಸಿಕೊಳ್ಳುವ ಪುರುಷನ ಹುನ್ನಾರಕ್ಕೆ ಬಲಿಯಾಗುವ ಭಯ ಮಹಿಳೆಯನ್ನು ಸದಾ ಕಾಡುತ್ತದೆ. ಮಹತ್ವಾಕಾಂಕ್ಷೆಯುಳ್ಳ ಮಹಿಳೆಯ ಬದುಕು ಸಾವಿನಲ್ಲಿ ಕೊನೆಯಾಗಿರುವ ಉದಾಹರಣೆಗಳು ಸಾಕಷ್ಟಿವೆ. ತೀರ ಇತ್ತೀಚಿನದು– ಗೀತಿಕಾ ಶರ್ಮ ಪ್ರಕರಣ. ಭಾರತೀಯ ವಾಯುಪಡೆಯಲ್ಲಿ ಸೇವೆ ಸಲ್ಲಿಸುತ್ತಿದ್ದ ಅಂಜಲಿ ಮಿಶ್ರ ತನ್ನ ಮೇಲಧಿಕಾರಿಯ ಲೈಂಗಿಕ ಕಿರುಕುಳದ ವಿರುದ್ಧ ದನಿ ಎತ್ತಿದ್ದರ ಪರಿಣಾಮವಾಗಿ ಆತ್ಮಹತ್ಯೆಗೆ ಶರಣಾಗಬೇಕಾಯಿತು. ಇಂಥ ಪ್ರಕರಣಗಳು ಸುದ್ದಿಯಾಗುತ್ತಲೇ ಇರುತ್ತವೆ.

ನಿರ್ಧಾರದ ಹಕ್ಕು

ಮಹಿಳೆಗೆ ಪ್ರಮುಖ ನಿರ್ಧಾರ ತೆಗೆದುಕೊಳ್ಳಲು ಸಾಧ್ಯವಾಗದು ಎನ್ನುವ ಭಾವನೆ ಪ್ರಚಲಿತವಾದುದು. ಉನ್ನತ ಸ್ಥಾನದಲ್ಲಿರುವ ಮಹಿಳೆ ತೆಗೆದುಕೊಳ್ಳುವ ನಿರ್ಧಾರದ ಬಗೆಗೆ ಅನುಮಾನ ವ್ಯಕ್ತವಾಗುತ್ತದೆ. ಒಮ್ಮೆ ಅವಳು ತೆಗೆದುಕೊಂಡ ನಿರ್ಧಾರದಿಂದ ವ್ಯತಿರಿಕ್ತ ಪರಿಣಾಮ ಉಂಟಾದಲ್ಲಿ ಅದನ್ನು ಜೈವಿಕ ನೆಲೆಯಲ್ಲಿ ನೋಡಲಾಗುತ್ತದೆಯೇ ವಿನಾ ಮಾನವ ಸಹಜ ತಪ್ಪು ಎಂದು ತಿಳಿಯುವುದಿಲ್ಲ. ಮಹಿಳೆಗೆ ಆಡಳಿತಾತ್ಮಕ ಅನುಭವ ಕಡಿಮೆ, ದೂರದೃಷ್ಟಿ ಇಲ್ಲವೆನ್ನುವ ಭಾವನೆ ಆಳವಾಗಿ ಬೇರೂರಿದೆ. ಈಗಲೂ ಕುಟುಂಬದೊಳಗೆ ನಿರ್ಧಾರದ ಹಕ್ಕು ಪುರುಷನದೇ ಆಗಿರುವಾಗ ಹೊರಜಗತ್ತು ಅದಕ್ಕಿಂತ ಭಿನ್ನ ಎಂದು ಭಾವಿಸುವಂತಿಲ್ಲ.

ಸೀಮಿತ ಚಲನಶೀಲತೆ

ಸಾಮಾಜಿಕ, ಕೌಟುಂಬಿಕ ಮತ್ತು ಜೈವಿಕ ಕಾರಣಗಳಿಂದ ಮಹಿಳೆಯ ಚಲನಶೀಲತೆ ಸೀಮಿತಗೊಂಡಿದೆ. ಸಮಾಜ ಮಹಿಳೆಯ ಚಲನಶೀಲತೆಯನ್ನು ಸೂಕ್ಷ್ಮವಾಗಿ ಗಮನಿಸುತ್ತದೆ. ಅವಳ ಚಲನಶೀಲತೆಯನ್ನು ಇದು ಪರೋಕ್ಷವಾಗಿ ನಿಯಂತ್ರಿಸುತ್ತದೆ. ಉನ್ನತ ಹುದ್ದೆಯಲ್ಲಿರುವ ವ್ಯಕ್ತಿ ಕಾರ್ಯಾರ್ಥ ಹೊರ ಊರುಗಳಿಗೆ ಹೋಗುವುದು, ಜನರನ್ನು ಭೇಟಿಯಾಗುವುದು, ತಂಗುವುದು ಅನಿವಾರ್ಯ. ಇವನ್ನೆಲ್ಲ ಮಹಿಳೆ ಮುಕ್ತವಾಗಿ ಮಾಡುವ ಪರಿಸರ ನಮ್ಮದಲ್ಲ. ಮಹಿಳೆ ಎನ್ನುವ ಕಾರಣಕ್ಕೆ ಅವಳ ಮೇಲೆ ಆಕ್ರಮಣ ಮಾಡುವ ಸಂದರ್ಭವೂ ಇರುತ್ತದೆ. ಎಲ್ಲ ಕಡೆ ಅಪರಾಧೀಕರಣ ಹೆಚ್ಚುತ್ತಿರುವುದು ಕೂಡ ಅವಳ ಚಲನಶೀಲತೆಗೆ ಅಡ್ಡಿಯಾಗಿದೆ. ಉದ್ಯಮಿ ಮಹಿಳೆ ಹೊಸ ವಹಿವಾಟುಗಳನ್ನು ಪ್ರಾರಂಭಿಸುವುದು ಅಷ್ಟೊಂದು ಸುಲಭದ್ದಲ್ಲ. ಆರ್ಥಿಕತೆಯಿಂದ ಮಾರುಕಟ್ಟೆಯವರೆಗೆ ಪುರುಷ ಕೇಂದ್ರಿತ ನಡವಳಿಕೆಗಳಿಗೇ ಪ್ರಾಧಾನ್ಯ.

ಈ ಕೆಲವು ತಡೆಗೋಡೆಗಳು ಇದ್ದಾಗಲೂ ಕೆಲವು ಮಹಿಳೆಯರು ಕಾರ್ಪೋರೇಟ್ ವಲಯದಲ್ಲಿ ತಮ್ಮ ಸ್ವಸಾಮರ್ಥ್ಯದಿಂದ ಗಮನಾರ್ಹ ಕೆಲಸ ಮಾಡುತ್ತಿದ್ದಾರೆ.

2011ರಲ್ಲಿ ಭಾರತದ ಮೊದಲ ಹತ್ತು ಸಶಕ್ತ ಮಹಿಳಾ ಉದ್ಯಮಿಗಳೆಂದು ಕೆಲವರನ್ನು ಗುರುತಿಸಲಾಗಿದೆ. ಸ್ವಂತ ಪರಿಶ್ರಮದಿಂದ ಬಯೊಕಾನ್ ಇಂಡಿಯಾ ಸಂಸ್ಥೆಯನ್ನು ಸ್ಥಾಪಿಸಿ ಬೆಳೆಸಿರುವ ಅದರ ಸಿಇಒ ಕಿರಣ್ ಮಜುಂದಾರ್ ಶಾ, ಮಾಧ್ಯಮ ದಿಗ್ಗಜ ಬೆನೆಟ್ಟ್ ಕೊಲಮಿನ್ ಸಂಸ್ಥೆಯ ಅಧ್ಯಕ್ಷರಾದ ಇಂದು ಜೈನ್, ಎಚ್‌ಎಸ್‌ಬಿಸಿ ಬ್ಯಾಂಕ್ ಗುಂಪಿನ ಜನರಲ್ ಮ್ಯಾನೇಜರ್ ನೈನಾಲಾಲ್ ಕಿದ್ವಾಯಿ, ಪೆಪ್ಸಿ ಸಿಇಒ ಇಂದ್ರಾ ಕೃಷ್ಣಮೂರ್ತಿ ನೋಯಿ, ಟ್ರಾಕ್ಟರ್ ಮತ್ತು ಫಾರಂ ಎಕ್ವಿಪ್‌ಮೆಂಟ್ ಲಿಮಿಟೆಡ್ ನಂತಹ ದೊಡ್ಡ ಕಂಪನಿಯ ನಿರ್ದೇಶಕಿಯಾಗಿರುವ ಮಲ್ಲಿಕಾ ಶ್ರೀನಿವಾಸನ್, ಬಹುರಾಷ್ಟ್ರೀಯ ಹಣಕಾಸು ಸಂಸ್ಥೆ ಐಸಿಐಸಿ ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕಿ ಮತ್ತು ಸಿಇಒ ಚಂದ್ರಾ ಕೊಚಾರ್, ಅಸೋಚಾಮ್‌ನ ಅಧ್ಯಕ್ಷರು ಮತ್ತು ಪೆರುಮಾಳ್ ಲೈಫ್ ಸೈನ್ಸ್‌ನ ನಿರ್ದೇಶಕಿ ಸ್ವಾತಿ ಪೆರುಮಾಳ್, ಅಪೊಲೊ ಆಸ್ಪತ್ರೆ ಗುಂಪಿನ ಮ್ಯಾನೇಜಿಂಗ್ ಡೈರೆಕ್ಟರ್ ಆಗಿರುವ ಪ್ರೀತಾ ರೆಡ್ಡಿ, ಕೈನೆಟಿಕ್ ಮೋಟರ್ ಕಂಪನಿಯ ಎಂಡಿ ಸುಲಜ್ಜಾ ಫಿರೋದಿಯಾ ಮೌತ್ವಾನಿ ಮತ್ತು ಪಾರ್ಕ್ ಹೊಟೆಲ್‌ನ ಪ್ರಿಯಾ ಪೌಲ್ ಉದ್ಯಮ ಜಗತ್ತಿನಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸಿದವರು.

ಇವರಲ್ಲಿ ಕೆಲವರು ತಮ್ಮ ಸ್ವಸಾಮರ್ಥ್ಯದಿಂದ ಉದ್ಯಮವನ್ನು ಸ್ಥಾಪಿಸಿ ಬೆಳೆಸಿದ್ದಾರೆ. ಉದಾ: ಕಿರಣ್ ಮಜುಂದಾರ್ ಅವರು ಕೇವಲ ಹತ್ತು ಸಾವಿರ ರುಪಾಯಿಗಳ ಬಂಡವಾಳದಿಂದ ಸ್ವಂತವಾಗಿ ಬಯೊಕಾನ್ ಉದ್ಯಮವನ್ನು ಪ್ರಾರಂಭಿಸಿ ಇವತ್ತು ಬಯೊಕಾನ್ ಇಂಡಿಯಾ ಹೆಸರನ್ನು ಅಂತರ್‌ರಾಷ್ಟ್ರೀಯ ಮಟ್ಟಕ್ಕೆ ಏರಿಸಿದ್ದಾರೆ. ತಮಗೆ ಎದುರಾದ ಎಲ್ಲ ಸಮಸ್ಯೆಗಳನ್ನೂ ಪರಿಹರಿಸಿಕೊಂಡು ಮುನ್ನಡೆಯುವ ಛಾತಿ ಅವರಲ್ಲಿದ್ದುದಕ್ಕೆ ಇದು ಸಾಕ್ಷಿ. ಇನ್ನು ಕೆಲವರು ತಮಗೆ ದೊರೆತ ಸಂಸ್ಥೆಯ ಉನ್ನತ ಪದವಿಯ ಅವಕಾಶವನ್ನು ಉಪಯೋಗಿಸಿಕೊಂಡು ಉದ್ಯಮವನ್ನು ಅಭಿವೃದ್ಧಿಯ ಪಥದತ್ತ ಕೊಂಡೊಯ್ದಿದ್ದಾರೆ. ಕೌಟುಂಬಿಕವಾಗಿ ದೊರೆತ ಅಧಿಕಾರವನ್ನು ಮುನ್ನಡೆಸುವುದು ಅಷ್ಟೊಂದು ಕಷ್ಟವಲ್ಲ. ಉದ್ಯೋಗನಿಮಿತ್ತ ದೊರೆತ ಉನ್ನತ ಹುದ್ದೆಯನ್ನು ನಿಭಾಯಿಸುವುದು ಸವಾಲಿನದು. ಆದರೂ ಇವೆರಡರಲ್ಲಿಯೂ ಮೊದಲೇ ಒಂದು ದಾರಿ ರೂಪುಗೊಂಡಿರುತ್ತದೆ. ಸ್ವಂತ ಉದ್ಯಮವನ್ನು ಸ್ಥಾಪಿಸಿ ಬೆಳೆಸುವುದು ಬಹುದೊಡ್ಡ ಸವಾಲಿನದು.

ಸರಕಾರವೇನೋ ಮಹಿಳಾ ಸಬಲೀಕರಣದ ಮಂತ್ರ ಜಪಿಸುತ್ತಿದೆ. ಆದರೆ ಪರಿಸ್ಥಿತಿ ಬೇರೆಯೇ ಆಗಿದೆ. ಕೇವಲ ಕಾನೂನೊಂದರಿಂದ ಎಲ್ಲವೂ ಆಗುತ್ತದೆ ಎಂದು ನಿರಾಳವಾಗಿದ್ದರೆ ಯಥಾಸ್ಥಿತಿ ಮುಂದುವರಿಯುತ್ತದೆ. ಸಮಾಜದ ಎಲ್ಲ ವಲಯದಲ್ಲಿ ಲಿಂಗಸೂಕ್ಷ್ಮತೆಯ ಕೊರತೆ ಇದೆ. ಪಿತೃಪ್ರಧಾನ ಧೋರಣೆ ಹಾಸುಹೊಕ್ಕಾಗಿದೆ. ಕಾನೂನು ಪರಿಪಾಲಕರಲ್ಲಿ ಹಾಗೂ ಅಧಿಕಾರದ ಸ್ಥಾನದಲ್ಲಿರುವವರಲ್ಲಿ ಲಿಂಗಸೂಕ್ಷ್ಮತೆಯನ್ನು ಬೆಳೆಸುವ ಕೆಲಸ ಆಗಬೇಕಾಗಿದೆ.

❑



ಆರ್ಥಿಕ ಅಭಿವೃದ್ಧಿ ಮತ್ತು ಮಹಿಳಾ ಸಬಲೀಕರಣ

■ನವಾಝ್ ಅಹ್ಮದ್

ಇತಿಹಾಸದ ಪುಟಗಳನ್ನು ತಿರುವಿದಾಗ ಅನಾದಿಕಾಲದಿಂದಲೂ ಸ್ತ್ರೀ-ಪುರುಷರು ಸಮಾಜದಲ್ಲಿ ಸಮಾನವಾದ ಸ್ಥಾನಮಾನ, ಸೌಲಭ್ಯಗಳನ್ನು ಅನುಭವಿಸುತ್ತಿದ್ದರು. ಅಭಿವೃದ್ಧಿಯ ವಿಚಾರದಲ್ಲೂ ಪರಸ್ಪರ ಹೊಂದಾಣಿಕೆಯ, ಸಮಾನ ಹಂಚಿಕೆಯ ಸಾಮಾಜಿಕ ವ್ಯವಸ್ಥೆಯನ್ನು ಅಂದಿನ ಸಮಾಜದಲ್ಲಿ ಕಾಣಬಹುದಾಗಿತ್ತು. ಕಾಲಕ್ರಮೇಣ ಬದಲಾದ ಸಾಮಾಜಿಕ ಸನ್ನಿವೇಶದಲ್ಲಿ ಸ್ತ್ರೀ ನಿಧಾನವಾಗಿ ನೇಪಥ್ಯಕ್ಕೆ ಸರಿಯತೊಡಗಿದಳು ಅಥವಾ ಮಹಿಳೆಯನ್ನು ಆ ರೀತಿ ನಡೆಸಿಕೊಳ್ಳಲಾಯಿತು. ಜಗತ್ತಿನಲ್ಲಿ ಹಲವಾರು ಮಹತ್ವದ ಬೆಳವಣಿಗೆಗಳು ಘಟಿಸಿ ಹೋದವು. ಅವುಗಳಲ್ಲಿ ಕೆಲವು ಪ್ರಮುಖ ಘಟನಾವಳಿಗಳಾದ ಮಹಾಯುದ್ಧಗಳು, ದೇಶಗಳ ಧ್ರುವೀಕರಣ, ಅದರ ನಂತರದ ದಶಕಗಳಲ್ಲಾದ ಅಭಿವೃದ್ಧಿ ಪಥದಲ್ಲಿನ ವೇಗ- ಇವೆಲ್ಲದರಿಂದ ತುಸು ದೂರವೇ ಉಳಿದ ಮಹಿಳೆ ಮಾತ್ರ ನಿರಂತರ ಶೋಷಣೆಗೆ ಒಳಗಾದಳು.

ನಾವೇನೋ 65 ಸ್ವಾತಂತ್ರ್ಯೋತ್ಸವವನ್ನು ಆಚರಿಸಿ ಎಂದಿನಂತೆ ಕೆಲಸಗಳಲ್ಲಿ ತಲ್ಲೀನರಾಗಿದ್ದೇವೆ. ಸ್ವಾತಂತ್ರ್ಯ ದೊರಕಿಗ ಆರೂವರೆ ದಶಕದಲ್ಲಿ ದೇಶದ ಸಾಧನೆಯನ್ನು ಅವಲೋಕಿಸಿದರೆ ಸಾಮಾಜಿಕ ಸಮಸ್ಯೆಗಳಾದ ಅನಾದಿಕಾಲದ ಬಡತನ, ಅನಕ್ಷರತೆ, ಆರ್ಥಿಕ ಸಂಕಷ್ಟ, ಆಂತರಿಕ ಸ್ಥಿರತೆ ಮುಂತಾದವುಗಳು ಸಾಮಾನ್ಯವಾಗಿ ಮೂಡಿಬರುವಂತದ್ದಾಗಿದೆ. ಆದರೆ ಇವೆಲ್ಲದರ ನಡುವೆ ಮಹಿಳಾ ಸಬಲೀಕರಣದ ಕ್ಷೀಣ ಧ್ವನಿ ತನ್ನ ಅಸ್ಮಿತೆಯನ್ನು ಉಳಿಸಲು-ಗಳಿಸಲು ಶತಾಯ ಗತಾಯ ಪ್ರಯತ್ನಗಳು ನಡೆಸುತ್ತಲೇ ಇದೆ. ಆದರೆ ಆ ಪ್ರಯತ್ನಗಳು ಇನ್ನೂ ದಡ ಮುಟ್ಟಿಲ್ಲ ಎನ್ನುವುದು ವಿಷಾದದ ಸಂಗತಿಯಾಗಿದೆ. ಜಗತ್ತಿನ ಒಟ್ಟು ಜನಸಂಖ್ಯೆಯಲ್ಲಿ ಸುಮಾರು ಶೇ.50 ರಷ್ಟು ಮಹಿಳೆಯರಿದ್ದಾರೆ.

ತಾಯಿ, ಸಹೋದರಿ, ಗೆಳತಿ, ಪತ್ನಿ ಎಂಬಿತ್ಯಾದಿ ಸಂಬಂಧಗಳ ಭಾವನಾತ್ಮಕ ವ್ಯಾಖ್ಯೆಯೊಂದಿಗೆ ಮಹಿಳೆಯ ಚಿತ್ರಣವನ್ನು ಮೂಡಿಸಲಾಗುತ್ತಿದೆ. ಈ ರೀತಿಯಾಗಿ ಭಾವನಾತ್ಮಕ ಪ್ರಪಂಚದಲ್ಲೇ ಮಹಿಳೆಯನ್ನು ಗುರುತಿಸುವಾಗ ಕೇವಲ ನಾವು ನಿರ್ಮಿಸಿದಂತಹ ಅವಾಸ್ತವಿಕ ಜಗತ್ತಿನಲ್ಲೇ ಆಕೆಯ ಸಂತೃಪ್ತಿಯ ಪ್ರಮಾಣವನ್ನು ಅಳೆಯುತ್ತೇವೆಯೇ ಹೊರತು ಆಕೆಗೆ ನಿಜವಾಗಿಯೂ ಅವಶ್ಯಕತೆಯಿರುವ ಅಂಶಗಳ ಕಡೆಗೆ ತಿರುಗಿಯೂ ನೋಡುವುದಿಲ್ಲ. ಒಂದರ್ಥದಲ್ಲಿ ಮಹಿಳೆಗೆ ಅಪರಿಮಿತ ತಾಳ್ಮೆ, ತ್ಯಾಗದ ಮನೋಭಾವವಿರುವುದೇನೋ ನಿಜ: ಆದರೆ ಆಕೆಯ ತಾಳ್ಮೆ ಮತ್ತು ತ್ಯಾಗದ ಗುಣಗಳು 21ನೇ ಶತಮಾನದವರೆಗೂ ದುರ್ಬಳಕೆಯಾಗಿದೆ. ಹಾಗೆನೇ ಅವು ಆಕೆಯ ಸರ್ವತೋಮುಖ ಅಭಿವೃದ್ಧಿಗೆ ತಡೆಯೊಡ್ಡುತ್ತಿದೆ ಎಂದರೆ ತಪ್ಪಾಗಲಾರದು. ನಿನ್ನೆ-ಮೊನ್ನೆಯವರೆಗೂ ಮಹಿಳಾ ಅಭಿವೃದ್ಧಿಗೆ ಬಹು ದೊಡ್ಡ ತಡೆ ಪುರುಷ ಪ್ರಧಾನ ಸಾಮಾಜಿಕ ವ್ಯವಸ್ಥೆ ಎಂಬ ಆರೋಪ ಕೇಳಿ ಬರುತ್ತಿತ್ತು. ಆದರೆ ಸ್ವಲ್ಪ ಆಳವಾಗಿ ಚಿಂತಿಸಿದರೆ, ಪುರುಷ ಪ್ರಧಾನ ವ್ಯವಸ್ಥೆಯನ್ನು ಕಟು ಶಬ್ದಗಳಿಂದ ಟೀಕಿಸುತ್ತಿರುವ ಮಹಿಳೆಯರು ಕೊನೆಗೆ ತಮ್ಮ ಕೆಲಸ ಸಾಧನೆಗೆ ಕಂಡುಕೊಳ್ಳುವ ದಾರಿ ತಲುಪುವುದು ಅದೇ ಪುರುಷ ಪ್ರಧಾನ ವ್ಯವಸ್ಥೆಯೇ ಆಗಿದೆ..!

ಮಹಿಳೆ ತನ್ನನ್ನು ತಾನು ಅಭಿವೃದ್ಧಿಪಡಿಸುವಲ್ಲಿ ಎಲ್ಲಿ ವಿಫಲಳಾಗಿದ್ದಾಳೆ ಎಂಬುವುದನ್ನು ನಾನಿಲ್ಲಿ ಚರ್ಚಿಸಲು ಬಯಸುತ್ತೇನೆ. ಯಾವಾಗಲೂ ಮಹಿಳೆ ಒತ್ತಡಕ್ಕೆ ಮಣಿಯುವ ತನ್ನ ಸ್ವಭಾವದಿಂದಾಗಿ ಇಂದು ಪುರುಷರಿಗೆ ಸರಿಸಮಾನವಾಗಿ ನಿಲ್ಲುವ ಸಾಮರ್ಥ್ಯದಿಂದ ದೂರವುಳಿದಿದ್ದಾಳೆ. Take it As Granted... ಎಂಬ ತತ್ವಕ್ಕೆ ಮಣಿದು ತನ್ನ ಅಧಃಪತನಕ್ಕೆ ಮಹಿಳೆಯೇ ಕಾರಣವಾದರೂ ಇತ್ತೀಚೆಗಿನ ದಿನಗಳಲ್ಲಿ ಎಲ್ಲಾ ಅಡೆತಡೆಗಳನ್ನು ಮೀರಿ ಸಮಾಜದಲ್ಲಿ ತನ್ನ ಅಸ್ತಿತ್ವದೊಂದಿಗೆ ತನ್ನ ಸೇವೆಯ ಕುರುಹನ್ನೂ ಉಳಿಸುವತ್ತ ಚಿಂತನೆ ನಡೆಸಿದ್ದಾಳೆ ಎಂಬುದು ಆಶಾದಾಯಕ ಸಂಗತಿಯಾಗಿದೆ. ಆದರೆ ಅಲ್ಲಿಯೂ ಆಕೆಗೆ ಹೊಸ ಹೊಸ ರೂಪದ ಸವಾಲುಗಳು ಎದುರಾಗುತ್ತಿವೆ.

ಹೈನುಗಾರಿಕೆ ಮತ್ತು ಕೃಷಿ

ಕೃಷಿ ಮತ್ತು ಹೈನುಗಾರಿಕೆಯ ಕ್ಷೇತ್ರದಲ್ಲಿ ಮಹಿಳೆಯರ ಪಾತ್ರ ಏನೆಂಬುದರ ಬಗ್ಗೆ ಚರ್ಚೆ ನಡೆದಿರುವುದೇ ಕಡಿಮೆ ಅಥವಾ ಆ ಕುರಿತ ಚರ್ಚೆ ಸರಿಯಾದ ರೀತಿಯಲ್ಲಿ ನಡೆದಿಲ್ಲವೆಂದೇ ಹೇಳಬಹುದು. ಹೈನುಗಾರಿಕೆಯ ವಿಚಾರಕ್ಕೆ ಬಂದರೆ ಮನೆಯ ಹಟ್ಟಿಯಲ್ಲಿರುವ ದನ-ಕರು ಮತ್ತಿತರ ಜಾನುವಾರುಗಳಿಗೆ ಒಡನಾಡಿಯಂತಿರುವ ಮಹಿಳೆ, ದಿನದ ಬಹಳ ಹೊತ್ತು ಅವುಗಳೊಂದಿಗೆ ಕಳೆದು ಅದರ ಆರೈಕೆ ಮಾಡುತ್ತಾಳೆ. ಆದರೆ ಅವುಗಳಿಂದ ಬರುವ ಉತ್ಪಾದನೆಯ ವ್ಯವಹಾರದಲ್ಲಿ ಅವಳ ಪಾತ್ರ ತೆರೆಯ ಮರೆಯಲ್ಲೇ ಉಳಿಯುತ್ತದೆ. ಕೇವಲ ದನ-ಕರುಗಳ ಆರೈಕೆಯಿಂದ ಹಿಡಿದು ಅವುಗಳ ಹಾಲು ಹಿಂಡುವವರೆಗೆ ಮಾತ್ರ ಪಾಲುದಾರಳಾಗುವ ಮಹಿಳೆಗೆ ತನ್ನ ಕೈಯಿಂದಲೇ ತಯಾರಾದ ಉತ್ಪನ್ನಗಳನ್ನು ಮಾರುಕಟ್ಟೆಗೆ ತಲುಪಿಸಿ



ಅದರಿಂದ ಬರುವ ಲಾಭವನ್ನು ಅನುಭವಿಸಲು ಅವಳಿಗೆ ಸಾಧ್ಯವಾಗುತ್ತಿಲ್ಲ. ಈ ರೀತಿ ತೆರೆಮರೆಯಲ್ಲೇ ಕೆಲಸ ಮಾಡಿ ತನ್ನ ಅಭಿವೃದ್ಧಿಗಿರುವ ಅಡಚಣೆಯ ಮೂಲವನ್ನೂ ತಿಳಿಯದೆ, ಸ್ವತಃ ಪುರುಷ ಪ್ರಧಾನ ವ್ಯವಸ್ಥೆಗೆ ನೀರೆರೆದು ಪೋಷಿಸುವ ಗ್ರಾಮೀಣ ಮಹಿಳೆ ಇನ್ನೂ ಜಾಗೃತಳಾಗಿಲ್ಲ ಎನ್ನುವುದೇ ನನ್ನ ಒಟ್ಟು ಅಭಿಪ್ರಾಯ ವಾಗಿದೆ. ಪಾಲಿಗೆ ಬಂದಿರೋ "ಪಂಚಾಮೃತ" ಒಂದು ದಿನ ತಮ್ಮ ಬದುಕಿಗೆ ವಿಷವಾಗಲಿದೆ ಎಂಬುವುದನ್ನು ಮಹಿಳೆಯರು ಮನದಟ್ಟು ಮಾಡಿಕೊಳ್ಳ ಬೇಕಾಗಿರುವುದು ಕಾಲದ ಬೇಡಿಕೆಯಾಗಿದೆ.

ಇನ್ನು ಕೃಷಿ ಚಟುವಟಿಕೆಯಲ್ಲೂ ಮಹಿಳೆ ತಾನು ಹೊಲ ಗದ್ದೆಗಳಲ್ಲಿ ನಿಯತ್ತಿನಿಂದ ಕೆಲಸ ಮಾಡುವುದು ಬಿಟ್ಟರೆ, ಅದರಾಚೆಗಿನ ಮಾರುಕಟ್ಟೆಯ ಜಗತ್ತು, ಅಲ್ಲಿ ತನ್ನ ಪಾಲುದಾರಿಕೆಯ ಶೂನ್ಯತೆಯ ಕುರಿತು ಎಂದೂ ತಲೆಕೆಡಿಸಿ ಕೊಂಡವಳಲ್ಲ. ನಿರ್ಜೀವ ನೆಲದಲ್ಲಿ ಉತ್ತಿ–ಬಿತ್ತಿ ಬೆಳೆಗಳ ಆರೈಕೆ ಮಾಡಿ ಉತ್ತಮ ಫಸಲಿಗೆ ಕಾರಣವಾಗುವ ಆಕೆಯ ದೃಢ ಮನಸ್ಸು ಮತ್ತು ಅದಕ್ಕಿಂತಲೂ ಸದೃಢವಾದ ಆಕೆಯ ಕೈಗಳು, ಮಾರುಕಟ್ಟೆಯ ವ್ಯವಹಾರದಲ್ಲೇಕೆ ಹಿಂಜರಿಯುತ್ತದೆ ಎಂಬ ಜಿಜ್ಞಾಸೆ ಮೂಡುವುದು ಸಹಜ. ಬಹುಶಃ ಈ ಪ್ರಶ್ನೆಗೆ ರೈತ ಮಹಿಳೆಯರು ತಮ್ಮ ಉತ್ಪನ್ನಗಳ ಮೌಲ್ಯವನ್ನು ನಿರ್ಧರಿಸುವ ಮಾರುಕಟ್ಟೆ ಹಾಗೂ ತಮ್ಮ ಕೃಷಿ ಕೆಲಸದಲ್ಲಿ ಲಭಿಸುವ ಲಾಭದ ಕುರಿತು ಪ್ರಾಯೋಗಿಕ ಚಿಂತನೆ ನಡೆಸಿದರೆ ಉತ್ತರ ಲಭಿಸಬಹುದು.

ಇನ್ನು ಕೈಗಾರಿಕೆ ಮತ್ತು ತಂತ್ರಜ್ಞಾನದ ವಿಚಾರಕ್ಕೆ ಬಂದರೆ, ಈ ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕೆಂದು ಆಲೋಚಿಸುವರೇ ಕಡಿಮೆ...! ಅಥವಾ ಕೆಲಸ ಮಾಡಲು ಮನಸು ಮಾಡಿದರೂ ಕೆಲವೊಮ್ಮೆ ಸಂಪ್ರದಾಯ, ಆಚಾರ ವಿಚಾರಗಳು ಅಡ್ಡಿಯಾಗುವ ಸಂದರ್ಭಗಳು ಒದಗಿ ಬರುತ್ತವೆ. ಯಾಕೆಂದರೆ ಕೈಗಾರಿಕೆಗಳಂತ ಕೆಲಸಗಳು ಕೇವಲ ಪುರುಷರಿಗೆ ಮಾತ್ರ ಸೀಮಿತ, ಮಹಿಳೆಯರಿಂದ ಅಂತಹ ಕೆಲಸಗಳು ಅಸಾಧ್ಯ ಎಂಬ ರೆಡಿಮೇಡ್ ಉತ್ತರ ಲಭ್ಯವಿರುತ್ತದೆ. ಮತ್ತೊಂದು ಆಯಾಮದಲ್ಲಿ ನೋಡಿದರೆ, ಅಡುಗೆ ಮನೆಯ ಕೆಲಸದಲ್ಲಿ ನಿರತಳಾಗುವ ಮಹಿಳೆ, ಎಂತಹ ಕಠಿಣ ಕೆಲಸಗಳನ್ನೂ ನಿರ್ವಹಿಸಲು ಶಕ್ತಳಾಗಿರುತ್ತಾಳೆ. ಹೊರಗಡೆ ಪುರುಷರು ನಿರ್ವಹಿಸುವಂತಹ ಕಠಿಣ ಕೆಲಸಗಳಿಗೆ ಸರಿಸಮಾನವಾಗಿ ಕೆಲಸ ಮಾಡಿದರೂ ಇಂದಿನವರೆಗೂ ಯಾರೂ ಅದರ ಬಗ್ಗೆ ತುಲನಾತ್ಮಕ ಚಿಂತನೆಯನ್ನು ನಡೆಸಿಲ್ಲ...!

1900ನೇ ಇಸವಿಯಲ್ಲಿ ಸಮಾನ ಹಕ್ಕುಗಳು, ಮಹಿಳಾ ಶೈಕ್ಷಣಿಕ ಜಾಗೃತಿ, ಸಮಾನ ನ್ಯಾಯ ಮತ್ತಿತರ ಬೇಡಿಕೆಗಳೊಂದಿಗೆ ಸಣ್ಣ ಮಟ್ಟದಲ್ಲಿ ಪ್ರಾರಂಭವಾದ ಮಹಿಳಾ ಚಳುವಳಿ, 1970ರ ಸಮಯಕ್ಕೆ ಮತ್ತಷ್ಟು ಚುರುಕು ಪಡೆಯಿತು. ಅಲ್ಲದೆ 1975ನೇ ಇಸವಿಯನ್ನು ವಿಶ್ವ ಸಂಸ್ಥೆಯು "ಮಹಿಳಾ ವರ್ಷ"ವೆಂದೇ ಕರೆದಿದೆ. ಇನ್ನು 1976 ರಿಂದ 1985 ರವರೆಗಿನ ಅವಧಿಯನ್ನು "ಮಹಿಳಾ ದಶಕ" ಎಂದೂ ಬಣ್ಣಿಸಲಾಗಿದೆ.

90ರ ದಶಕದ ನಂತರ ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ರಾಜಕೀಯದಲ್ಲಿ ಸಂಪೂರ್ಣ ಪ್ರಮಾಣದಲ್ಲಿ ಮಹಿಳೆಯರು ಭಾಗವಹಿಸಿರುವುದು ಇತ್ತೀಚೆಗಿನ ಬೆಳವಣಿಗೆ. ಅದಾಗ್ಯೂ ಭಾರತದಂತಹ ಅಭಿವೃದ್ಧಿಶೀಲ ದೇಶವು ಕೈಗಾರಿಕೀಕರಣದ ನಾಗಾಲೋಟದಲ್ಲಿ ಓಡುತ್ತಿರುವಾಗ ಮಹಿಳಾ ಚಳುವಳಿಯ ಕೂಗು ಒಂದೊಮ್ಮೆ ಪ್ರತಿಧ್ವನಿಸಿ ಮತ್ತೆ ಮೌನವಾಗುತ್ತಿದೆ. ಇತ್ತೀಚಿನ ದಿನಗಳಲ್ಲಂತೂ ಮಹಿಳೆಯರ ಮೇಲಿನ ದೌರ್ಜನ್ಯ ಎಲ್ಲೆ ಮೀರಿ ನಡೆಯುತ್ತಿದೆ. ವಿಪರ್ಯಾಸವೆಂದರೆ, ನಿಕಟಪೂರ್ವ ಹಾಗೂ ಭಾರತದ ಪ್ರಥಮ ಮಹಿಳಾ ರಾಷ್ಟ್ರಪತಿ ಪ್ರತಿಭಾ ಪಾಟೀಲ್ ರಾಷ್ಟ್ರಾಧ್ಯಕ್ಷೆಯಾದಾಗ ಭಾರತೀಯ ಮಹಿಳೆಯರ ಸ್ಥಿತಿಯಲ್ಲಿ ಸುಧಾರಣೆಯಾಗುತ್ತದೆ ಎಂದೇ ಪ್ರತಿಪಾದಿಸಲಾಗಿತ್ತು. ಶೇ.33 ರಷ್ಟಿರುವ ಮಹಿಳಾ ಮೀಸಲಾತಿಯನ್ನು ಶೇ.50 ಕ್ಕೇರಿಸುವ ಬಗ್ಗೆ ಚರ್ಚೆಗಳು ನಡೆಯುತ್ತವೆಯೇ ಹೊರತು, ಇದುವರೆಗೆ ಪ್ರಾಮಾಣಿಕ ಪ್ರಯತ್ನ ನಡೆದಿಲ್ಲವೆಂದೇ ಹೇಳಬಹುದು.

ಇನ್ನು ಪರಿಪೂರ್ಣವಾಗಿ ಮಹಿಳೆ ಎಲ್ಲಾ ಕ್ಷೇತ್ರಗಳಲ್ಲಿ ಅಭಿವೃದ್ಧಿ ಹೊಂದಬೇಕಾದರೆ ಮೊದಲು ತಮ್ಮ Take it As Granted ಎಂಬ ಮನೋಭಾವನೆಯಲ್ಲಿ ಬದಲಾವಣೆ ತರಬೇಕಾಗಿದೆ. ಅಲ್ಲದೆ ತನ್ನ ಯೋಜನೆ ಮತ್ತು ಯೋಚನೆ ಗಳೆರಡರಲ್ಲೂ ಆಮೂಲಾಗ್ರ ಬದಲಾವಣೆ ತರುವು ದರೊಂದಿಗೆ, ಜಗತ್ತಿನ ಅಭಿವೃದ್ಧಿಯ ವೇಗದೊಂದಿಗೆ ತಾನೂ ಸರಿಸಮಾನವಾಗಿ ಚಲಿಸುವತ್ತ ಗಮನ ಹರಿಸಬೇಕಾಗಿದೆ. ಕಾಲ ಎಲ್ಲವನ್ನೂ ನಿರ್ಧರಿಸುತ್ತದೆ ಎಂದು ಕಾದು ಕುಳಿತರೆ ಸದ್ಯ ಲಭ್ಯವಿರುವ ಸೌಲಭ್ಯಗಳೂ ಕೈ ತಪ್ಪಿ ಹೋಗುವುದರಲ್ಲಿ ಎರಡು ಮಾತಿಲ್ಲ.

❑

ಅಂಜಿಕೆ

ಬರೆಯ ಬೇಕೆಂಬ ಆಸೆ
ಬರೆಯಲು ಕೂತರೆ ಬಲು ನಿರಾಸೆ
ಮನಸ್ಸಿನಲ್ಲಿ ಇದೆ
ನೂರೊಂದು ಸಮಸ್ಯೆ
ಅವುಗಳನ್ನು ನಿಮ್ಮ ಮುಂದೆ
ಹಂಚಿಕೊಳ್ಳಲು ಅಂಜಿಕೆ

ಜೀವನದ ಪ್ರತಿಯೊಂದು
ಘಟನೆ ಎಲ್ಲರ ಮುಂದೆ
ಬಿಚ್ಚಿಡಲು ಬಲು ಆಸೆ
ಆದರೆ ಬಯಲಾದೆನೆಂಬ ಅಂಜಿಕೆ

■ ಸುರೇಖಾ ರಾಠೋಡ
ಬಿಜಾಪುರ



ಮಹಿಳಾ ಸಂವೇದನೆಯ ಬಿಕ್ಕಟ್ಟಿನ ನೆಲೆ ಹಾಗೂ ವೈದೇಹಿಯವರ 'ಒಂದು ಕತ್ತಲ ಹಾಡು'

■ ಎಂ.ಡಿ. ಒಕ್ಕುಂದ

ಮಹಿಳಾ ಸಂವೇದನೆಯ ಬಿಕ್ಕಟ್ಟಿನ ನೆಲೆ

ಮಹಿಳಾ ಪ್ರಜ್ಞೆ ಆತಂಕ ಮತ್ತು ದಮನಕ್ಕೆ ಒಳಗಾದ ದಶಕಗಳಿವು. ಜಾಗತಿಕ ಬಂಡವಾಳವಾದವು ಹೆಣ್ಣನ್ನು ಸರಕಿನ ಮಟ್ಟಕ್ಕೆ ಇಳಿಸಿತು. ಸರಕು ಸಂಸ್ಕೃತಿಯು ಹೆಣ್ಣನ್ನು ದೇಹಬದ್ಧಗೊಳಿಸಿತು. ಹೆಣ್ಣಿನ ಸ್ವಾತಂತ್ರ್ಯ ಮತ್ತು ಹಕ್ಕಾಗಿದ್ದ ಶಿಕ್ಷಣ, ಉದ್ಯೋಗಗಳಂತಹ ಸೌಲಭ್ಯಗಳು ಪಿತೃಪ್ರಧಾನ ವ್ಯವಸ್ಥೆಯ ಪೂರಕ ಕ್ಷೇತ್ರಗಳಾಗಿ ಬದಲಾಗತೊಡಗಿದವು. ಖಾಸಗೀಕರಣವು ಮೀಸಲಾತಿಯಂತಹ ಸಾಮಾಜಿಕ ನ್ಯಾಯ ಪರಿಕಲ್ಪನೆಗಳನ್ನು ಅವಹೇಳನ ಮಾಡಿತು. ಸಾಮಾಜಿಕ ಅಸ್ಮಿತೆಯ ಹುಡುಕಾಟದ ಪ್ರತಿಯೊಂದು ಸ್ತರದಲ್ಲಿಯೂ ವಿಚಿತ್ರ ದಬಾವಣೆಗೆ ಒಳಗಾಗಬೇಕಾಯಿತು. ಇದು ಮತ್ತೆ ಪಿತೃವ್ಯವಸ್ಥೆಗೆ ಅಧೀನಳಾಗುವ ದುರಂತದ ಚಲನೆಯಾಗತೊಡಗಿತು.

ಬಂಡವಾಳವಾದ, ಪ್ರಭುತ್ವ ರಾಜಕಾರಣ ಮತ್ತು ಹಿಂದುತ್ವಗಳ ಕೂಡುವಿಕೆ ಕಳೆದೆರಡು ದಶಕಗಳಲ್ಲಿ ಕೋಮುವಾದಿ ಹಿಂಸಾಕಾಂಡಗಳಿಗೆ ಕಾರಣವಾಯಿತು. ದೇಶವಿಭಜನೆಯ ಕಾಲದ ಕೋಮುಗಲಭೆಗಿಂತಲೂ ಭೀಕರವಾಗಿ ಮಹಿಳಾ ಬದುಕು ನಲುಗಿಹೋಯಿತು. ದೇಶವಿಭಜನೆಯ ಕಾಲದಲ್ಲಿ ನಡೆದದ್ದು ಘಟನಾ ಕಾರಣವಾದ ಹಿಂಸೆಯಾದರೆ, ಈಗ ನಡೆಯತೊಡಗಿದ್ದು ಉದ್ದೇಶಪೂರ್ವಕವಾದ ಹಿಂಸೆಯಾಗಿತ್ತು. ಗುಜರಾತ್‌ನಲ್ಲಿ ಕೂಲಿ ಕೆಲಸಕ್ಕಾಗಿ ಹೋಗಿ ನೆಲೆಸಿದ್ದ ಕೌಸರಬಾನುವಿನ ಗರ್ಭಕ್ಕೆ ಇರಿದ ಕತ್ತಿಯ ನೆನಪು ಕನ್ನಡ ಸಂವೇದನೆಯನ್ನು ತಲ್ಲಣಗೊಳಿಸಿತು. ಕೌಸರ್‌ಬಾನು ಕನ್ನಡ ಕಾವ್ಯದಲ್ಲೊಂದು ರೂಪಕವಾದಳು. ಕೋಮುವಾದವು ಮತೀಯವಾದವನ್ನು ಹುಟ್ಟುಹಾಕಿ, ಪ್ರತಿಯೊಂದು ಜಾತಿ–ಧರ್ಮಗಳೂ ಹೆಣ್ಣನ್ನು ಈ ದಿಗ್ಬಂಧನಕ್ಕೆ ಒಳಪಡಿಸಿದವು. ವಸಾಹತುಶಾಹಿ ಕಾಲದಲ್ಲಿ ತೆರೆದುಕೊಂಡ ಸಣ್ಣ ಅವಕಾಶಗಳಲ್ಲಿ ಬೇರೂರಲು ಆರಂಭಿಸಿದ್ದ ಮಹಿಳಾ ಪ್ರಜ್ಞೆ ಮರಳಿ ದಮನಕ್ಕೆ ಒಳಗಾಯಿತು. ಹಿಂದುತ್ವವು ಹರಡತೊಡಗಿದ ಕೋಮುವಾದಿ ಚಿಂತನೆಗಳು ಧಾರ್ಮಿಕತೆ ಮತ್ತು ಸಂಸ್ಕೃತಿಯ ಹೆಸರಿನಲ್ಲಿ ಮಹಿಳಾ ಪ್ರಜ್ಞೆಯನ್ನು ತನ್ನ ದಾಳವನ್ನಾಗಿ ಬಳಸಿಕೊಳ್ಳಲಾರಂಭಿಸಿತು. ಅತ್ಯಂತ ಸಾಂಪ್ರದಾಯಿಕ ಸಮಾಜದಲ್ಲಿ ಕೂಡ ಕಾಣಲಾರದಷ್ಟು ಪೂಜೆ, ಪುನಸ್ಕಾರ, ಆಚರಣೆ, ನೀತಿಗಳು ಕೌಟುಂಬಿಕವಾಗಿ ಆ ಮೂಲಕ ಸಾಮಾಜಿಕವಾಗಿ ಪ್ರತಿಷ್ಠಾಪಿಸಲ್ಪಟ್ಟವು. ಮತ–ಧರ್ಮಗಳ ಆಂತರಿಕ ವ್ಯವಸ್ಥೆಯೊಳಗೆ, ಕೋಮುಗಲಭೆಗಳಲ್ಲಿ ಮತ್ತು ಸಾಮಾಜಿಕ ಹಿಂಸೆಯಲ್ಲಿ ಪಾಲುದಾರಳಾಗುವ ಒತ್ತಾಯದಲ್ಲಿ ಮಹಿಳೆಯ ವ್ಯಕ್ತಿತ್ವ ಒತ್ತಡಕ್ಕೊಳಗಾಗತೊಡಗಿತು. ಅವಳು ಧರ್ಮದ ಗುರುತಾಗಿ ಬಿಂಬಿತವಾಗತೊಡಗಿದಳು. ಬಂಡವಾಳವಾದವು ಚಲಾವಣೆಗೆ ತಂದ ಹುಸಿ ಆಧುನಿಕತೆ ಮತ್ತು ಕೋಮುವಾದವು ಹುಟ್ಟು ಹಾಕಿದ ಸಾಂಪ್ರದಾಯಿಕ ಮೌಢ್ಯಗಳ ಭೀಕರ ಛಿದ್ರತೆ ಹೆಣ್ಣಿನ ಚಹರೆಯಾಗತೊಡಗಿತು.

ವಸಾಹತು ಮತ್ತು ವಸಾಹತೋತ್ತರ ಕಾಲದಲ್ಲಿ ಆರಂಭವಾಗಿದ್ದ ಅವಳ ಸ್ವಾತಂತ್ರ್ಯದ ಶೋಧ, ಸ್ತ್ರೀವಾದಿ ಪರಿಕಲ್ಪನೆ ಒದಗಿಸಿದ್ದ ಅಸ್ಮಿತೆಯ ಹುಡುಕಾಟ ಈ ಎಲ್ಲವೂ ದಿಕ್ಕುತಪ್ಪಿ ಹೆಣ್ಣು ಮತ್ತೆ ಶತಮಾನಗಳ ಹಿಂದಿನ ಚಹರೆಗಳಿಗೆ ಹೊರಳಿಕೊಳ್ಳುವಂತಾಯಿತು. ಹೆಣ್ಣಿನ ಸಮಸ್ಯೆಗಳು ಸಾವಿರ ಕವಲುಗಳಲ್ಲಿ ಚಿಗುರತೊಡಗಿದಂತೆ, ಅವುಗಳನ್ನು ಸ್ಪಷ್ಟೀಕರಿಸಿಕೊಳ್ಳುವ, ತಾತ್ವಿಕ ನಿರ್ವಚನಕ್ಕೆ ಒಳಪಡಿಸಿಕೊಳ್ಳುವ ಸವಾಲು ಎದುರಾಯಿತು. ಹೆಣ್ಣಿನ ಹಿಂಸೆಯ ಮಾದರಿಗಳು ಕ್ಷಣದಿಂದ ಕ್ಷಣಕ್ಕೆ ಬೆಳೆಯತೊಡಗಿದವು ಮತ್ತು ಬದಲಾಗತೊಡಗಿದವು.

ಇಂತಹ ತಲ್ಲಣಗಳ ಹೊತ್ತಿನಲ್ಲಿ ಮಹಿಳಾ ಸಂವೇದನೆಯು ವಿಚಿತ್ರ ದಿಗಿಲನ್ನು ಅನುಭವಿಸಿದೆ. ಎಪ್ಪತ್ತರ ದಶಕದ ಸ್ತ್ರೀವಾದಿ ಚಿಂತನೆ, ಎಂಭತ್ತರ ದಶಕದ ಬಂಡಾಯ ಮನೋಧರ್ಮಗಳ ಖಚಿತ ಮತ್ತು ಸಮುದಾಯದ ಸ್ವರಗಳು ಕಳೆದುಹೋಗಿ, ಮಹಿಳಾ ಅಭಿವ್ಯಕ್ತಿಯಲ್ಲಿ ಮತ್ತೆ ಗಾಢ ವಿಷಾದ, ಆತಂಕ, ತಣ್ಣನೆಯ ಆಕ್ರೋಶ, ಹಳಸಿದ ತಾಜಾ ಸಮಸ್ಯೆಗಳ ಮುಖಾಮುಖಿ ಇಂತಹ ವಿಶಿಷ್ಟ ಜಗತ್ತು ನಿರ್ಮಾಣವಾಗಿದೆ. ಕೋಮುಗಲಭೆಗಳು ಊರು ಕೇರಿ, ಓಣಿ, ಕೊರಡಿಗಳ ಒಳ ಬರುತ್ತಿರುವ ಕಾಲದಲ್ಲಿ 'ಚೆಲ್ಲಿದ ರಕ್ತದಲ್ಲಿ ಹೆರಿಗೆ ಕೋಣೆಯ ವಾಸನೆ' ಕಂಡು ಬೆಚ್ಚಿದ್ದಾಳೆ. ಚರಿತ್ರೆಯಲ್ಲಿ ಕೋಮುಗಲಭೆಯ ದಶಕಗಳೆಂದು ಗುರುತಿಸಿಕೊಂಡ ಈ ಕಾಲ ಹೆಣ್ಣಿನ ಸಂವೇದನೆಯ ಅತ್ಯಂತ ಬಿಕ್ಕಟ್ಟಿನ ಕಾಲವೂ ಆಗಿದೆ.

ಒಂದು ಕತ್ತಲ ಹಾಡು



ಆಗಂತುಕರು ನಾವು, ಜಗ ಆತಿಥೇಯ
ನಾವೆಷ್ಟು ನಮ್ಮ ಕೆಲಸವೆಷ್ಟು
ಬಂದ ಮನೆಯಲಿ ಸೇರಿ ಒಟ್ಟುಬಾಳಿನ ಸವಿಗೆ
ಮಿಡಿವ ಒಳಗೊಂಬ ಅನುಭವಿಪ ಗುಣ ಬಿಟ್ಟು

ಹೊಕ್ಕಮನೆಯನ್ನು ವಿಷದ ತೊಟ್ಟಿ ಮಾಡಿ
ಸ್ವಂತ ಹೃದಯವ ಕಸದ ಬುಟ್ಟಿ ಮಾಡಿ
ಹಕ್ಕಿಲ್ಲದೆಯೆ ಪ್ರೊಳ್ಳು ಸೊಕ್ಕು ಮೆರೆದು
ಮನಸು ಮನಸಿನ ಸುತ್ತ ಭೇದ ಬೇಲಿಯ ಕಟ್ಟಿ
ಮಂದಿ ಬದುಕುಗಳನ್ನು ಸ್ಥಾವರ ಮಾಡಿ
ಜಂಗಮದ ಬೆಳಕನ್ನು ನಂದಿಸಿದೆವು
ಬೀಸಿಕೊಂಡೆವು ಕತ್ತಿ ಒಬ್ಬರೊಬ್ಬರ ಮೇಲೆ
ಕಣ್ಣು ಕಾಣದ ಕತ್ತಲಲ್ಲಿ

ತೋಟ ತಟ್ಟೆಯಲ್ಲಿತ್ತು ಗುಲಾಬಿ ಸೇವಂತಿ
ಇರುವಂತಿಕಾ ಸದಾ ಪುಷ್ಪ
ಹಾಡುತಿತ್ತು ಹಾಡು ಶಬ್ದಗಳ ಸಂಧ್ಯೆಯಲಿ
ಹಕ್ಕಿಗೂಡಲಿ ದರಗು ತಲ್ಪ.

ಗಿಡನೆಡುವ ಬದಲು ಕಿಡಿಯ ನೆಟ್ಟೆವು ನಾವು
ತಿರುಗಾಡಲೆಂದು ಬಂದು
ಆಟವಾಡಲು ಬಂದು ಮೋಸವಾಡಿದೆವು
ಪಾತಿಯಲಿ ಜಾತಿ ಕೋಮು ಬಿತ್ತಿ

ಕಟುಕರಾದೆವು ನಾವು ಜೀವಪರಿಸರಕೆ
ಕುಲಕೋಮು ರಾಸಾಯನಿಕವಾದೆವು
ಕುಟುಕಿ ಪುಲಕವ ದುಷ್ಟ ಕನಸುಗಳ ಗರಿ ಧರಿಸಿ
ದ್ವೇಷೋಪದ್ವೇಷದಲಿ ಪ್ರೀತಿ ಚಿವುಟಿ

ದೇಹವೆಂಬುವ ಅಂಗಿ ತೊಟ್ಟೊಡನೆ ನಾವು
ಜಾತಿಯಾದೆವು ಹೇಗೆ ಕೋಮು ಸೇರಿದೆವು?
ಅಂಗಿಗೇ ಕೋಮು ವರ್ಗ ಕುಲ ಬೆರೆಸಿ
ಅಂಗಿಯೇ ನಾವೆಂಬ ಹುಂಬರಾಗಿ
ತಂಗುದಾಣವನೆ ಶಾಶ್ವತವೆಂದು ನಂಬಿ
ಹೊಲ ಉತ್ತು ಕೈಯಾರೆ ಕಲಹ ಬೆಳೆಸಿದೆವು

ನೋಡುತಿಹನೋ ಅಲ್ಲಿ ಕಾಲಧರ್ಮ
ಎಲ್ಲ ಕುಲ ಕೋಮುಗಳ ಸಂಗಮ
ಮುಗುಳು ನಗುತಾನೆ, ಕಾಲ ಮುಗಿಯೆ ಕರೆಯುತ್ತಾನೆ
ಅವರು ಇವರೆನ್ನದೆ ಸರಿಸಮ.

ಕರೆಗೆ ಹೊರಡಲೆಬೇಕು ಕಮ್ ಕಿಮ್ಮೆನ್ನದೆ
ಮರೆತು ಕಂತೆಯನಿಲ್ಲೇ ಸುಡುಗಾಡು ಸಂತೆಯಲಿ
ತುತ್ತು ಉಣ್ಣಲು ಕೂಡ ಬಿಡುವಿಲ್ಲದೆ

ಯಾವ ಪುರುಷಾರ್ಥಕ್ಕೆ ಬಂದೆವಿಲ್ಲಿಗೆ ನಾವು?
ಏನ ಕಡೆಯಿತು ಈ ಮನುಷ್ಯ ಬುದ್ಧಿ?
ಹೋದವರು ನಾಪತ್ತೆ, ಇದ್ದವರದೇನು ಕತೆ?
ಹಿಂದೆ ಹೊರಳದ ಭೂತ ದಾರಿ

ಕಟ್ಟಿರುವೆ ಕೂಡ ಕೊಂಡೊಯ್ಯದಾ ಬಿತ್ತು
ಮೊಳೆದು ನಂಜೇರಿ ಪಸರಿಸುವ ಮುನ್ನವೇ
ಯೇಸು ಈಶ್ವರ ಅಲ್ಲಾ ಎಲ್ಲ ತೇರೇನಾಮ್
ಕರಗಿ ಮೂರನೇ ಕಣ್ಣರಳಲಿ.

■ ವೈದೇಹಿ

ವೈದೇಹಿಯವರ 'ಒಂದು ಕತ್ತಲ ಹಾಡು'

ಧಾರ್ಮಿಕ ಹಿಂಸೆಯನ್ನು ನಿರ್ವಚಿಸಿಕೊಳ್ಳುವ ಕವಿತೆಗಳಲ್ಲಿ ಸ್ಥೂಲವಾಗಿ ಎರಡು ಮಾದರಿಗಳನ್ನು ಗುರುತಿಸಬಹುದು. ಮೊದಲನೆಯದು ವರ್ಗನೆಲೆಯಿಂದ ಚಿಂತಿಸುವ ಕಾವ್ಯ, ಕೋಮುವಾದಿ ಮತ್ತು ಕೋಮು ಸೌಹಾರ್ದತಾ ವರ್ಗಗಳನ್ನು ಕಾಣುವದು. ಕೋಮುಸೌಹಾರ್ದತಾ ವರ್ಗದ ಪರವಾಗಿ ಕೋಮುವಾದಿ ವರ್ಗದ ಚಿಂತನೆಗಳನ್ನು ವಿಶ್ಲೇಷಿಸುವದು, ಪ್ರತಿಭಟಿಸುವದು, ಈ ಹಿಂಸೆಯನ್ನು ಒಂದು ನಿರ್ಧಿಷ್ಟವರ್ಗ ನಡೆಸುತ್ತಿದೆ. ಅದು ಅದರ ವ್ಯವಸ್ಥಿತ ಕಾರ್ಯಕ್ರಮ. ಅದರ ಉಳಿವಿನ ದಾರಿ ಎಂಬ ರಾಜಕೀಯ ಎಚ್ಚರದೊಂದಿಗೆ ಬರೆಯುವ ಕಾವ್ಯ. ಎರಡನೆಯದು ಧರ್ಮದ ಹೆಸರಿನಲ್ಲಿ ನಡೆಯುತ್ತಿರುವ ಹಿಂಸೆಗೆ ಮನುಕುಲದ ಪ್ರತಿನಿಧಿಯಾಗಿ ತಾನೂ ಜವಾಬ್ದಾರ ಎಂಬ ಎಚ್ಚರದಿಂದ ಬರೆಯುವ ಕಾವ್ಯ. ಹಿಂಸೆಯನ್ನು ತನ್ನೊಳಗೆ ಹುಡುಕುವ ದಾರಿ. ಹಿಂಸೆಗೆ ಕಾರಣರಾದವರನ್ನು ವೈರಿಗಳೆಂದು ಭಾವಿಸದೇ ತನ್ನದೇ ಬಂಧುಗಳೆಂಬ ಅಂತಃಕರಣ ದೃಷ್ಟಿ ಇಲ್ಲಿ ಮುಖ್ಯ. ಈ ಎರಡೂ ಮಾದರಿಗಳಿಗೂ ತನ್ನದೇಯಾದ ಮಿತಿ ಮತ್ತು ಸಾಧ್ಯತೆಗಳಿವೆ. 'ಕಾವ್ಯ' ವಾಗುವಲ್ಲಿ ಎರಡನೆಯ ಮಾದರಿಗೆ ಹೆಚ್ಚು ಸರಳ ಸಹಜ ಸಾಧ್ಯತೆ ಇದೆ. ಮೊದಲನೆಯ ಮಾದರಿ ಹೆಚ್ಚು ಆತಂಕಗಳನ್ನೆದುರಿಸಿ ಗೆಲ್ಲಬೇಕಾಗುತ್ತದೆ. ಮೊದಲನೆಯ ಮಾದರಿಯ ಧನಾತ್ಮಕ ಸಂಗತಿಯೆಂದರೆ ಅದರ ರಾಜಕೀಯ ದೃಷ್ಟಿಕೋನ. ಅದು ಹಿಂಸಾತ್ಮಕ ರಾಜಕೀಯ ಚಿಂತನೆಯನ್ನು ವಿರೋಧಿಸಬೇಕೇ ಹೊರತು ಹಿಂಸೆಗೆ ಕಾರಣರಾದ ಮನುಷ್ಯರ ವರ್ಗವನ್ನಲ್ಲ. ಹಿಂಸೆಗೆ ಕಾರಣರಾದ ಮನುಷ್ಯರನ್ನು ಆ ಚಿಂತನೆಯ ರೂಪಕವಾಗಿಸುವಲ್ಲಿ ಎಚ್ಚರವಹಿಸ ಬೇಕಾಗುತ್ತದೆ. ವಾಚ್ಯವಾಗುವ, ಪ್ರಣಾಳಿಕೆಯಾಗುವ, ಕಿರುಚಾಟ, ಬೈಗುಳವಾಗುವ ಸರಳ ಸಾಧ್ಯತೆ ಇರುತ್ತದೆ. ಇಂಥ ಆತಂಕಗಳನ್ನು ಮೀರಿಯೂ ಒಳ್ಳೆಯ ಕಾವ್ಯ ಸೃಷ್ಟಿಸಲು ಸಾಧ್ಯ. ಚಂಪಾ ಅವರ 'ನೀವು ಪಡಕೊಂಡದ್ದು?' ಕವಿತೆಯನ್ನಿಲ್ಲಿ ನೆನಪಿಸಬಹುದು. ಎರಡನೆಯ ಮಾದರಿಯ ಕಾವ್ಯ ಬೇಗ ತಟ್ಟುತ್ತದೆ. ವಿಶ್ವಾತ್ಮಕ ನೆಲೆಯ ಚಿಂತನೆಗಳನ್ನು ಒಳಗೊಂಡಿರುತ್ತದೆ. ವ್ಯಕ್ತಿ ಮತ್ತು ಸಮಾಜದ ನಡುವೆ ಅಭೇದವನ್ನು ಕಲ್ಪಿಸುತ್ತದೆ. ಉದಾರವಾದಿ ಮಾನವೀಯತೆಯನ್ನು ಪ್ರತಿಪಾದಿಸುತ್ತದೆ. ಇಂಥ ಕಾವ್ಯದ ಅಪಾಯಗಳೂ ಕಡಿಮೆ ಏನಲ್ಲ, ನಿಜವಾಗಿಯೂ ಹಿಂಸೆಗೆ ಕಾರಣರಾದ ವ್ಯಕ್ತಿಗಳು ಮತ್ತು ಚಿಂತನೆಗಳು ಗ್ರಹಿಕೆಗೆ ಬಾರದೇ ಹೋಗುತ್ತವೆ. ತನ್ನದಲ್ಲದ ಕುಕೃತ್ಯದ ಜವಾಬ್ದಾರಿಯನ್ನು ತಾನು ಹೊತ್ತು ಸ್ವಯಂಮರುಕಕ್ಕೀಡಾಗುವ ಸಾಧ್ಯತೆಯೂ ಉಂಟು. ಹಿಂಸೆಯ ಕಾರಣಗಳೇ ಗ್ರಹಿಕೆಗೆ ಬರುವದಿಲ್ಲ. ಹಿಂಸೆಯ ಪರಿಣಾಮಕೇಂದ್ರಿತ ಕಾವ್ಯವಿದು. ಇಂಥ ಕಾವ್ಯ ಭಾವನಾತ್ಮಕವಾಗಿ ಹಿಂಸೆಯನ್ನು ವಿರೋಧಿಸುತ್ತದೆಯೇ ಹೊರತು ಹಿಂಸೆಗೆ ಕಾರಣವಾದ ತತ್ವ ಮತ್ತು ಕಾರ್ಯಕ್ರಮಗಳನ್ನಲ್ಲ.

ಒಂದು ರಾಜಕೀಯ ಚಿಂತನೆಯನ್ನು ಜನರಿಗೆ ಮುಟ್ಟಿಸಲು ಕವಿತೆಯನ್ನೇಕೆ ಬರೆಯಬೇಕು? ಕರಪತ್ರವಾದರೂ ಸಾಕು, ವಿಮರ್ಶೆ ವೈಚಾರಿಕ ಲೇಖನ ಆ ಕೆಲಸ ಮಾಡುತ್ತವೆ ಎಂಬಂಥ ವಾದಗಳು ಇವೆ. ಆದರೆ ಒಂದು ಕರಪತ್ರ ಮತ್ತು ವಿಮರ್ಶಾತ್ಮಕ ವೈಚಾರಿಕ ಲೇಖನ ಮಾಡಲು ಸಾಧ್ಯವಾಗದ ಪರಿಣಾಮವನ್ನು ಕಾವ್ಯ ಮಾಡ ಬಲ್ಲದು; ಅವುಗಳಿಗೆ ಸಾಧ್ಯವಾಗುವದಕ್ಕಿಂತ ಹೆಚ್ಚು ಪರಿಣಾಮಕಾರಿ ಯಾಗಿ ಚಿಂತನೆಗಳನ್ನು ಸಂವೇದನೆಗಳ ರೂಪದಲ್ಲಿ ಕಾವ್ಯ ಮುಟ್ಟಿಸಬಲ್ಲದು.

ಉದಾ:

'ಗಾಂಧಿಯನು ಹುಡುಕುತ್ತ, ಗುಜರಾತಿಗೆ ಹೋಗಿದ್ದೆ, ಅಲ್ಲಿ ಸಿಕ್ಕಿದ್ದು, ಅವನ ಒಡಕು ಕನ್ನಡಕ'

(ಎಚ್. ದುಂಡಿರಾಜ್)

ಗಾಂಧಿ– ಹುಟ್ಟುಗುರುಡರ, ಓಣಿಯಲ್ಲಿ, ಚಾಳೀಸು ಮಾರಿದವ'

(ಜಂಬಣ್ಣ ಅಮರಚಿಂತ)

ನನಗೂ ಧ್ವಜ ಹಾರಿಸಬೇಕೆಂಬ ಆಸೆ ಆದರೇನು ಮಾಡಲಿ, ನನ್ನ ಲಂಗೋಟಿ ಹರಿದು ಚಿಂದಿಯಾಗಿದೆ'

(ತಮಿಳು ಕವಿತೆ)

ಈ ಪುಟ್ಟ ಪುಟ್ಟ ರೂಪಕಗಳು ಕಟ್ಟಿಕೊಡುವ ರಾಜಕೀಯ ಚಿಂತನೆಗಳು ಒಂದು ಸುದೀರ್ಘ ಲೇಖನ ಅಥವಾ ದೊಡ್ಡ ಕರಪತ್ರದಿಂದ ಸಾಧ್ಯವಿಲ್ಲ. ಇದುವೇ ಕಾವ್ಯದ ಶಕ್ತಿ, ಗದ್ಯ ಸೋತಲ್ಲಿ ಕಾವ್ಯ ಗೆಲ್ಲುತ್ತದೆ. ಒಂದು ಚಿಂತನೆಯನ್ನು ಗದ್ಯದಲ್ಲಿ ವಿವರಿಸುವಾಗಿನ ಅಸೂಕ್ಷ್ಮಗಳು ಕಾವ್ಯದಲ್ಲಿ ಕಡಿಮೆಯಾಗುತ್ತವೆ.

'ಒಂದು ಕತ್ತಲಹಾಡು' ಎರಡನೆಯ ಮಾದರಿಯ ಕವಿತೆ. ಅದು ಕೋಮುವಾದಿ ವರ್ಗವನ್ನು ಗ್ರಹಿಸುವದಿಲ್ಲ. ಇಲ್ಲಿ ನಡೆಯುವ ಎಲ್ಲ ಚಟುವಟಿಕೆಗಳಿಗೂ 'ನಾವು' ಕಾರಣವೆಂಬ ನೆಲೆಯಿಂದ ಆರಂಭ ವಾಗುತ್ತದೆ. ಎರಡನೆಯ ಮಾದರಿಯ ಕವಿತೆಗಳ ಮಿತಿ ಮತ್ತು ಸಾಧ್ಯತೆಗಳು ಈ ಕವಿತೆಯಲ್ಲಿ ಕಂಡುಬರುತ್ತವೆ. ವಿಶ್ವಾತ್ಮಕವಾದ ಅಂತಃಕರಣ ಕವಿತೆಯನ್ನು ಮುನ್ನಡೆಸುತ್ತದೆ. ಆದರೆ ಈ 'ನಾವು' ಎಂಬ ಬಳಕೆಯಲ್ಲಿ 'ಗಾಂಧಿ ಮತ್ತು ಗೋಡ್ಸೆ'ಗಳು ಒಂದೇಯಾಗಿಬಿಡುವ ಅಪಾಯವನ್ನು ಗಮನಿಸಲೇಬೇಕಾಗುತ್ತದೆ. ಈ ಮಾದರಿಯ ಕವಿತೆಗಳು ಗಾಂಧಿಯೊಳಗಿನ ಗೋಡ್ಸೆ ಹಾಗೂ ಗೋಡ್ಸೆಯೊಳಗಿನ ಗಾಂಧಿಯನ್ನು ಹುಡುಕುವ ಸೂಕ್ಷ್ಮತೆಯನ್ನು ಒಳಗೊಂಡಿರುವುದಿಲ್ಲ. ಸಾಧಾರಣೀಕರಣದ ಪರಿಣಾಮ ಗುಣಾತ್ಮಕವಾಗಿರಬೇಕೆಂದೇನಿಲ್ಲ. ಸೌಹಾರ್ದತೆಯ ಆದರ್ಶ ಇಲ್ಲಿ ಮುಖ್ಯ. ಸಮಕಾಲೀನ ಕುಲಪ್ರಜ್ಞೆ ಮತ್ತು ಅದರ ಪರಿಣಾಮವಾದ ಕೋಮು ಹಿಂಸೆಯನ್ನು ಜನಸಾಮಾನ್ಯರ ಅನುಭಾವಿಕ ಸ್ತರದಿಂದ ಸಮಾಧಾನವಾಗಿಯೇ ವಿರೋಧಿಸುವ ಕವಿತೆ 'ಒಂದು ಕತ್ತಲ ಹಾಡು', 'ಆಗಂತುಕರು ನಾವು ಜಗ ಅತಿಥೇಯ' ಎಂಬ ಮೊದಲ ಸಾಲು ಕವಿತೆಗೆ ಅಗತ್ಯ ಪ್ರವೇಶಿಕೆಯನ್ನು ನೀಡುತ್ತದೆ. ಅದು ಕವಿತೆಯ ಕ್ಯಾನವಾಸು ಸಹ ಆಗಿದೆ. ಜಗತ್ತಿಗೂ ಮನುಷ್ಯರಿಗೂ ಇರುವ ಸಂಬಂಧದ ನಿರ್ವಚನ ಇಲ್ಲಿದೆ. 'ನಾವು' ಎನ್ನುವಲ್ಲಿ ಸಮಸ್ತ ಮನುಕುಲದ ಪ್ರತಿನಿಧೀಕರಣವಿದೆ. ಬದುಕಿನ ಕ್ಷಣಿಕತೆ ಮತ್ತು ಸಾವಿನ ಎಚ್ಚರಗಳ ಪರಂಪರಾಗತ ಅನುಭಾವದ ಅಭಿಮತವನ್ನು ಪುನಃಸಂಘಟಿಸುತ್ತದೆ.

ಜನಮಾನಸದ ಅನುಭಾವ ಆಧ್ಯಾತ್ಮಿಕತೆ

'ಅಲ್ಲಿರುವುದು ನಮ್ಮನೆ ಇಲ್ಲಿರುವುದು ಸುಮ್ಮನೆ' 'ಸ್ವರ್ಗನರಕ ಮರ್ತ್ಯಗಳ ಕಲ್ಪನೆ' 'ಪೂರ್ವಜನ್ಮ, ಪೂರ್ವವಾಸನೆ, ಪೂರ್ವಸ್ಮರಣೆಯ ಗ್ರಹೀತಗಳು' 'ಹಣೆಬರಹ ಅಥವಾ ಕರ್ಮಸಿದ್ಧಾಂತ' ಈ ಬಗೆಯ ನಂಬಿಕೆ ಹಾಗೂ ಚಿಂತನೆಗಳಿಂದ ರೂಪತಾಳಿದ ಜನಮಾನಸದ ಧಾರ್ಮಿಕತೆ ಮತ್ತು ಅನುಭಾವಿಕತೆಯ ನೆಲೆಯಿಂದ ಕವಿತೆ ಹುಟ್ಟುತ್ತದೆ. ಇದು ಸಾಮಾನ್ಯ ಜನತೆಯ ಸಂವೇದನಾಕ್ರಮವಾಗಿರುವದರಿಂದ ಇದಕ್ಕೆ ತನ್ನದೇಯಾದ ವೈಶಿಷ್ಟ್ಯವಿದೆ. ಈ ಜಗತ್ತಿನಲ್ಲಿ ನಾವು ಅತಿಥಿ ಗಳಾಗಿರುವದರಿಂದ 'ನಾವೆಷ್ಟು ನಮ್ಮ ಕೆಲಸವೆಷ್ಟು' ಎಂಬ ಅರಿವನ್ನು ಇಟ್ಟುಕೊಳ್ಳಬೇಕು. ನಾವೆಲ್ಲ ಇಲ್ಲಿ ಸೇರಿರುವದು ಯಾವದೋ

ನಿಮಿತ್ತಕ್ಕಾಗಿ, ಕೂಡಿ ಕಲೆತು ಉಂಡು ಉಟ್ಟು ಪರಸ್ಪರರಿಗಾಗಿ ಸ್ಪಂದಿಸುವ 'ಎಲ್ಲರೊಳಗೊಂದಾಗುವ' ಗುಣಬಿಟ್ಟು ಹೀಗೆ ಯಾಕಿದ್ದೇವೆ? ಎಂಬ ಆತ್ಮವಿಮರ್ಶೆಯ ಧಾಟಿಯಲ್ಲಿ ಕವಿತೆ ಮುಂದುವರಿಯುತ್ತದೆ.

ವೈದೇಹಿಯವರ ಅಭಿವ್ಯಕ್ತಿಯ ಮುಖ್ಯ ನೆಲೆ ಕುಟುಂಬ, ಹಾಗಾಗಿ ಕೂಡುವ ಹಂಚಿಕೊಳ್ಳುವ ಉಣ್ಣುವ ಉಡುವ ಮಿಡಿವ ಒಳಗೊಳ್ಳುವ ಎಲ್ಲಕ್ರಿಯೆಗಳನ್ನು ಕುರಿತ ಸಂಭ್ರಮ ಮತ್ತು ಅದು ಸಾಧ್ಯವಾಗದ ವಿಷಾದಗಳೆರಡನ್ನೂ ಧ್ವನಿಸುವದು ಸಾಧ್ಯವಾಗಿದೆ. ಇಡೀಜಗತ್ತು ಎಂಬುದನ್ನೇ ಒಂದು ಕುಟುಂಬದ ತೆಕ್ಕೆಗೆ ತಂದುಕೊಳ್ಳುವ 'ವಸುದೈವ ಕುಟುಂಬಕಂ' ಎಂಬುದರ ಮೂರ್ತತೆ ಇಲ್ಲಿ ಸಾಧ್ಯವಾಗಿದೆ.

'ಮಿಡಿವ ಚಿಂತಿಪ ಒಳಗೊಂಬ' ಗುಣಗಳ ಅಗತ್ಯವನ್ನು ಕವಿತೆ ಪ್ರತಿಪಾದಿಸುತ್ತದೆ. ಸಂವೇದನಾಶೀಲತೆ, ಚಿಂತನಾಶೀಲತೆ ಮತ್ತು ಸ್ವೀಕಾರಮನೋಭಾವವೇ ಮನುಕುಲದ ಉಳಿವಿಗೆ ಅಗತ್ಯ ಮೌಲ್ಯಗಳು. ಕೋಮುವಾದ ಈ ಮೌಲ್ಯಗಳನ್ನು ನಾಶಮಾಡುತ್ತಿರುವದರಿಂದ ಅವುಗಳನ್ನು ಉಳಿಸಿಕೊಳ್ಳುವ ಆಶಯ ವ್ಯಕ್ತವಾಗಿದೆ. ಮನುಷ್ಯರು ಏನಿದ್ದರೂ ಅತಿಥಿಗಳು. ಭೂಮಿ ಅವರ ಆಸ್ತಿಯಲ್ಲ, ಅದರ ಮೇಲೆ ಯಾವುದೇ ಹಕ್ಕು ಇಲ್ಲ. ಹೀಗಿರುವಾಗ ನೀರನ್ನು ಸೇರುವ ವಿಷಜಂತು ತೊಟ್ಟಿಯನ್ನೇ ವಿಷಯುಕ್ತಗೊಳಿಸುವಂತೆ ಮನುಷ್ಯರು ಹುಸಿ ಸೊಕ್ಕಿನಿಂದ ತಮ್ಮ ವ್ಯಕ್ತಿಗತ ದುರ್ಗುಣಗಳ ಕಾರಣದಿಂದ ಭೂಮಿಯ ಬದುಕನ್ನು ಹಾಳುಗೆಡವುತ್ತಿದ್ದಾರೆ. ಪರಹಿತವನ್ನು ನಾಶಗೊಳಿಸುವವರಿಗೆ ಸ್ವ ಹಿತದ ಕಲ್ಪನೆ ಇರದು. ಅವರ ಮನಸ್ಸು ಬೇಡವಾದದ್ದನ್ನು ತುಂಬಿಕೊಂಡಿರುವ ಕಸದ ತೊಟ್ಟಿಯಾಗಿರುತ್ತದೆ. ಭೂಮಿ ನಮ್ಮ ಆಸ್ತಿಯಲ್ಲ ಎಂಬ ಅನುಭಾವಿಕ ಚಿಂತನೆಗೆ ಅವಕಾಶ ನೀಡುವ ಕವಿತೆ ಭೂಮಿಯ ಒಡೆತನ ಅಸಮಾನ ಹಂಚಿಕೆಯ ಕಾರಣಕ್ಕಾಗಿಯೇ ಧರ್ಮಬಳಕೆಯಾಗುವದನ್ನು, ಕೋಮುವಾದ ಬೆಳೆಯುತ್ತಿರುವದನ್ನು ಗ್ರಹಿಸುವದಿಲ್ಲ. ಜಾತಿಧರ್ಮಗಳ ಭೇದದ ಬೇಲಿಯನ್ನು ಕಟ್ಟಿ ಚಲನಶೀಲವಾದ ಬದುಕನ್ನು ಸ್ಥಾವರಗೊಳಿಸಿದ್ದೇವೆ. 'ಜಂಗಮದ ಬೆಳಕನ್ನು ನಂದಿಸಿದ್ದೇವೆ'. ಹೀಗಾಗಿ ಇಲ್ಲಿರುವದು ಕತ್ತಲೆ. 'ಬೀಸಿಕೊಂಡೆವು ಕತ್ತಿ ಒಬ್ಬರೊಬ್ಬರ ಮೇಲೆ, ಕಣ್ಣುಕಾಣದ ಕತ್ತಲಲ್ಲಿ', ಧಾರ್ಮಿಕ ಹಿಂಸೆಯ ಸ್ವರೂಪವನ್ನು ಅದರ ಲಕ್ಷಣಗಳನ್ನು ವಿವರಿಸುವ ಅದ್ಭುತವಾದ ಪ್ರತಿಮೆ ಇದು. ಯಾರಿಗೂ ಕಣ್ಣು ಕಾಣುವುದಿಲ್ಲ. ಅದೊಂದು ಕತ್ತಲೆಯ ಲೋಕ, ಎಲ್ಲರ ಕೈಯಲ್ಲಿ ಕತ್ತಿಗಳಿವೆ ಮತ್ತು ಪರಸ್ಪರ ಬೀಸಿಕೊಳ್ಳುತ್ತಿದ್ದೇವೆ. ಕೆಲವು ಕೋಮುಗಲಭೆಗಳ ಸಂದರ್ಭಗಳಲ್ಲಿ ಬಹಿರಂಗವಾಗುವ ಈ ಹಿಂಸಾರತಿ ಕಾಣಲಾರದೆಯೂ ನಮ್ಮೊಳಗೆ ನಿರಂತರವಾಗಿ ಕ್ರಿಯಾಶೀಲವಾಗಿರುತ್ತದೆ. ಅಂತರಂಗದ ಬೆಳಕು ಆರಿಹೋಗಿದೆ. ವರ್ತಮಾನದಲ್ಲಿ ನಡೆಯುತ್ತಿರುವ ಹಿಂಸಾರತಿಯನ್ನು ಸಾರ್ಥಕವಾಗಿ ಹೇಳಲಾಗಿದೆ. ಕತ್ತಲನ್ನು ಸೃಷ್ಟಿಸಿಕೊಂಡವರೂ ನಾವೇ, ಕತ್ತಿ ಬೀಸುತ್ತಿರುವವರೂ ನಾವೇ. ಕತ್ತಿಯ ಉನ್ಮಾದಕ್ಕೆ ಬಲಿಯಾಗುತ್ತಿರುವವರೂ ನಾವೇ. ಕೊಲ್ಲುವದು ಕೂಡ ಒಂದು ದೊಡ್ಡ ಸಾವು. ಕತ್ತಲೆಯಲ್ಲಿ ನಾವು, ನಮ್ಮವರು, ನಮ್ಮ ಸಂತತಿ ಕಣ್ಣಿಗೆ ಕಾಣುವದಿಲ್ಲ. ಕತ್ತಲೆಗೆ ಶತ್ರುವನ್ನೂ ಮಿತ್ರನನ್ನೂ ಬೇರ್ಪಡಿಸಿ ತೋರುವ ಶಕ್ತಿಯೂ ಇಲ್ಲ. ನಾವು ಬೀಸಿದ ಕತ್ತಿ ನಮ್ಮನ್ನೇ ಇರಿಯಬಹುದು. ಈ ಪ್ರತಿಮೆ ಒಂದು ಪ್ರಕ್ರಿಯೆಯ ಚಿತ್ರಣವಲ್ಲ. ಚಿತ್ರಣದ ನಂತರ ಅಸಂಖ್ಯ ಪ್ರಕ್ರಿಯೆಗಳ ಕಲ್ಪನೆಗೆ ಅವಕಾಶ ನೀಡುತ್ತದೆ. ಒಂದು ದೊಡ್ಡ ಭಾವನೆ ಚಿಂತನೆಯನ್ನು ಸ್ಪಷ್ಟಪಡಿಸಲು ಅನೇಕ ರೀತಿಯಲ್ಲಿ ಕಲ್ಪಿಸಿಕೊಳ್ಳಲು ಅವಕಾಶವಿರುವದು ಈ ಪ್ರತಿಮೆಯ ಪರಿಣಾಮಕಾರಿ ತತ್ವವನ್ನು ಹೆಚ್ಚಿಸಿದೆ.

ಮಾನವ ನಿರ್ಮಿತ ವಿಕೃತಿಯನ್ನು ಒರೆಗೆ ಹಚ್ಚಲು ಬಹುತೇಕ ಕವಿಗಳು ಪ್ರಕೃತಿಯೆಡೆಗೆ ಮುಖಮಾಡುತ್ತಾರೆ. ಪ್ರಕೃತಿಯನ್ನು ಹಿಂಸೆಗೆ ಎದುರು ನಿಲ್ಲಿಸುವ ಮಾದರಿಗಳನ್ನು ಒಟ್ಟಾಗಿ ಚರ್ಚಿಸಬಹುದು. ಈ ಜಗತ್ತಿನಲ್ಲಿ 'ನಾವು ಆಗಂತುಕರು' ಎನ್ನುವಾಗ ಜಗತ್ತಿನ ಸಮಸ್ತ ಜೀವಕೋಟಿಯಲ್ಲಿ ಮನುಷ್ಯನೂ ಒಬ್ಬ ಎನ್ನುವ ಎಚ್ಚರವಿದೆ. ಈ ಜಗತ್ತು ದಟ್ಟಕಾಡಾದಾಗ ಇಲ್ಲಿಗೆ ಬಂದವರು ನಾವಲ್ಲ, ನಾವು ಅತಿಥಿಗಳಾಗಿ ಬಂದಾಗ ನಮ್ಮ ಸೌಲಭ್ಯಕ್ಕೆ ಬೇಕಾದ ಸಂಗತಿಗಳು ರೂಪಿತವಾಗಿವೆ. ಇಲ್ಲಿ ಸೌಂದರ್ಯವಿದೆ, ಪರಿಪುಷ್ಪತೆ ಇದೆ, ಪಕ್ವತೆ ಇದೆ, ಪರಿಮಳದ ಸುಂದರ ಹೂವುಗಳರಳಿದ್ದ ತೋಟವಿದು. ಬೀಸುವ ಗಾಳಿ ಹಣ್ಣು ಕಾಯಿಗಳ ಗಿಲಕಿಗಳಿವೆ, ಒಂದು ಮರದಲ್ಲರಳಿದ ಸಹಸ್ರ ಎಲೆಗಳು ಪರಸ್ಪರ ಕುಶಲೋಪರಿಯಲ್ಲಿ ತೊಡಗಿ ಸಂತಸದ ಕಚಗುಳಿಯನ್ನು ನಮಗೂ ತಲುಪಿಸುತ್ತಿವೆ. ಪ್ರಕೃತಿಯ ಚರಾಚರಗಳ ಸಾಹಚರ್ಯದಿಂದ ಶಬ್ದ ಹುಟ್ಟಿ ಹಾಡು ಹರಡುತ್ತಿದೆ. ಹಕ್ಕಿಗೂಡಲ್ಲಿ ಮರಿಗಳು ಒಣ ಎಲೆಗಳ ತಲ್ಪದಲ್ಲೂ ಪರಮ ಸುಖಿಗಳು. ಇಂಥ ಸುಂದರ ಜಗವನ್ನು ಕೆಡಿಸುತ್ತಿರುವ ಅವಿವೇಕವನ್ನು ಕವಿ ಪ್ರಶ್ನಿಸುತ್ತಾರೆ. ಪ್ರಕೃತಿಯ ಸೃಷ್ಟಿ ಹಾಗೂ ಮಾನವ ನಿರ್ಮಿತಗಳ ನಡುವಿನ ಅಹಿಂಸೆ ಮತ್ತು ಹಿಂಸೆಗಳ ಸ್ವರೂಪವನ್ನು ಕುರಿತು ಕವಿತೆ ಚಿಂತಿಸಿದೆ. ಮನುಷ್ಯ ಹಿಂಸೆಯನ್ನು ಉತ್ಪಾದನೆ ಮಾಡುತ್ತಿರುವ ರೀತಿಯನ್ನು ವ್ಯವಸಾಯ ಪ್ರಕ್ರಿಯೆಯೊಂದಿಗೆ ಮೇಳವಿಸಲಾಗಿದೆ. ಜೀವನದಲ್ಲಿ ಯಾವುದೇ ತಾತ್ವಿಕತೆ ಇಲ್ಲದ ವ್ಯಕ್ತಿಗಳು ಕ್ಷಣಿಕತೆಯ ಉನ್ಮಾದಕ್ಕೆ ಬಲಿಯಾಗುತ್ತಿರುವುದರ ಬಗ್ಗೆ ಆತಂಕ ವ್ಯಕ್ತವಾಗಿದೆ. 'ಗಿಡನೆಡುವ ಬದಲು ಕಿಡಿಯನೆಟ್ಟೆವು ನಾವು' ಎಂಬ ಸಾಲು ನಮ್ಮ ನಮ್ಮ ಜೀವಿತದ ಉದ್ದೇಶವನ್ನೇ ಮರೆತು, 'ಯಾರದೋ ಜಗವೆಂದು ಭೇದವೆಣಿಸದಿರು' (ಡಿವಿಜಿ) ಎಂಬಂತೆ ಸಿದ್ಧವಾದ ತೋಟದಲ್ಲಿ ಕಿಡಿಯನ್ನು ನೆಟ್ಟು ಬೆಂಕಿಯನ್ನು ಬೆಳೆಸಲು ಹೊರಟವರು ನಾವು. ಬದುಕಿನ ಸಹಜ ಆಟವನ್ನು ಮೋಸದಾಟವನ್ನಾಗಿ ಪರಿವರ್ತಿಸಿದ್ದೇವೆ. ಅವುಗಳ ಬೆಳವಣಿಗೆಗೆ ರಾಸಾಯನಿಕಗಳೂ ಆಗಿದ್ದೇವೆ. ಅವುಗಳನ್ನು ವೇಗವಾಗಿ ಬೆಳೆಸುತ್ತಿದ್ದೇವೆ. ಪ್ರೀತಿಯನ್ನು ಚಿವುಟಿ ದ್ವೇಷದ ಉಪದೇಶದಲ್ಲಿ ಕೆಟ್ಟ ಕನಸುಗಳ ಗರಿಯನ್ನು ಧರಿಸಿ ನಿಂತಿದ್ದೇವೆ. ಕೋಮುಭಾವ ಜಾತಿ ಭಾವದ ಬೆಳವಣಿಗೆ ಮನುಷ್ಯರಿಗಷ್ಟೇ ಅಲ್ಲ ಜೀವಸಂಕುಲಕ್ಕೆ ಅಪಾಯವನ್ನು ತಂದೊಡ್ಡಿದೆ. ದ್ವೇಷದ ಬಾಂಬು ಪ್ರಕೃತಿಯನ್ನು ಸುಡುತ್ತಿದೆ. ಆಧುನಿಕತೆಯ ಆಗಮನದ ಮೂಲಕ ಕೋಮುವಾದೀ ಚಿಂತನೆ ಬೆಳೆದು ಬಂದುದನ್ನು ಕವಿತೆ ಸೂಕ್ಷ್ಮವಾಗಿ ಧ್ವನಿಸುತ್ತದೆ.

ಸಮಕಾಲೀನ ವಾಸ್ತವವನ್ನು ವಿಶ್ಲೇಷಿಸಿಕೊಳ್ಳುತ್ತ ಕವಿತೆ ಮತ್ತೆ ಅನುಭಾವದ ಕಡೆಗೆ ಚಲಿಸುತ್ತದೆ. ಇಲ್ಲಿಯ ಅನುಭಾವ ಮನುಷ್ಯ ವಿವೇಕವನ್ನು ಮರೆಮಾಚಿರುವ ವಿಸ್ಮಯವನ್ನು ಕುರಿತಾಗಿದೆ. ದೇಹ ಎನ್ನುವದು ಅಂಗಿ, ವ್ಯಕ್ತಿಯೆಂದರೆ ದೇಹವಷ್ಟೇ ಅಲ್ಲ ದೇಹಬದ್ಧವಾಗಿ ಆಲೋಚಿಸಿದಾಗ ಮಾತ್ರ ಕುಲಜಾತಿ ಕೋಮುಗಳ ವರ್ತುಲ ಬಂಧಿಸುತ್ತದೆ. ಪ್ರತಿಯೊಂದು ಧರ್ಮವೂ ವ್ಯಕ್ತಿಯನ್ನು ಜೀವ ಮತ್ತು ಆತ್ಮವೆಂದು ನೋಡುವಾಗ ಧಾರ್ಮಿಕರು ಎಂದುಕೊಂಡಿರುವ ನಾವು ಮಾತ್ರ ವ್ಯಕ್ತಿಯನ್ನು ದೇಹವಾಗಿ ಯಾಕೆ ನೋಡುತ್ತೇವೆ? ಆತ್ಮದ ಅನಂತ ಚಲನೆಯಲ್ಲಿ ಈ ದೇಹವಾಸ ಒಂದು ನಿಮಿತ್ತ. ಅದೊಂದು ಅಲ್ಪವಿರಾಮ, ಜನಪದ ತಾತ್ವಕತೆಯಲ್ಲಿ ಗಿಳಿ ಮತ್ತು ಪಂಜರದ ಕಲ್ಪನೆ, ತನು ಮತ್ತು ಹಂಸದ ಕಲ್ಪನೆಗಳು ಅರಳಿರುವದನ್ನು ಗಮನಿಸಬಹುದು. 'ನಾವು ಬಂದಿವೆಲ್ಲಿಂದ? ಮುಂದೆ ನಡೆವುದೆಲ್ಲಿಗೆ ಈಗ ಇರುವುದ್ಯಾತಕೆ? ಎಂಬ ಸರಳ ತಾತ್ವಿಕತೆಯನ್ನು ಕೋಮುವಾದಿ ಹಿಂಸೆಗೆ

ಪ್ರತಿಯಾಗಿನಿಲ್ಲಿಸುವ ಆ ಮೂಲಕವಾದರೂ ತಪ್ಪನ್ನು ತಿದ್ದುವ ಭಾವನೆ ಇಲ್ಲಿದೆ.

ಕವಿತೆಯ ಮೂರನೇ ಹಂತದಲ್ಲಿ 'ಕಾಲ ಧರ್ಮ'ದ ಪ್ರಸ್ತಾಪ ಬರುತ್ತದೆ. ದೈವೀ ಶಕ್ತಿಯ ಸರ್ವಾಂತರ್ಯಾಮಿ ಪರಿಕಲ್ಪನೆ ಮತ್ತು ಸರಿ ತಪ್ಪುಗಳಿಗೆ ಅಂತಿಮ ನಿರ್ಣಯವಿದೆ ಎಂಬ ನಂಬಿಕೆ ಸಾಮಾನ್ಯವಾಗಿ ಎಲ್ಲ ಧರ್ಮಗಳಲ್ಲಿ ಅಡಕವಾಗಿದೆ. ಕರ್ಮ ಸಿದ್ಧಾಂತದ ನೆಲೆ ಕೂಡ ಈ ನಂಬಿಕೆಯೇ. ಯಮಧರ್ಮನಿಗೆ ಕುಲ ಕೋಮುಗಳ ಹಂಗಿಲ್ಲ. ಅವನ ಕರೆಗೆ ಹೋಗುವಾಗ ಎಲ್ಲ ಕಂತೆಯನ್ನು ಈ ಸಂತೆಯಲ್ಲೇ ಒಗೆಯಬೇಕು. 'ಕೊಂದಹರುಳಿವರೇ?' ಎಂಬ ಜಿಜ್ಞಾಸೆಯನ್ನು ಕವಿ ಬಳಸಿಕೊಳ್ಳುತ್ತಾರೆ. ಹಿಂಸೆಯನ್ನು ಪ್ರಚೋದಿಸಿ, ಮನುಷ್ಯತ್ವವನ್ನು ಧಿಕ್ಕರಿಸುವವರಿಗೆ ಅಂತ್ಯದ ನೆನಪಿನಿಂದಲಾದರೂ ಮೃದುಗೊಳಿಸುವದು ಸಾಧ್ಯವಾದೀತೇ? ಎಂಬ ಹತಾಶೆಯ ಧ್ವನಿ ಇಲ್ಲಿದೆ. 'ಮೂರು ದಿನದ ಸಂತಿ' ಸುಡುಗಾಡು ಸಂತಿಯಾಗಿರುವದು ಕೋಮುವಾದದ ಪ್ರತಿಫಲ.

ಇಲ್ಲಿಗೆ ಬಂದ ಪುರುಷಾರ್ಥವೇನು, ಧರ್ಮ, ಅರ್ಥ, ಕಾಮ, ಮೋಕ್ಷಗಳಲ್ಲಿ ಏನನ್ನು ಪಡೆದೆವು ಅಥವಾ ಯಾವ ಸಾರ್ಥಕತೆಯನ್ನು ಪಡೆದೆವು. ಮನುಷ್ಯ ಬುದ್ಧಿಯ ದುರವಸ್ಥೆ ಇದೇನು? ಅನುದಿನದ ನೂರಾರು ಸಂಗತಿಗಳು ನಮ್ಮೊಳಗಿಳಿದು ನಮ್ಮನ್ನುಳಿಸುವುದಿಲ್ಲವೇಕೇ?

ಬೆಳಕಿನ ಆಶಯ: (ಅರಿವು ಜ್ಞಾನ ಪರ್ಯಾಯವೆಂಬ ಗ್ರಹಿಕೆ)

ಮೂರು ದಿನದ ಸಂತಿಯನ್ನು ಸುಡುಗಾಡು ಸಂತೆಯಾಗಿಸುವಾಗ ಬದುಕಿನ ನಶ್ವರತೆಯೇಕೆ ನಮ್ಮ ಗಮನಕ್ಕೆ ಬರುವುದಿಲ್ಲ? ಯಾವ ಭೌತಿಕ ಸುಖಕ್ಕಾಗಿ ದ್ವೇಷದ ದಳ್ಳುರಿಯನ್ನು ಹಬ್ಬಿಸುತ್ತಿದ್ದೇವೋ ಆ ಜಗವೇ ನಮ್ಮದಲ್ಲ. ಈ ದೇಹ ನಾನಲ್ಲ, ಹೋದವರನ್ನು ಮತ್ತೆ ಕಾಣಲಾರೆವು, ಇದ್ದವರೂ ನಿನ್ನೆ ಎಂಬ ಭೂತಕ್ಕೆ ಮತ್ತೆಂದೂ ಹೊರಳಲಾರದಂತೆ ಅಸಹಾಯಕರು, ಭೂತಕಾಲವೆಂಬದು ಹಿಂದೆ ಹೊರಳದ 'ಭೂತದಾರಿ'ಯಂತೆಯೇ.

ಈ ಜಗದ ಸಕಲ ಜೀವರಾಶಿಗಳಲ್ಲಿ ಒಂದಾಗಿರುವ ಇರುವೆ ಕೂಡ ತಿರಸ್ಕರಿಸುವ, ಅದು ತನ್ನೊಂದಿಗೆ ಒಯ್ಯದಿರುವ ಬೀಜವನ್ನು ಬಿತ್ತಿದ್ದೇವೆ ನಾವು. ಈ ಸ್ಥಿತಿಗೆ ಪರ್ಯಾಯವನ್ನು ಕವಿ ಸೂಚಿಸುತ್ತಾರೆ. 'ಏಸು ಈಶ್ವರ ಅಲ್ಲಾ' ಎಂಬ ಹೆಸರುಗಳೆಲ್ಲ ಕರಗಿ ಜ್ಞಾನದ ಕಣ್ಣು ತೆರೆಯಲಿ ಎಂಬುದು ಅವರ ಆಶಯ. 'ಕತ್ತಲೆಯ ಹಾಡು' ಬೆಳಕಿನ ಬೀಜಬಿತ್ತುವ ಕನಸುಗಾರಿಕೆಯನ್ನು ಒಳಗೊಂಡಿದೆ. ಕತ್ತಲೆಗೆ ಪರ್ಯಾಯ ಬೆಳಕೇ. ಈ ಎಲ್ಲ ಹಿಂಸೆಗೆ ಕಾರಣ ಅಜ್ಞಾನ. ಅರಿವಿನ ಮೂಲಕ ಆ ಅಜ್ಞಾನವನ್ನು ಕಳೆದುಕೊಂಡು ಸರ್ವಧರ್ಮ ಸಮನ್ವಯದ ಆಶಯವನ್ನು ರೂಪಿಸಿಕೊಳ್ಳಬಹುದಾಗಿದೆ. ಮೂರನೆಯ ಕಣ್ಣು, ಹಳೆಯದೆಲ್ಲ ಸುಟ್ಟು ಉರಿದು ಹೊಸ ಮೊಳಕೆ ಚಿಗುರಲಿ ಎಂಬ ನಾಶ ಮತ್ತು ಪುನರ್ ಸೃಷ್ಟಿಯ ಸಂಕೇತವೂ ಆಗಿದೆ. 'ಹಳೆಯದೆಲ್ಲ ಪ್ರಳಯವಾಗಿ ಹೊಸಬಿತ್ತು ಹುಟ್ಟಲಿ' (ಜಿ.ಎಸ್.ಎಸ್. ಹೊಸ ಹಾಡು) ಎಂಬ ಆಶಯವನ್ನು ನೆನಪಿಸುತ್ತದೆ.

ಈ ಕವಿತೆಯು 'ನಾವು' ಎಂಬ ಬಹುತ್ವವನ್ನು ಸ್ವೀಕರಿಸಿದೆ. ಸಾಮಾನ್ಯವಾಗಿ ಕವಿ ತನ್ನ ಜಗತ್ತನ್ನು ಶೋಷಿತ ಕೇಂದ್ರವನ್ನಾಗಿ ಸ್ವೀಕರಿಸುತ್ತಾನೆಯೇ ಹೊರತು ಶೋಷಕ ಕೇಂದ್ರವಾಗಿ ಅಲ್ಲ (ನಾನು ಬೇಟೆಯ ಜತೆಗಿದ್ದೇನೆ, ಬೇಟೆಗಾರನ ಜತೆಗಲ್ಲ–ಜಂಬಣ್ಣ ಅಮರಚಿಂತ) ಆದರೆ ಈ ಕವಿತೆಯಲ್ಲಿ ಕೋಮುದಂಗೆ ಹಿಂಸೆಗೆ ಕಾರಣರಾದವರನ್ನೂ ತನ್ನವರು, ತನ್ನಂಥಹ ಮನುಷ್ಯರು ಎಂದು ಒಪ್ಪಿಕೊಂಡೇ ಅವರನ್ನ ಪ್ರಶ್ನಿಸುವ ವಿಧಾನವಿದೆ. ಇದು ತಾಯ್ತನದ ಗುಣ. ಕೆಟ್ಟವರನ್ನೂ ಕೆಟ್ಟದ್ದನ್ನು ಉಡಿಯಲ್ಲಿ ಹಾಕಿಕೊಂಡು ಕೊನೆಯುವರೆಗೂ ತಿಳಿ ಹೇಳುವ ಮಮಕಾರದ ಮಾರ್ಗವಿದು. ಕೋಮುವಾದವನ್ನು ಗ್ರಹಿಸುವ ಹಲವು ಮಾದರಿಗಳಲ್ಲಿ ಇದೂ ಒಂದು.

ಧಾರ್ಮಿಕತೆಯ ಒಂದು ಮಾದರಿ

ಶಿಷ್ಟ ಮತ್ತು ಜನಪದ ಧರ್ಮಗಳು ಕಟ್ಟಿಕೊಟ್ಟಿರುವ ಒಂದು ಆಳವಾದ ನೈತಿಕ ಪ್ರಜ್ಞೆಯ ಹಿನ್ನೆಲೆಯಲ್ಲಿ ಕವಿತೆ ಕೋಮವಾದದ ಸ್ವರೂಪ ಮತ್ತು ಪರಿಣಾಮಗಳನ್ನು ಚರ್ಚಿಸುತ್ತದೆ. ಧಾರ್ಮಿಕತೆಯ ನಿಜ ಸ್ವರೂಪವನ್ನು ಈ ಕವಿತೆಯ ಮೂಲಕ ತಿಳಿಯಬಹುದು. ಒಂದು ಧರ್ಮದ ಜಡತೆಯ ನಡುವೆಯೂ ಅಲ್ಲಿನ ಕೆಲವು ಚಿಂತನೆಗಳನ್ನು ಧನಾತ್ಮಕವಾಗಿ ಬಳಸಿಕೊಳ್ಳುವ ಸಾಧ್ಯತೆಯನ್ನು ಕವಿತೆ ತೋರುತ್ತದೆ. ಆಳದಲ್ಲಿ ಇದು ಪರಲೋಕ ಕೇಂದ್ರಿತ ಸ್ವರ್ಗನಿಷ್ಠ ಕವಿತೆ. ವೈದಿಕ ನಂಬಿಕೆಯ ಬುನಾದಿಯ ಮೇಲೆಯೇ ಕಟ್ಟಲ್ಪಡುತ್ತದೆ. ಆದರೆ 'ಇಹವು ಕ್ಷಣಿಕ ಇಲ್ಲಿರುವ ನೋವು ಸಂಕಟಗಳಿಗೆ ಚಿಂತಿಸಬಾರದು ಪರದಲ್ಲಿ ಸುಖವಿದೆ' ಎಂಬ ಪರೋಹಿತಶಾಹಿ ಚಿಂತನೆಯನ್ನು ಪ್ರತಿಪಾದಿಸುವದಿಲ್ಲ ಅಥವಾ ಬದುಕಿನ ಕ್ಷಣಿಕತೆಯನ್ನು ನಶ್ವರತೆಯೆಡೆಗೆ, ನಿರಾಶೆಯ ಹತಾಶೆಗಳೆಡೆಗೆ ತಿರುಗಿಸುವದಿಲ್ಲ. ಬದಲಾಗಿ ಕ್ಷಣಿಕವಾದ ಬದುಕನ್ನು ಸುಂದರವಾಗಿ ಕಟ್ಟಿಕೊಳ್ಳುವ ಹಂಬಲವನ್ನು ವ್ಯಕ್ತಪಡಿಸುತ್ತದೆ.

ಇಡೀ ಕವಿತೆಯನ್ನು ನಿಯಂತ್ರಿಸುವ ಸಂಗತಿಯೆಂದರೆ ವಿಷಾದ. ಆ ವಿಷಾದ ವರ್ತಮಾನದ ಮನುಷ್ಯನ ಹಿಂಸಾತ್ಮಕ ಚಟುವಟಿಕೆಗಳನ್ನು ಗಟ್ಟಿಯಾಗಿ ತಿರಸ್ಕರಿಸುತ್ತದೆ. ತಲೆಬರಹ ಕೂಡ ಆ ವಿಷಾದವನ್ನು ಸಮರ್ಥವಾಗಿ ಧ್ವನಿಸುತ್ತದೆ. ಕವಿತೆಯಲ್ಲಿ ಚಿಂತನೆಗಳ ಹೇರಿಕೆಯಿಲ್ಲ. ಅನುಸಂಧಾನದ ಮೂಲಕ ತಿಳಿಯಪಡಿಸುವ ಮತ್ತು ತನ್ನನ್ನೇ ತಾನು ಅರಿಯುವ ಆ ಅರಿವನ್ನು ವಿಸ್ತರಿಸುವ ವಿಧಾನದಿಂದ ಕವಿತೆ ಎಲ್ಲೂ ತನ್ನ ಜೀವಂತಿಕೆಯನ್ನು ಕಳೆದುಕೊಳ್ಳುವದಿಲ್ಲ. 'ಹೋದವರು ನಾಪತ್ತೆ ಇದ್ದವರದೇನು ಕತೆ'? ಎಂಬಂಥ ಸರಳ ಪ್ರಶ್ನೆಗಳ ಮೂಲಕವೇ ಕವಿತೆ ಭವಿಷ್ಯ ಚಿಂತನೆ ನಡೆಸುತ್ತದೆ.

ಕವಿತೆಯ ತಾತ್ವಿಕ ಮಿತಿ

ಈ ಕವಿತೆ ವರ್ತಮಾನದ ಸಮಸ್ಯೆಗಳ ಕಾರಣವನ್ನು ಮನುಷ್ಯರ ತಪ್ಪು ಆಲೋಚನೆ ಮತ್ತು ದುಡುಕು ಕ್ರಿಯೆಗಳಲ್ಲಿ ಗುರುತಿಸುತ್ತದೆ. ಆದರೆ ಕೋಮುವಾದ ಬೆಳೆಯಲು ಕಾರಣವಾದ ರಾಜಕೀಯ ಆರ್ಥಿಕ ಸಂಗತಿಗಳನ್ನು ಗಮನಿಸುವದಿಲ್ಲ. ಸಂಪ್ರದಾಯಬದ್ಧ ಮುಗ್ಧ ಮನಸ್ಸು ತನ್ನ ತಿಳಿವಿನ ಪ್ರಾಮಾಣಿಕತೆಯಲ್ಲಿ ಅಮಾನವೀಯತೆಯನ್ನು ವಿರೋಧಿಸುವ ಮತ್ತು ಹಿಂಸೆಯನ್ನು ಅಲ್ಲಗಳೆಯುವ ಪ್ರಕ್ರಿಯೆ ಈ ಕವಿತೆಯಲ್ಲಿದೆ. ಕೋಮುವಾದದ ವರ್ತಮಾನದ ವಿಕಾರರೂಪ ಮತ್ತು ಅದರ ಭಯಾನಕ ಪರಿಣಾಮಗಳನ್ನು ಕವಿತೆ ಗ್ರಹಿಸುತ್ತದೆ. ಕಾರಣವನ್ನು ಚಿಂತಿಸುವದು ಕವಿತೆಗೆ ಮುಖ್ಯ ಎನ್ನಿಸಿಲ್ಲ. ಆ ಕಾರಣವನ್ನು ವ್ಯಕ್ತಿಗತ ನೆಲೆಯಲ್ಲೇ ಶೋಧಿಸುತ್ತದೆ. ಆಳವಾದ ಧಾರ್ಮಿಕತೆಯೊಂದಿಗೆ ಕೋಮುವಾದಕ್ಕೆ ಮುಖಾಮುಖಿಯಾಗುವ ಬಹುತೇಕ ಕವಿತೆಗಳು ಕೋಮುವಾದದ ಕಾರಣಗಳನ್ನು ವ್ಯಕ್ತಿನಿಷ್ಠೆ ನೆಲೆಯಲ್ಲಿಯೇ ಶೋಧಿಸಲು ಯತ್ನಿಸುತ್ತವೆ. ಆ ಮಟ್ಟಿಗೆ ಅದೂ ಕೂಡ ಮಹತ್ವದ್ದೆ. ವ್ಯಕ್ತಿ ಮತ್ತು ಸಮಾಜದ ಸಂಬಂಧದಲ್ಲಿ ಸಮಾಜ ಕೇಂದ್ರಿತವಾಗಿ ಚಿಂತಿಸುವ ವಿಧಾನಕ್ಕೆ ಭಿನ್ನವಾಗಿ ವ್ಯಕ್ತಿಕೇಂದ್ರಿತವಾಗಿ ಚಿಂತಿಸುವ ಕ್ರಮಕೂಡ ಕೆಲವು ಸೂಕ್ಷ್ಮ ಸಂಗತಿಗಳನ್ನೂ ತಿಳಿಸಬಹುದು. ಒಂದು ಸಮಾಜ ನಿರ್ಮಾಣದಲ್ಲಿ 'ವ್ಯಕ್ತಿಯ' ಪಾಲುದಾರಿಕೆಗೆ ಇಲ್ಲಿ ಮಹತ್ವವಿದೆ. ಎಡಪಂಥೀಯ ಮತ್ತು ಸಮಾಜವಾದಿ ಚಿಂತನೆಗಳಲ್ಲಿ 'ವ್ಯಕ್ತಿ' 'ವ್ಯಕ್ತಿ

ವಿಶಿಷ್ಟತೆ' 'ವ್ಯಕ್ತಿ ಪ್ರಜ್ಞೆ' 'ವ್ಯಕ್ತಿ ಸಾಧ್ಯತೆ'ಗಳು ಸಂಪೂರ್ಣವಾಗಿ ನಿರ್ಲಕ್ಷಕ್ಕೆ ಒಳಗಾಗಿರುತ್ತವೆ. ವ್ಯಕ್ತಿಗತ ಬದಲಾವಣೆಯ ಮೂಲಕ ಸಾಮಾಜಿಕ ಬದಲಾವಣೆಯ ಪ್ರತಿಪಾದನೆ ಉದಾರವಾದಿ ದೃಷ್ಟಿಕೋನವಾಗಿದೆ. ಸಾಮಾಜಿಕ ಬದಲಾವಣೆಯ ಪ್ರಕ್ರಿಯೆಯಲ್ಲಿ ವ್ಯಕ್ತಿ ಮತ್ತು ಸಮಾಜ ಎರಡಕ್ಕೂ ಸಮಾನ ಆದ್ಯತೆಯನ್ನು ನೀಡಿದವರು ವಚನಕಾರರು. ವೈದೇಹಿಯವರ ಚಿಂತನೆಯಲ್ಲಿ 'ನಾವು' ಅಂದರೆ 'ಮನುಕುಲ' ವ್ಯಕ್ತಿಗತ ನೆಲೆಯಲ್ಲಿ ಹಿಂಸಾವಿರೋಧಿಗಳಿಗಾಗಿ ಮಾನವೀಯ ಗುಣಗಳನ್ನು ಮೈಗೂಡಿಸಿಕೊಳ್ಳುವ ಒತ್ತಾಸೆಯಿದೆ. ಇದು ಪರಿಣಾಮಕೇಂದ್ರಿತ ಕಾವ್ಯವೇ ಹೊರತು ಕಾರಣ ಕೇಂದ್ರಿತ ಕಾವ್ಯವಲ್ಲ.

ಅಭಿವ್ಯಕ್ತಿ ವಿಧಾನ

'ಕತ್ತಲು' ಕನ್ನಡ ಕವಿಗಳ ಅಭಿವ್ಯಕ್ತಿಗೆ ಒಂದು ಶಾಶ್ವತವಾದ ರೂಪಕ. ಒಂದು ಪದವನ್ನು ಕಾಲದಿಂದ ಕಾಲಕ್ಕೆ ಭಿನ್ನರೂಪಕವಾಗಿಸುವದೇ ಕಾವ್ಯದ ಶಕ್ತಿ. ಭಕ್ತಕವಿಗಳ ಪಾಲಿಗೆ ಕತ್ತಲು ಅಜ್ಞಾನದ ರೂಪಕ (ಶರಣರು–ದಾಸರು). ದೇಹಮೂಲವಾದ ಲೌಕಿಕದ ಮಾಯಾಜಾಲ ವನ್ನು ಒಳಗೊಳ್ಳುವ ವ್ಯಾಮೋಹದ ಸಂಕೇತ. ನವೋದಯ ಕವಿಗಳಲ್ಲಿ ಇದಕ್ಕೆ ಹೊರತಾದವರೆಂದರೆ ಪು.ತಿ.ನ. ಅವರು. "ಬೇಂದ್ರೆಯವರಿಗೆ ಬೆಳಕಿನ ಬಗ್ಗೆ ಇದ್ದ ನಂಬಿಕೆ, ಉತ್ಸಾಹ ಪು.ತಿ.ನ ಅವರಿಗೆ ಕತ್ತಲೆಯ ಬಗ್ಗೆ ಇರುವದು ಕಂಡುಬರುತ್ತದೆ." ಪು.ತಿ.ನ ಅವರಿಗೆ ಕತ್ತಲು ದುಷ್ಟ ಶಕ್ತಿಗಳ ಸಂಕೇತವಲ್ಲ ಮಂಗಲಮಯವಾದ ವಿಶ್ವದ ಸ್ಥಿತಿಲಯಗಳಿಗೆ ಕಾರಣವಾದ ಶಕ್ತಿ. ನವ್ಯರಲ್ಲಿ (ಅಡಿಗ) ಬದುಕನ್ನು ಎದುರಿಸಲಾಗದ ವ್ಯಕ್ತಿಗತ ಅಸಹಾಯಕತೆ ಹಾಗೂ ಭಯಗ್ರಸ್ಥ ಸ್ಥಿತಿಗೆ ಸಂಕೇತ (ಹೆಳವನ ಹೆಗಲ ಮೇಲೆ) ದಲಿತ ಬಂಡಾಯದಲ್ಲಿ ಅದು ಅಧೋಜಗತ್ತಿನ ಹಸಿವು ಸಂಕಟದ ಅಭಿವ್ಯಕ್ತಿ. ಶೋಷಿತ ಬದುಕಿನ ರೂಪಕ. ೯೦ರ ದಶಕದ ನಂತರದ ಕಾವ್ಯದಲ್ಲಿ 'ಕತ್ತಲು' ಮತಾಂಧತೆಯ ರೂಪಕವಾಗಿ ಬಳಸಲ್ಪಟ್ಟಿದೆ. ಕಾಲಾಂತರದಲ್ಲಿ ಒಂದೇ ಪದವನ್ನು ವಿಭಿನ್ನ ಅರ್ಥದ ರೂಪಕವಾಗಿಸುವದೇ ಕಾವ್ಯದ ಶಕ್ತಿ. ಹೀಗಾಗಿ ಕಾವ್ಯ ಭಾಷೆಯನ್ನು ಮರುಸೃಷ್ಟಿಸುತ್ತದೆ. ನವೀಕರಿಸುತ್ತದೆ. ಇದರ ಹಿಂದಿನ ಒತ್ತಡ ಅಂತಿಮವಾಗಿ ಬದುಕಿನದೇ. ವೈದೇಹಿಯವರ 'ಒಂದು ಕತ್ತಲ ಹಾಡು' ಕವಿತೆಯಲ್ಲಿ ಕೂಡ ಕತ್ತಲು ಕೇಂದ್ರರೂಪಕವಾಗಿದೆ. ಬೆಳಕಿನ ಹಾಡು ಹಾಡಲಾಗದ ಸ್ಥಿತಿಯಲ್ಲಿ ಮಾತ್ರ ಕತ್ತಲ ಹಾಡು ಹುಟ್ಟುತ್ತದೆ. 'ಒಂದು ಕತ್ತಲ ಹಾಡು' ಕವಿತೆಯಲ್ಲಿ ಕೂಡ ಕತ್ತಲು ಕೇಂದ್ರ ರೂಪಕವಾಗಿದೆ. ಬೆಳಕಿನ ಹಾಡು ಹಾಡಲಾಗದ ಸ್ಥಿತಿಯಲ್ಲಿ ಮಾತ್ರ ಕತ್ತಲ ಹಾಡು ಹುಟ್ಟುತ್ತದೆ. 'ಒಂದು ಕತ್ತಲ ಹಾಡು' ಎಂಬ ತಲೆಬರಹದಲ್ಲಿ ಹಲವು ಕತ್ತಲೆಗಳಲ್ಲಿ ಕವಿ ಒಂದನ್ನು ಆಯ್ದುಕೊಂಡ ಬಗ್ಗೆ ಸೂಚನೆ ನೀಡುತ್ತಾರೆ. ಇದು ಬದುಕಿನ ಬಗ್ಗೆ ಅಸಹಾಯಕತೆ, ನಿರಾಸೆಯ ಭಾವ ಸ್ಥಾಯಿಯಾದಾಗ ಹುಟ್ಟಿದ ಕವಿತೆ. ಭಕ್ತಿಯ ಕಾವ್ಯ, ರೊಮ್ಯಾಂಟಿಕ್ ಕಾವ್ಯ ಮತ್ತು ನವ್ಯಕಾವ್ಯದಲ್ಲಿ ಕತ್ತಲೆಯ ರೂಪಕ ವ್ಯಕ್ತಿಗತ ನೆಲೆಯಿಂದ ರೂಪತಾಳುತ್ತದೆ. ಅದು ಸಹಜವಾದ ಇರುವಿಕೆಯಾಗಿ ಕಾಣಿಸುತ್ತದೆ. ಸಮಾಜವಾದಿ ಕಾವ್ಯದಲ್ಲಿ 'ಕತ್ತಲೆ' ಒಂದು ಮಾನವ ಸೃಷ್ಟಿಯಾಗಿ ನಿರೂಪಿತವಾಗುತ್ತದೆ. ಕತ್ತಲೆಯನ್ನು ಸೃಷ್ಟಿಸುವ ಶಕ್ತಿಗಳು ಬೇರೆ, ಆ ಕತ್ತಲೆಯಲ್ಲಿ ಬದುಕಬೇಕಾದ ಸಮುದಾಯಗಳೇ ಬೇರೆ. ದಲಿತ ಬಂಡಾಯ ಸಾಹಿತ್ಯದಲ್ಲಿ 'ಕಪ್ಪು' ಏಕಮುಖವಾಗಿ ಚಿತ್ರಣಗೊಂಡಿದೆ. ಕುಂ.ವೀ.ಯವರ ಕಥಾನಾಯಕನ ಹೆಸರೇ ಕತ್ತಲ. ಒಂದು ಸಾಮಾಜಿಕ ನೆಲೆಯಲ್ಲಿ ಕತ್ತಲೆಯ ರೂಪಕ ಬಳಸಲ್ಪಟ್ಟಿದೆ. ಸಮಕಾಲೀನ ಕಾಲವನ್ನು ಕೋಮುವಾದ ವಿರೋಧಿ ಚಳುವಳಿಯ ಸಂದರ್ಭವೆಂದು ಗುರುತಿಸುವುದಾದರೆ ಕೋಮುವಾದದ ಒಟ್ಟು ಪರಿಣಾಮಗಳನ್ನು ಸೂಚಿಸಲು ಕತ್ತಲೆಯ ರೂಪಕ ಬಳಸಲ್ಪಡುತ್ತಿದೆ. ಮೂಲಭೂತವಾದ, ಧಾರ್ಮಿಕ ಮೌಢ್ಯ, ಮತಾಂಧತೆ, ಧಾರ್ಮಿಕ ಹಿಂಸೆಗಳಿಂದ ಉಧ್ವಸ್ತಗೊಂಡಿರುವ ಅಶಾಂತ ಬದುಕನ್ನು ಕತ್ತಲೆಯ ರೂಪಕ ಸಮರ್ಥವಾಗಿ ಧ್ವನಿಸುತ್ತಿದೆ.

ಈ ಕವಿತೆಯ ರಚನಾ ವಿನ್ಯಾಸವು ಅತ್ತ ಪದ್ಯವೂ ಅಲ್ಲದ ಇತ್ತ ಗದ್ಯವೂ ಅಲ್ಲದ 'ವಚನ'ಗಳ ಮಾದರಿಯನ್ನು ಹೋಲುತ್ತದೆ. ಅಂಶಗಣ ಮತ್ತು ಮಾತ್ರಾಗಣಗಳ ಸಮ್ಮಿಶ್ರಣವಿದೆ. 'ಸಮಾನ ಮಾತ್ರಾ' ಪ್ರಮಾಣವಿರದೇ ಹೋದರೂ ಪಾದಗಳಲ್ಲಿ ಆಂತರಿಕ ಲಯಗಾರಿಕೆ ಇದೆ. ಪಾದಪಾದಗಳ ಮಧ್ಯ ಲಯ ಸಂಬಂಧ ಸಾಧ್ಯವಾಗಿದೆ. ಅಲ್ಲಲ್ಲಿ ಕಂಡು ಬರುವ ಅಂತ್ಯಪ್ರಾಸ ಲಯವನ್ನು ನಿಯಂತ್ರಿಸುತ್ತವೆ. ಕವಿತೆಗೆ ಚೆಲುವನ್ನು ನೀಡಿದೆ. ಸಾಮಾನ್ಯವಾಗಿ ಪದ್ಯಗಳ ಮೊದಲ ಸಾಲು ಸಮಾನ ಲಯವನ್ನು ಮಾತ್ರಾಪ್ರಮಾಣ ಹೊಂದಿರುವದರಿಂದ ಪ್ರತಿ ಭಾಗವೂ ಒಂದೇ ಬಗೆಯಲ್ಲಿ ಓದನ್ನು ಆರಂಭಿಸಿಕೊಳ್ಳುತ್ತದೆ. ಇದನ್ನು ಹಾಡಲೂ ಕೂಡ ಸಾಧ್ಯವಿದೆ. ಇದು ಕ್ರಾಂತಿಗೀತೆಯ ಮಾದರಿಯದಲ್ಲ, ಭಾವಗೀತೆ ಮಾದರಿಯದು. ಹೆಣ್ಣುಮಕ್ಕಳ ಹಾಡುಗಾರಿಕೆಯ ಕೆಲವು ಸಂಗತಿಗಳು ಇದರಲ್ಲಿ ಸೇರ್ಪಡೆಯಾಗಿವೆ. ತ್ರಿಪದಿ, ದ್ವಿಪತಿ, ಚೌಪದಿಗಳ ಅಂಶಗಣಾನ್ವಿತತೆ ಇದ್ದರೂ ಅವುಗಳ ಚರಣ ಖಚಿತತೆ ಇಲ್ಲ. ತಾತ್ವಿಕ ಬದ್ಧತೆ ಮತ್ತು ಕಾರಣ ಕೇಂದ್ರಿತ ನೆಲೆಯಿಂದ ಹುಟ್ಟುವ ಹಾಡುಗಳು ಕ್ರಾಂತಿಗೀತೆಯ ಸ್ವರೂಪವನ್ನು ತಾಳಿದರೆ ಉದಾರವಾದಿ ನೆಲೆಯಿಂದ ಕೋಮುವಾದವನ್ನು ಗ್ರಹಿಸುವ ಹಾಡುಗಳು ಭಾವಗೀತಾತ್ಮಕತೆಯನ್ನು ಪಡೆಯುತ್ತವೆ. ಅಲ್ಲಿ ವ್ಯವಸ್ಥೆಯ ಬದಲಾವಣೆಯ ಒತ್ತಡವಿದ್ದರೆ ಇಲ್ಲಿ ವ್ಯಕ್ತಿಯ ಹೃದಯ ಪರಿವರ್ತನೆಯ ಆಶಯವಿರುತ್ತದೆ. ಎರಡೂ ಕವಿತೆಗಳ ಹಿಂದೆ ಭವಿಷ್ಯವನ್ನು ಕುರಿತಾದ ಆಶಾವಾದ ಕೆಲವೊಮ್ಮೆ ರೊಮ್ಯಾಂಟಿಕ್ ಆಗುವ ಸಾಧ್ಯತೆ ಇದ್ದೇ ಇದೆ. ಕವಿತೆಯೊಂದಕ್ಕೆ ಇರುವ ಓದುವ ಹಾಗೂ ಹಾಡುವ ಎರಡೂ ಸಾಧ್ಯತೆಗಳು ಧನಾತ್ಮಕವೂ ಋಣಾತ್ಮಕವೂ ಆದ ಎರಡೂ ಪರಿಣಾಮುಗಳನ್ನು ಉಂಟು ಮಾಡಬಹುದು. ಕ್ರಾಂತಿಗೀತೆಗಳು ಶೋಷಿತ ವರ್ಗದಲ್ಲಿ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಪರಿಣಾಮಕಾರಿಗಳಾದರೆ, ಭಾವಗೀತಾತ್ಮಕವಾದ ಕವಿತೆಗಳು ಶೋಷಕ ವರ್ಗದಲ್ಲಿ ಪರಿಣಾಮಕಾರಿಯಾದ ಪ್ರಭಾವ ಬೀರಬಹುದು. ಎರಡೂ ಕವಿತೆಗಳು ಎರಡೂ ವರ್ಗಗಳ ಮೇಲೆ ಮಾಡುವ ಪರಿಣಾಮ ಕೂಡ ಮುಖ್ಯವಾದಷ್ಟೇ ಕವಿತೆಯೊಂದರ ರೂಪ, ರೂಪತಾಳುವ ಹಿನ್ನೆಲೆಯಲ್ಲಿ ಲೇಖಕರ ವರ್ಗೀಯ ಅನುಭವ ಬದುಕಿನ ವಾಸ್ತವಗಳು ಪ್ರೇರಕವಾಗುವ ಸಾಧ್ಯತೆಯನ್ನು ಪರಿಶೀಲಿಸಬಹುದಾಗಿದೆ. ವೈದೇಹಿ ಈ ಕವಿತೆಯನ್ನು ಬರೆಯಲು ಇದನ್ನು ಹಾಡಾಗಿಸಲು ಸಾಧ್ಯವಾದದ್ದರ ಹಿನ್ನೆಲೆಯಲ್ಲಿ ಅವರು ಜನಪದ ಹಾಡುಗಳೊಂದಿಗೆ ತಾದ್ಯಾತ್ಮ ಸಾಧಿಸಿರುವದು, ಧಾರ್ಮಿಕತೆಯನ್ನು ಒಪ್ಪಿಯೂ ಧಾರ್ಮಿಕ ಹಿಂಸೆಯನ್ನು ವಿರೋಧಿಸುವ ತಾತ್ವಿಕತೆ ಹೊಂದಿರುವದು, ಸನಾತನವಾದ ಧಾರ್ಮಿಕ ಚಿಂತನೆ ಗಳೊಂದಿಗೆ ಬದುಕಿನ ಒಡಲಲ್ಲಿಯೇ ಪ್ರೀತಿಯ ಸಂಬಂಧ ಹೊಂದಿರುವದು, ಶಿಷ್ಟ ಮತ್ತು ಜಾನಪದಗಳೆರಡರಿಂದಲೂ ಪ್ರಭಾವಿತಗೊಂಡು ರೂಪ ತಾಳುವ ಜನಸಮುದಾಯದ ಸಾಮಾನ್ಯ ಜ್ಞಾನದೊಂದಿಗೆ ಅನುಸಂಧಾನವನ್ನು ಏರ್ಪಡಿಸಿಕೊಂಡಿರುವದು, ವೈದಿಕ ಚಿಂತನಾ ಪರಿಕಲ್ಪನೆಗಳೊಂದಿಗೆ ಸಹಜವಾಗಿ ನಂಟನ್ನು ಹೊಂದಿರುವುದು, ಕರಾವಳಿಯ ಪರಿಸರದಲ್ಲಿ ನಡೆಯುತ್ತಿರುವ ಹಿಂಸಾತ್ಮಕ ಚಟುವಟಿಕೆಗಳಿಂದ ಆಳದಲ್ಲಿ ನೊಂದಿರುವದು... ಏನೆಲ್ಲಾ ಕಾರಣಗಳನ್ನು ಗುರುತಿಸಬಹುದು. ಒಂದು ಹಾಡಿನ ಹಿಂದೆ ಎಷ್ಟೆಲ್ಲ ಸಂಗತಿಗಳು ಕೆಲಸ ಮಾಡಿರುತ್ತವೆ.

ಭಾಷಿಕವಾಗಿ ವಚನಕಾರರು ಎದುರಿಸಿದ ಸಮಸ್ಯೆ ಮತ್ತು ಕಂಡುಕೊಂಡ ಪರಿಹಾರ ತುಂಬ ಆಧುನಿಕವಾದದ್ದು. ಈ ಬಗೆಯ ಹೊಸತನವನ್ನು ಮತ್ತೊಮ್ಮೆ ಕಾಣಲು ಸಾಧ್ಯವಾದದ್ದು ಹೊಸಗನ್ನಡದ ಬೇರೆ ಬೇರೆ ಕಾಲ ಘಟ್ಟಗಳಲ್ಲಿ, ಅಕ್ಷರ, ಮಾತ್ರಾ ಹಾಗೂ ಅಂಶ ಛಂದಸ್ಸುಗಳ ಸಿದ್ಧಪಡಿಯಚ್ಚುಗಳಲ್ಲಿ ನಿರ್ದಿಷ್ಟ ಲಯ ಪ್ರಾಸ ಯತಿಗಳ ವ್ಯವಸ್ಥೆಯಲ್ಲಿ ಅನುಭವಗಳು ಪುನರಾವರ್ತನೆಗೊಳ್ಳುತ್ತ ಏಕತಾನತೆ ನಿರ್ಮಾಣವಾಗಿತ್ತು. ವಸಾಹಾತುಶಾಹಿ ಸಾಹಿತ್ಯ ರೂಪಗಳ ಅಗಮನದಿಂದ ಕನ್ನಡ ಸಾಹಿತ್ಯದಲ್ಲಿ ಹೊಸತನಕ್ಕೆ ಅವಕಾಶವಾಯಿತು. ಕನ್ನಡ ಭಾವಗೀತೆಗೆ ಸ್ವರ ವಚನಸಾಹಿತ್ಯ, ಕೀರ್ತನೆಗಳು, ದೇಶೀ ಛಂದೋಬಂಧಗಳ ಪ್ರೇರಣೆಗಳಿದ್ದರೂ ಲಿರಿಕ್ಕಿನ ಪ್ರಭಾವದಿಂದ ಸಾಂಪ್ರದಾಯಿಕ ಛಂಧೋಬಂಧಗಳಿಂದ ಅವುಗಳ ನಿಶ್ಚಿತ ನಿಯಮ ಮತ್ತು ಏಕತಾನತೆಯಿಂದ ಪಾರಾಗುವ ದಾರಿಗಳು ಲಭ್ಯವಾದವು. ವೈದಿಕ ಸಾಹಿತ್ಯ ಹಾಗೂ (ಜೈನ) ಚಂಪೂ ಸಾಹಿತ್ಯಗಳಿಗೆ ಪರ್ಯಾಯವಾದ ದಾರಿಯನ್ನು ವಚನಕಾರರು ಶಿಷ್ಟ ಮತ್ತು ದೇಶೀಗಳ ಸಮನ್ವಯದಲ್ಲಿ ಮಾತ್ರಾ ಮತ್ತು ಅಂಶ ಛಂದಸ್ಸುಗಳ ಸಮ್ಮಿಶ್ರಣದಲ್ಲಿ ಕಂಡುಕೊಂಡರು. ಪ್ರಭುತ್ವ ವಿರೋಧಿ ಚಿಂತನೆ ಹಾಗೂ ಧರ್ಮದ ಮೂಲಕ ಎತ್ತಿ ಹಿಡಿಯಲ್ಪಡುತ್ತಿದ್ದ ಎಲ್ಲ ಬಗೆಯ ಅಸಮಾನತೆಗಳ ವಿರೋಧಿ ಚಿಂತನೆಗಳನ್ನು ಸಾಮಾಜಿಕ ಮತ್ತು ವ್ಯಕ್ತಿಗತ ನೆಲೆಯಲ್ಲಿ ವಿರೋಧಿಸುವ ಒತ್ತಡದಲ್ಲಿ ಅವರು ಅನಿವಾರ್ಯವಾಗಿ ಮಾತ್ರಾ ಮತ್ತು ಅಂಶ ಛಂದೋಬಂಧಗಳ ಕೆಲವು ಅಂಶಗಳನ್ನು ಮಿಶ್ರಣಗೊಳಿಸಿದಂತಿದೆ. ಹೆಚ್ಚು ಜನರನ್ನು ತಲುಪುವ ಒತ್ತಡ ಒಂದು ಸಾಹಿತ್ಯದ ರೂಪವನ್ನು ತೀರ್ಮಾನಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ನವೋದಯ ಕವಿಗಳು ಭಾವಗೀತೆ ರೂಪದ ಮೂಲಕ ಪ್ರಾಚೀನ ಛಂದೋಬಂಧಗಳನ್ನು ಮುರಿದು ಕಟ್ಟಿದರು. ತ್ರಿಪದಿ, ಷಟ್ಪದಿ, ಸಾಂಗತ್ಯ, ಏಳೆ ಇತ್ಯಾದಿ. 'ಭಾವಗೀತೆ' ಕೂಡ ಕೆಲವೇ ನಿಶ್ಚಿತ ಲಯಗಳಲ್ಲಿ ಏಕತಾನತೆಗೆ ಒಳಗಾದಾಗ, ಭಾವಗೀತೆಯ ಲಯಗಾರಿಕೆಯೇ ಅನುಭವದ ಸರಳೀಕರಣಕ್ಕೆ ಕಾರಣವಾಗತೊಡಗಿದಾಗ ಅನಿವಾರ್ಯವಾಗಿ ನವ್ಯ ಮುಕ್ತ ಛಂದದ ಕಡೆಗೆ ವಾಲಿತು. ದಲಿತ ಬಂಡಾಯ ಸಂದರ್ಭದಲ್ಲಿ ಮತ್ತೆ ಹಾಡುಗಳು ಒಡಮೂಡಿದವು. ವಚನಗಳನ್ನು ಮತ್ತು ದಲಿತ ಬಂಡಾಯ ಚಳುವಳಿಗಳ ಆಶಯದಲ್ಲಿ ಕೆಲವಾದರೂ ಮೂಲಭೂತ ಸಾಮ್ಯಗಳಿರುವದಿಂದ ಲಯಗಾರಿಕೆ ಮತ್ತು ಭಾಷಾ ಪ್ರಯೋಗದಲ್ಲಿ ಕೂಡಿ ಒಂದು ಬಗೆಯ ಸಾಮ್ಯತೆಯನ್ನು ಗುರುತಿಸಬಹುದಾಗಿದೆ. ವೈದಿಕ ವಿರೋಧಿ ನಿಲುವು, ಸಮಾನತೆಯ ಆಶಯ, ಸಾಮಾನ್ಯ ಜನರ ಅನುಭವಗಳ ಅಭಿವ್ಯಕ್ತಿ ಹಾಗೂ ಅವರಿಗೆ ಸಾಹಿತ್ಯವನ್ನು ತಲುಪಿಸುವ ಜವಾಬ್ದಾರಿಗಳ ನೆಲೆಗಳಿಂದ ಈ ಸಾಮ್ಯವನ್ನು ಗುರುತಿಸಬಹುದು. ಹೀಗಾಗಿ ದಲಿತ–ಬಂಡಾಯ ಕಾವ್ಯದಲ್ಲಿ ವಚನಗಳ ಗದ್ಯ ಪದ್ಯದ ನಡುವಿನ ಮಾದರಿ ಹೊಸಗನ್ನಡ ಭಾಷೆಯಲ್ಲಿ ಮೈದಾಳಿದೆ. ವೈದೇಹಿಯವರ ಒಂದು ಕತ್ತಲಹಾಡು ತನ್ನ ಲಯಗಾರಿಕೆ, ಭಾಷಿಕ ಸ್ವರೂಪ, ಕಲ್ಪಕತೆಗಳನ್ನು ರೂಪಿಸಿಕೊಳ್ಳುವದರ ಹಿಂದಿನ ಒತ್ತಡಗಳನ್ನು ಇಲ್ಲಿಯವರೆಗೆ ಚರ್ಚಿಸ ಲಾಗಿದೆ. ನವೋದಯ, ಪ್ರಗತಿಶೀಲ, ನವ್ಯ, ದಲಿತಬಂಡಾಯ – ಪ್ರಗತಿಪರ, ಪ್ರತಿಗಾಮಿ ಈ ಪರಿಕಲ್ಪನೆಗಳಾಚೆ ಕವಿತೆಯ ಹುಟ್ಟಿನ ಹಿನ್ನೆಲೆಯಲ್ಲಿರುವ 'ಸಂಕೀರ್ಣ'ವಾದ ಒತ್ತಡಗಳನ್ನು ಗಮನಿಸಲೇ ಬೇಕಾಗುತ್ತದೆ ವಸ್ತು, ಆಶಯ, ತಾತ್ವಿಕತೆ, ಲಯಗಾರಿಕೆ, ಕಾಲ್ಪನಿಕತೆ, ಸಾಮಾಜಿಕತೆ, ವೈಯಕ್ತಿಕತೆಗಳ ಕಾಲಸಂಯೋಗದ ಹಾಗೂ ಅಂತರ ಸಂಬಂಧದ ಚರ್ಚೆ ಕವಿತೆಯೊಂದರ ಹುಟ್ಟಿನಲ್ಲಿ ಪ್ರಾಮುಖ್ಯತೆ ಪಡೆಯುತ್ತವೆ. ಪ್ರಗತಿಪರ ಪ್ರತಿಗಾಮಿ, ಜೀವಪರ ಜೀವವಿರೋಧಿ, ಶೋಷಿತ – ಶೋಷಕ ಮೊದಲಾದ ಸಿದ್ಧ ಪರಿಕಲ್ಪನೆಗಳಾಚೆ ಕಾವ್ಯ ಸೃಷ್ಟಿಯ ಪ್ರಕ್ರಿಯೆ ಜರುಗುತ್ತದೆ ಮತ್ತು ಜರುಗಬೇಕು. ವೈದೇಹಿಯವರ ಕವಿತೆಗೆ ಈ ಆಯಾಮಗಳೂ ಲಭ್ಯವಾಗಿವೆ. ❑




ಗಾಂಧಾರಿ

ಹೊಸ ಬಾಳ ಕನಸ ಹೊತ್ತು
ನವವಧುವಾಗಿ ಬಂದ ರಾಜಕುಮಾರಿ,
ನಿನ್ನ ಕನಸುಗಳೆಲ್ಲ ಕೊಲೆಯಾಗಿದ್ದವು
ರಾಜ್ಯದ ಹಿತಾಸಕ್ತಿ ಅದಕ್ಕೊಂದು ನೆಪ
ನಿನ್ನ ಮೌನ ಪ್ರತಿಭಟನೆಯಾಗಿ
ಕನಸ ಹೊತ್ತ ಕಣ್ಣುಗಳ ಕಟ್ಟಿದ್ದೆ ನೀನು ಬಟ್ಟೆಯಿಂದ
ಆದರೆ ಕನಸ ಕಾಣುವುದ ಯಾಕೆ ಬಿಡಲಿಲ್ಲ?
ಕನಸಿದೆ.. ರಾಣಿಯಾಗಿ, ಹೆಂಡತಿಯಾಗಿ, ತಾಯಿಯಾಗಿ
ನೂರು ಮಕ್ಕಳ ಹೆತ್ತು ಸಲಹಿದೆ
ಅವುಗಳ ಸೌಭಾಗ್ಯವನು
ಕಟ್ಟಿದ ಕಣ್ಣುಗಳಿಂದ ಕಾಣಬಯಸಿದೆ
ಆದರೆ ಎಲ್ಲೆಡೆಯೂ ನಿನ್ನ ಕನಸುಗಳ ದಹನ
ಕ್ಷಮಿಸಿದ್ದೆಯಾ ನೀನು, ನಿನ್ನ ಕನಸ ಕೊಂದ ಜಗತ್ತನ್ನು?
ಹಠಮಾರಿ ಹೆಣ್ಣೆ, ನಿನ್ನನ್ನು ಪತಿವ್ರತೆಯೆಂದ ಸಮಾಜಕ್ಕೆ
ನಮ್ಮ ಧಿಕ್ಕಾರವಿರಲಿ

■ ಶೀತಲಾ ಭಟ್

(ಚಿತ್ರಕೃಪೆ: ಎಂ.ಎಫ್. ಉಸೇನ್)



ಮರ್ಯಾದಾ ಹತ್ಯೆಯ ಬರ್ಬರ ಕೊಲೆಗಳು

■ ಡಾ. ಕೆ. ಷರೀಫಾ

"ಮರ್ಯಾದೆ"ಯ ಪರಿಕಲ್ಪನೆ ಮಾನವ ಸಮಾಜದ ಸಾಂಸ್ಕೃತಿಕ ಬದುಕಿನಲ್ಲಿ ತನ್ನದೇ ಆದ ವಿಶಿಷ್ಟ ಸ್ಥಾನ ಹೊಂದಿದೆ. ಸಾಮಾಜಿಕ ವ್ಯವಸ್ಥೆಯಲ್ಲಿ ತನ್ನದೇ ಪರಂಪರೆ, ಚೌಕಟ್ಟು, ರೀತಿ, ನೀತಿ, ಸಂಪ್ರದಾಯಗಳನ್ನು ಹೊಂದಿರುತ್ತದೆ. ಈ ಮರ್ಯಾದೆ ಎಂಬ ಪರಿಕಲ್ಪನೆಯ ಹಿಂದೆ ಪುರುಷ ಪ್ರಾಧಾನ್ಯತೆಯೇ ಅಡಗಿದೆ. ಸಮಾಜದ ನಿಯಮಗಳನ್ನು ಉಲ್ಲಂಘಿಸಿದವರು, ಕೌಟುಂಬಿಕ ಗೌರವ ಕಾಪಾಡುವ ನೆಪದಲ್ಲಿ ಕೌರ್ಯದ ಕೊಲೆಗಳಿಗೆ ಬಲಿಯಾಗುತ್ತಾರೆ. ಕೌಟುಂಬಿಕ ಗೌರವ ಕಾಪಾಡುವುದು ಮಹಿಳೆಯರ ಹೊಣೆಯಾಗಿದೆ. ಸಮಾಜದ ನಿಯಮ ಉಲ್ಲಂಘಿಸುವ ಮಹಿಳೆಯರಿಗೆ ಶಿಕ್ಷಿಸುವ ಅಧಿಕಾರ ಪುರುಷ ವರ್ಗಕ್ಕೆ ಲಭ್ಯವಾಗಿದೆ. ಇಂತಹಾ ಮರ್ಯಾದಾ ಹತ್ಯೆ ಮಾಡುವವರು ಅಪರಿಚಿತರೇನಲ್ಲ. ಹೆತ್ತ ತಂದೆ, ತಾಯಿ, ಸೋದರರಾಗಿರುವುದು ದುರಂತದ ಸಂಗತಿಯಾಗಿದೆ.

ಇತ್ತೀಚೆಗೆ ಕುಟುಂಬದ ಮರ್ಯಾದೆ ಎಂಬ ಕಾರಣಕ್ಕೆ ದಲಿತ ಗೋವಿಂದರಾಜುವನ್ನು ಪ್ರೀತಿಸಿದ ಸುವರ್ಣಳನ್ನು ಮನೆಯವರೇ ಸಾಯಿಸಿದರು. ಇದು ನಡೆದದ್ದು ಮಂಡ್ಯದ ಅಬಲವಾಡಿ ಎಂಬ ಗ್ರಾಮದಲ್ಲಿ. ಹೆಂಡತಿಯ ನಡತೆಯ ಬಗ್ಗೆ ಸಂಶಯಗೊಂಡ ಗುಜರಾತಿನ ಪತಿಯೊಬ್ಬ ಅವಳನ್ನು ಕೊಚ್ಚಿ ಮಚ್ಚು, ತಲೆ ಎರಡೂ ಹಿಡಿದುಕೊಂಡು ಊರಿನಲ್ಲಿ ಪ್ರದರ್ಶಿಸಿ ಠಾಣೆಗೆ ಶರಣಾದನಂತೆ. ಹೀಗೆ ಸಂಶಯ ಮತ್ತು ಜಾತಿ ಭೂತದ ಬೆನ್ನೇರಿ ಹೆತ್ತ ಮಗಳನ್ನೇ ಕೊಲ್ಲುವಂತಹ ಪೈಶಾಚಿಕ ಕೃತ್ಯ ಕೈಗೊಳ್ಳುವ ಹೆತ್ತವರ ಕ್ರೌರ್ಯ ಖಂಡನಾರ್ಹ. ಇದೇ ರೀತಿ ಕನಕಪುರದ ಘಟನೆಯೂ ಸಹ. ಕ್ರೌರ್ಯ ಎಷ್ಟು ಭೀಕರವಾಗಿರುತ್ತದೋ ಅಷ್ಟೇ ಪ್ರಮಾಣದಲ್ಲಿ ಸಮಾಜದಲ್ಲಿ ಗೌರವ ಹೆಚ್ಚುತ್ತದೆಂಬ ಅಹಂ ಪುರುಷ ಪ್ರಧಾನ ವ್ಯವಸ್ಥೆಯದಾಗಿದೆ. ಪುರುಷರು ಸಾಂಪ್ರದಾಯಿಕ, ಕೌಟುಂಬಿಕ ಗೌರವದ ನಿಯಂತ್ರಣ ವಹಿಸಿಕೊಳ್ಳುತ್ತಾರೆ. ಇಂತಹ ಸನ್ನಿವೇಶಗಳಲ್ಲಿ ಹೆಣ್ಣು ಪುರುಷರ ಮತ್ತು ಸಮುದಾಯದ, ಸಮಾಜದ ಗೌರವ ಉಳಿಸುವ, ರಕ್ಷಿಸುವ ಸಾಧನಗಳಾಗುತ್ತಾಳೆ. ಗೌರವ, ಮರ್ಯಾದೆಯ ಮರೆಯಲ್ಲಿ ಹೆಣ್ಣಿನ ಚಾರಿತ್ರ್ಯ, ಶೀಲ ಮತ್ತು ಸಮಾಜಿಕ ಕಟ್ಟುಪಾಡುಗಳ ಪಾಲನೆಯೇ ಮಹತ್ವದ್ದಾಗಿದೆ. ಇಂತಹ ಕ್ರೂರ ನಿರ್ಬಂಧ, ಹಿಡಿತಗಳಿಗೆ ಸಿಕ್ಕಿದ ಮಹಿಳೆ ನಲುಗುತ್ತಿದ್ದಾಳೆ.

ಈ "ಮರ್ಯಾದಾ ಹತ್ಯೆ" ಬಹಳ ಹಿಂದಿನಿಂದಲೂ ತಮ್ಮ ಘನತೆ, ಗೌರವ ಮತ್ತು ಸಾಮಾಜಿಕ ಮರ್ಯಾದೆಗಳನ್ನು ರಕ್ಷಿಸಿಕೊಳ್ಳಬಹುದೆಂಬ ಭ್ರಮೆಯಲ್ಲಿ ಹೆಣ್ಣಿನ ಮೇಲೆ ಪುರುಷ ನಿಯಂತ್ರಣ ಸಾಧಿಸುತ್ತಾ ಬಂದಿದೆ. ಹರಿಯಾಣ, ಉತ್ತರ ಭಾರತ, ರಾಜಸ್ಥಾನ, ಮತ್ತು ಇತ್ತೀಚಿನ ಹತ್ತು ವರ್ಷಗಳಲ್ಲಿ ಕರ್ನಾಟಕ ಸೇರಿದಂತೆ ವಿವಿಧ ರಾಜ್ಯಗಳಲ್ಲಿ ಇಂತಹ ಹತ್ಯೆ ಪ್ರಕರಣಗಳು ಹೆಚ್ಚು ಹೆಚ್ಚಾಗಿ ಬೆಳಕಿಗೆ ಬರುತ್ತಿವೆ.

ಸ್ವಜಾತಿಯಲ್ಲಿಯೇ ಮದುವೆಗಳು ಏರ್ಪಡಬೇಕು. ಒಂದು ವೇಳೆ ಹುಡುಗ ಹುಡುಗಿ ತಮ್ಮಿಷ್ಟದಂತೆಯೇ ಮದುವೆಯ ತೀರ್ಮಾನಕ್ಕೆ ಬಂದರೆ ಕುಟುಂಬದ ಘನತೆ ಗೌರವಗಳು ಇಲ್ಲವಾಗುತ್ತವೆ. ಇಂತಹ ಗೌರವದ ಪರಿಕಲ್ಪನೆಗಳು ಊಳಿಗಮಾನ್ಯ ವ್ಯವಸ್ಥೆಯ ಉತ್ಪನ್ನಗಳಾಗಿವೆ. ಇದು ಕೇವಲ ಒಂದು ಜಾತಿಯ, ಒಂದು ಸಮಾಜದ ಅಥವಾ ಮಹಿಳೆಯ ಸಮಸ್ಯೆಯಲ್ಲ. ಬದಲಾಗಿ ಇದು ರೋಗಗ್ರಸ್ತ ಒಟ್ಟು ಸಮಾಜದ ಪ್ರತಿಬಿಂಬವಾಗಿದೆ.

ತಂದೆ, ಮೈದುನ, ಇಲ್ಲವೆ ಸೋದರರಿಂದಲೇ ಹತ್ಯೆಗೀಡಾಗಿದ್ದಾರೆ. ಇವರ ಹತ್ಯೆಗೆ ಕಾರಣ ಅವರ ಇಷ್ಟದ ಹುಡುಗನನ್ನು ಆಯ್ಕೆ ಮಾಡಿಕೊಂಡಿರುವುದೇ ಆಗಿದೆ. ಮನೆತನದ ಗೌರವದ ಹಿನ್ನೆಲೆಯಲ್ಲಿ ತಮ್ಮದೇ ಕರುಳ ಕುಡಿಯನ್ನು "ಮರ್ಯಾದಾ ಹತ್ಯೆ" ಮಾಡುವ ಪೈಶಾಚಿಕ ಕೃತ್ಯ ಭಯ ಹುಟ್ಟಿಸುತ್ತಿದೆ. ಮುಂಬಯಿಯ ಇಪ್ಪತ್ತಾರು ವರ್ಷದ ಶಾಲಾ ಶಿಕ್ಷಕಿ ರಾಜವಿಂದರ್ ಕೌರ್ ತಾನಿಷ್ಟಪಟ್ಟ ಹರ್ವಿಂದರ್ ಸಿಂಗ್ ಮಥಾರು ಎಂಬುವವರನ್ನು ಪ್ರೀತಿಸಿ ಮದುವೆಯಾದಳು. ರಾಜವಿಂದರ್ ಕೌರ್ "ರಂಧವಾ" ಎಂಬ ಮೇಲ್ಜಾತಿಗೆ ಸೇರಿದವರಾಗಿದ್ದಾರೆ. ಮಗಳು "ಮಥಾರು" ಕೀಳು ಜಾತಿಯ ಹುಡುಗನನ್ನು ಮದುವೆಯಾದದ್ದೇ ದೊಡ್ಡ ಅಪರಾಧವಾಯಿತು. ಅವಳ ತಂದೆ, ತಾಯಿ, ಅಣ್ಣಂದಿರು, ಸೋದರತ್ತೆ ಸೋದರಮಾವಂದಿರು ಒಟ್ಟಿಗೆ ಸೇರಿ ಅವಳ ಗಂಡ ಅತ್ತೆ ಮಾವ ಗಂಡನ ಅಣ್ಣ ಆತನ ಹೆಂಡತಿ ಎಲ್ಲರನ್ನೂ ಕೊಲೆ ಮಾಡಿದರು, ಕೌರಳ ಮೇಲೂ



ಹಲ್ಲೆ ನಡೆಸಲಾಯಿತು, ಆದರೆ ಅದೃಷ್ಟವಶಾತ್ ರಾಜವಿಂದರ್ ಕೌರ್ ಬದುಕುಳಿದಳು. ಮೇ 1999 ರ 30 ರಂದು ಈ ಘಟನೆ ನಡೆಯಿತು.

ಈ ಭಯಂಕರ ಸ್ಥಿತಿಯಿಂದ ಬದುಕುಳಿದ ಕೌರ್ ನ್ಯಾಯಕ್ಕಾಗಿ ಹೋರಾಡಿ ಕೊನೆಗೆ ನ್ಯಾಯಾಲಯ ಆಕೆಯ ಕುಟುಂಬದ 6 ಜನರನ್ನು ಅಪರಾಧಿಗಳೆಂದು ಸಾರಿತು. ಅದರಲ್ಲಿ ನಾಲ್ವರಿಗೆ ನೇಣು ಶಿಕ್ಷೆ ವಿಧಿಸಿತು. ಇಂತಹ ಭಯಂಕರ "ಮರ್ಯಾದಾ ಹತ್ಯೆ"ಗೆ ರಾಜವಿಂದರ್ ಕೌರ್ ಸಾಕ್ಷಿಯಾದಳು. ಧೈರ್ಯದಿಂದ ಅದರ ವಿರುದ್ಧ ಹೋರಾಡಿ ಜಯಗಳಿಸಿದಳು. ರಾಜವಿಂದರ್ ಇರುವು ತಿಳಿಯದಂತೆ ಮುಚ್ಚಿಟ್ಟು, ಆತ್ಮಸ್ಥೈರ್ಯ ನೀಡಿ ಜನವಾದಿ ಮಹಿಳಾ ಸಂಘಟನೆ ಸಹಾಯ ನೀಡಿತು. ದಶಕಗಳಿಂದಲೂ ನ್ಯಾಯಕ್ಕಾಗಿ ಮಹಿಳೆಯರು ಕಾದು ನಿಲ್ಲಬೇಕಿತ್ತು. ರಾಜವಿಂದರ್‌ಗೆ ಮೂರು ವರ್ಷಗಳಲ್ಲಿಯೇ ನ್ಯಾಯ ಸಿಕ್ಕಿತು. ಆದರೆ ಈ ಭೀಭತ್ಸ ಹತ್ಯೆಗಳನ್ನು ತಡೆಯುವುದು ಹೇಗೆ? ನಾಗರೀಕತೆ ಬೆಳೆದಂತೆ ಹಕ್ಕಿನ ಅಹಂಕಾರ, "ಮಾತು ಕೇಳದ ಮಗಳು" ಎಂಬ ಕಾರಣಕ್ಕೆ ಕೋಪದಿಂದ ಕೆರಳಿ ಇಡೀ ಕುಟುಂಬ ನಾಶ ಮಾಡುವ ಹೀನ ಕೃತ್ಯ ಎಸಗುವುದಕ್ಕೂ ಹೇಸಲಾರರು. ರೋಗಗ್ರಸ್ತ ಸಮಾಜಕ್ಕೆ ಚಿಕಿತ್ಸೆ ನೀಡಬೇಕಾಗಿದೆ.

ಮರ್ಯಾದಾ ಹತ್ಯೆಗಳಿಗೆ ಕುಖ್ಯಾತಿ ಪಡೆದ ಉತ್ತರ ಭಾರತದ ಹರಿಯಾಣಾದ ಹಾಗೂ ಇತರೇ ಖಾಪ್ ಪಂಚಾಯಿತಿಗಳು ಚಾಲ್ತಿಯಲ್ಲಿವೆ. ಹೆಣ್ಣು ಮಕ್ಕಳ ಸ್ವಾತಂತ್ರ್ಯ ಚಲನಶೀಲತೆಯನ್ನು ನಿರ್ಬಂಧಿಸುವ ತಾಲಿಬಾನ್ ರೀತಿಯ ಆದೇಶಗಳು, ದಲಿತರಿಗೆ ದೇವಸ್ಥಾನ ಬಹಿಷ್ಕಾರದಂತಹ ಆದೇಶಗಳನ್ನು ಉತ್ತರ ಪ್ರದೇಶದ ಪಂಚಾಯಿತಿಗಳು ರಾಷ್ಟ್ರದ ಸಾಂವಿಧಾನಿಕ ಮೌಲ್ಯಗಳಿಗೆ ಅಪಚಾರ ಎಸಗಿವೆ. ರೋಗಗ್ರಸ್ತ ಊಳಿಗಮಾನ್ಯ ಮನಸ್ಥಿತಿಯ ಮನಸುಗಳು ಆಧುನಿಕ ಭಾರತದಲ್ಲಿವೆ. ಹೆಣ್ಣು ಮಕ್ಕಳು ಮೊಬೈಲ್ ಬಳಸಬಾರದು, ಒಬ್ಬರೇ ಹೊರಗೆ ಹೋಗಬಾರದು, ತಲೆತುಂಬಾ ಬಟ್ಟೆ ಹೊದೆಯಬೇಕು ಇಂತಹ ಅನೇಕ ನಿರ್ಬಂಧಗಳು, ನಿಷೇಧಗಳನ್ನು ಈ ಪಂಚಾಯಿತಿಗಳು ಜಾರಿ ಮಾಡುತ್ತಿವೆ. ಉತ್ತರ ಪ್ರದೇಶದ ಭಾಗಪತ್ ಜಿಲ್ಲೆಯ ಆಸ್ರಾ ಗ್ರಾಮ ಪಂಚಾಯಿತಿಯಿಂದ ಇಂತಹ ಆದೇಶಗಳು ಹೊರಟಿವೆ. ಈ ಪಂಚಾಯಿತಿ ಪ್ರೇಮವಿವಾಹವನ್ನು ನಿಷೇಧಿಸುತ್ತದೆ. ಹೆಣ್ಣಿನ ಎಲ್ಲಾ ಬಗೆಯ ಚಲನಶೀಲತೆಯನ್ನು ಅದು ನಿರ್ಬಂಧಿಸುತ್ತದೆ. ಅಲ್ಲಿಯ ಸಂಸತ್ ಸದಸ್ಯರ ಪುತ್ರ ಇದನ್ನು ಬಹಿರಂಗವಾಗಿ ಬೆಂಬಲಿಸುತ್ತಿರುವುದು ನಿರ್ಲಜ್ಜತನದ ಪರಮಾವಧಿ. ಈ ಕೃತ್ಯ ತಾಲಿಬಾನಿಗಳಿಗಿಂತ ಭಿನ್ನವಾಗಿಲ್ಲ.

ಈ ಮರ್ಯಾದಾ ಹತ್ಯೆಗಳು ದೇಶ ವಿಭಜನೆಯ ಕಾಲದಲ್ಲಿ ಬಹಳಷ್ಟು ನಡೆದವು. ಹೈದ್ರಾಬಾದ್ ಪ್ರಾಂತ್ಯದಲ್ಲಿ ನಡೆದ ರಜಾಕಾರರ ಹಾವಳಿಯಲ್ಲಿ ಮುಸ್ಲಿಮರನ್ನು ಹಿಂದುಗಳು, ಹಿಂದುಗಳನ್ನು ಮುಸ್ಲಿಮರು ಕೊಲ್ಲುವುದು ನಡೆಯಿತು. ಮಹಿಳೆಯರನ್ನು ಅತ್ಯಾಚಾರಕ್ಕೀಡು ಮಾಡುವಂತ ಕ್ರಿಯೆಗಳು ನಡೆದವು. ಆಗ ಗುಲಬರ್ಗಾದ ಬೇನೂರು ಗ್ರಾಮದಲ್ಲಿನ ನನ್ನ ಅಜ್ಜಿಯವರು (ತಾಯಿಯವರ ತಾಯಿ) 7 ಜನ ಹೆಣ್ಣು ಮಕ್ಕಳೊಂದಿಗೆ ಹಾರಿ ಪ್ರಾಣ ಕಳೆದುಕೊಳ್ಳಲು ಹೋದಾಗ ಹಿಂದು ಧರ್ಮದ ನಮ್ಮ ಹೊಲದ ಕೆಲಸ ಮಾಡುವ ಆಳು ಅವರನ್ನು ರಕ್ಷಿಸಿದ್ದಳೆಂದು ಅಮ್ಮ ಹೇಳುತ್ತಿದ್ದರು. ಈ ಜನರಿಗೆ ಮನೆಯ ಹೆಣ್ಣುಮಕ್ಕಳೆಂದರೆ ಮನೆಯ ಗೌರವ. ಅವರು ಕಳಂಕಿತರಾಗಬಾರದು. ಜೀವ ಹೋದರೂ ಸರಿಯೇ ಕುಟುಂದ ಘನತೆ ಗೌರವಗಳಿಗೆ ಧಕ್ಕೆ ಬರಬಾರದೆಂಬ ಸನಾತನ ಮೌಲ್ಯಗಳು ಹೆಣ್ಣು ಗಂಡು ಎಲ್ಲರ ಮನದಲ್ಲಿಯೂ ಗಟ್ಟಿಯಾಗಿ ಬೇರು ಬಿಟ್ಟಿದೆ.

ಮರ್ಯಾದಾ ಹತ್ಯೆಗಳ ಕಾರಣದಿಂದ ಹೆಣ್ಣು ಮಕ್ಕಳ ಬದುಕು ಇನ್ನಷ್ಟು ನರಕವಾಗುತ್ತಿದೆ. ಪ್ರೀತಿಸಿದವನನ್ನು ಮದುವೆಯಾದರೆ ತಾಯಿ ತಂದೆಯೇ ಕೊಲ್ಲುತ್ತಾರೆ. ತನ್ನನ್ನು ಹುಡುಗ ಪ್ರೀತಿಸುತ್ತಿದ್ದು ತಾನು ಪ್ರೀತಿಸದೇ ತಿರಸ್ಕರಿಸಿದರೆ ಹುಡುಗ ಆಸಿಡ್ ಎರಚಿ ಕುರೂಪಗೊಳಿಸುತ್ತಾನೆ. ಹೆಣ್ಣಿನ ಪಾಲಿಗೆ ಪ್ರೀತಿಸಿದರೂ ತಪ್ಪು ಪ್ರೀತಿಸದಿದ್ದರೂ ತಪ್ಪು ಎನ್ನುವಂತಾಗಿದೆ. ಆರೆ ಎರಡೂ ಸಂದರ್ಭಗಳಲ್ಲಿಯೂ ಶಿಕ್ಷೆ ಅನುಭವಿಸುವವರು ಹೆಚ್ಚಾಗಿ ಮಹಿಳೆಯರೇ ಆಗಿರುತ್ತಾರೆ. ಮಹಿಳಾ ಸಬಲೀಕರಣ ಕೇವಲ ರಾಜಕೀಯದ ಅಸ್ತ್ರವಾಗುತ್ತಿದೆ. ಸರ್ಕಾರದ ಯೋಜನೆಗಳಾಗಲೀ ಸಂಸ್ಥೆ ಗಳಾಗಲೀ ನಿಜವಾಗಿ ಅವಳ ಹಿತ ಕಾಯುತ್ತಿಲ್ಲ. ಮಹಿಳಾ ಸಂಘಟನೆಗಳ ಒತ್ತಾಯಕ್ಕೆ ಹುಟ್ಟಿರುವ "ಮಹಿಳಾ

ಆಯೋಗ" ಆಳುವವರ ಹಿತ ಕಾಯುವಲ್ಲಿಯೇ ಮಗ್ನ ವಾಗಿದೆ. ಆಳುವ ಸರ್ಕಾರಗಳೂ ಮಹಿಳಾ ಆಯೋಗ ಕ್ಕೊಂದು ಸ್ವತಂತ್ರ ಅಸ್ತಿತ್ವವನ್ನೇ ನೀಡುತ್ತಿಲ್ಲ. ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂಬಂತಾಗಿದೆ.

ಕರ್ನಾಟಕದ ಮದ್ದೂರಿನ ಅಬಲವಾಡಿಯ "ಸುವರ್ಣ"ಳ ಹತ್ಯೆಯಿಂದ ಯಾರ ಮರ್ಯಾದೆ ಉಳಿಯಿತು? ಹಲವು ವರ್ಷಗಳಿಂದ ಪ್ರೀತಿಸಿ ಗೋವಿಂದರಾಜುವನ್ನು ಕೈ ಹಿಡಿದ ಸುವರ್ಣ ಪ್ರೀತಿಸಿದ್ದೇ ಘೋರ ಅಪರಾಧವಾಯಿತೇ? ತಾಯಿ ತಂದೆ ಸೋದರರ ಜೊತೆ ಆಡಿ ಬೆಳೆದ ಕಂದಮ್ಮಗಳನ್ನು ಕೊಲ್ಲುವಷ್ಟು ಕ್ರೂರವಾಯಿತೇ ಮನೆತನದ ಗೌರವ? ಕೊಲ್ಲುವಾಗ ಕ್ಷಣಕ್ಷಣಕ್ಕೂ ರೋಧಿಸುತ್ತಿದ್ದ ಸುವರ್ಣಳ ಮುಂದೆ ಜನ ಮೂಕ ಪ್ರೇಕ್ಷಕರಾದರು . ವಿಕಾರವಾಗಿ ಅರಚುತ್ತಾ ಜೀವ ಉಳಿಸಲು ಸಹಾಯ ಕೋರುತ್ತಿದ್ದಳು ಸುವರ್ಣ. ಏನೂ ಮಾಡಲಾಗದೇ ಜನರು ಮೂಕ ಪ್ರೇಕ್ಷಕರಾದರು. ಈ ಮೂಲಕ ಆ ಊರಿನ ಜನತೆ ತಮ್ಮ ಊರಿನ ಮರ್ಯಾದೆಯನ್ನು ತಾವೇ ಹತ್ಯೆ ಮಾಡಿಕೊಂಡಿದ್ದಾರೆ. ಈ ಹತ್ಯೆಯ ಕುರಿತು ಮಾತನಾಡಿದರೂ ತಮ್ಮನ್ನು ಮುಗಿಸಬಹುದೆಂಬ ಭಯದಿಂದ ಇಡೀ ಊರಿಗೆ ಊರೇ ಮೌನವಾಗಿದೆ. ತಾವೇ ಹತ್ಯೆಯಾಗುವ ಭಯ ಅವರಿಗೆ ಕಾಡಿದೆ. ಮರ್ಯಾದಾ ಹತ್ಯೆ ಮನುಕುಲದ ಮರ್ಯಾದೆಯ ಹತ್ಯೆಯಾಗಿದೆ. ಬದುಕಬೇಕಾದ ಜೀವವನ್ನು ಸಾಯಿಸಿ, ಮರ್ಯಾದೆ ಹೆಚ್ಚಿಸಿಕೊಳ್ಳುವುದು ಮೂರ್ಖತನದ ಪರಮಾವಧಿ. ಇದು ಹೊಸ ಆರ್ಥಿಕ ವ್ಯವಸ್ಥೆ ಐಡೆಂಟಿಟಿ ಪಾಲಿಟಿಕ್ಸ ನಿಂದ ಉಲ್ಬಣಗೊಳ್ಳುತ್ತಿರುವ ಹೊಸ ರಾಜಕೀಯದ ಪರಿಣಾಮವಾಗಿದೆ. ಓಟಿನ ರಾಜಕೀಯಕ್ಕಾಗಿ ಒಂದು ಜಾತಿ ಇನ್ನೊಂದು ಜಾತಿಯ ಜೊತೆ ಹೊಡೆದಾಡಿ ತಮ್ಮನ್ನು ಸೇಫ್ ಝೋನ್ ನಲ್ಲಿ ಉಳಿಸಿಕೊಳ್ಳಲು 'ಮರ್ಯಾದಾ ಹತ್ಯೆ' , 'ವಸ್ತ್ರ ಸಂಹಿತೆ', 'ಸ್ವಜಾತಿ ಮೋಹ', 'ದೇವರ ಭಕ್ತಿ', 'ಗುಡಿಗೋಪುರ ಸಂಸ್ಕೃತಿ' ಇತ್ಯಾದಿ ಸಂಪ್ರದಾಯಗಳನ್ನು ಸೃಷ್ಟಿಮಾಡಿ ಆ ಸಂಪ್ರದಾಯಗಳ ಮೂಲಕ ಹೆಣ್ಣನ್ನು ನಿಯಂತ್ರಿಸುವುದರ ಮೂಲಕ ಹೆಣ್ಣಿನ ವಿಮೋಚನೆಗೆ ತಡೆಯೊಡ್ಡಿದೆ. ಹೆಣ್ಣಿಗೆ ಸ್ವತಂತ್ರಗೊಳಿಸುವಲ್ಲಿ ಸಹಾಯವಾಗಬೇಕಿದ್ದ ರಾಜಕೀಯ ತನ್ನ ಬೇಳೆ ಬೇಯಿಸಿಕೊಳ್ಳುವುದರಲ್ಲೇ ಮಗ್ನವಾಗಿದೆ.

ಬಾಲ್ಯ ವಿವಾಹವನ್ನು ತಡೆದಿದ್ದಕ್ಕಾಗಿ ರಾಜಸ್ಥಾನದ ಹಳ್ಳಿಗಾಡಿನ ಭಾಂವ್ರಿದೇವಿ ಸಾಮೂಹಿಕ ಅತ್ಯಾಚಾರಕ್ಕೊಳಗಾಗಬೇಕಾಯಿತು. ಇಲ್ಲಿಯೂ ಖಾಪ್ ಪಂಚಾಯಿತಿಗಳಂತಹ ಸಮುದಾಯದ ಹಿರಿಯರು ಪ್ರಮುಖ ಪಾತ್ರ ವಹಿಸುತ್ತಾರೆ. ವಿರೋಧದ ಧ್ವನಿಗಳನ್ನು ನಿಯಂತ್ರಿಸುತ್ತಾರೆ. ಇಲ್ಲಿ ಬರ್ಬರ ಕೊಲೆ, ಹಿಂಸೆ, ಅಮಾನವೀಯ ಧೋರಣೆಗಳನ್ನು ಹೆಣ್ಣಿನ ಮೇಲೆ ಹೇರಲಾಗುತ್ತದೆ.

ಮರ್ಯಾದಾ ಹತ್ಯೆಗಳು ಮಾನವ ಹಕ್ಕುಗಳ ಉಲ್ಲಂಘನೆಯಾಗಿದೆ. ಸ್ತ್ರೀ ಹತ್ಯೆ ಮಹಾಪಾಪ ಎನ್ನುವ ಭಾರತೀಯ ಸಮಾಜದಲ್ಲಿ ಹೆಣ್ಣು ಭ್ರೂಣ ಹತ್ಯೆ, ಹೆಣ್ಣು ಶಿಶು ಹತ್ಯೆ, ಮರ್ಯಾದಾ ಹತ್ಯೆ, ವರದಕ್ಷಿಣೆ ಹತ್ಯೆಗಳು ಬಲಾತ್ಕಾರಗಳು ಅವ್ಯಾಹತವಾಗಿ ನಡೆಯುತ್ತಲೇ ಬಂದಿವೆ. ರಾಮಾಯಣ ಮಹಾಭಾರತದಿಂದ ಇಂದಿನವರೆಗೂ ನಿರಂತರವಾಗಿ ನಡೆಯುತ್ತಿವೆ. ಆತ್ಮಕ್ಕೆ ಹೆಣ್ಣು ಗಂಡೆಂಬ ಭೇದವಿಲ್ಲವೆಂದು ಹನ್ನೆರಡನೆಯ ಶತಮಾನದಿಂದ ಹೇಳುತ್ತಾ ಬಂದಿದ್ದರೂ ಸಹ ಹೆಣ್ಣಿನ ಬಗೆಗಿರುವ ಮಲತಾಯಿ ಧೋರಣೆ , ಲಿಂಗ ತಾರತಮ್ಯಗಳು ನಿಂತಿಲ್ಲ . ಕುಟುಂಬದ ಮರ್ಯಾದೆಯ ಹೆಸರಲ್ಲಿ ಅಧಿಕಾರ ಹೊಂದಿ ಪುರುಷರು ಹೆಣ್ಣಿನ ಮೇಲೆ ನಡೆಸುವ ಪೈಶಾಚಿಕ ಕೊಲೆಯೇ "ಮರ್ಯಾದಾ ಹತ್ಯೆ"ಯಾಗಿದೆ.

ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಇಂದಿನವರೆಗೂ ಹೆಣ್ಣಿಗೆ ಆಚಾರ-ವಿಚಾರ, ಕಂದಾಚಾರಗಳ ಮರೆಯಲ್ಲಿ ರಕ್ಷಿಸುವ ನಾಟಕ ಮಾಡುತ್ತಲೇ



ಕೊಲೆ ಮಾಡುವುದಕ್ಕೂ ಹೇಸಲಾರರು. ಹೆಣ್ಣು ತನಗೆ ಕುಟುಂಬವೊಂದು ರಕ್ಷಣೆ ನೀಡುವ ಬೆಚ್ಚನೆ ತಾಣವೆಂದು ನಂಬಿದ್ದಳು. ಇಲ್ಲಿ ತಂದೆಯಿಂದಲೇ ಮೂರು ವರ್ಷದ ಮಗಳು ಅತ್ಯಾಚಾರಕ್ಕೊಳಗಾಗಿದ್ದರೆ, ತಂದೆಯಿಂದಲೇ 20 ವರ್ಷದ ಮಗಳು ಪ್ರೀತಿಸಿ ಮದುವೆಯಾದದಕ್ಕೆ ಮರ್ಯಾದೆಯ ಹಿನ್ನೆಲೆಯಿಂದಲೇ ಕೊಲೆಯಾಗುತ್ತಿರುವುದು ವಿಪರ್ಯಾಸವಾಗಿದೆ. ಹೆಣ್ಣನ್ನು ಭ್ರೂಣಾವಸ್ಥೆಯಲ್ಲಿಯೇ ಕೊಲೆ ಮಾಡಲಾಗುತ್ತದೆ. ಅಲ್ಲಿ ಬಚಾವ್ ಆಗಿ ಬಂದರೆ ಹೆಣ್ಣು ಶಿಶುವನ್ನು ಹಿಂಸಿಸಿ ಕೊಲೆ ಮಾಡಿ ಸಾಯಿಸುತ್ತಾರೆ. ಅಲ್ಲಿಯೂ ಬದುಕುಳಿದರೆ ಅತ್ಯಾಚಾರಕ್ಕೀಡಾಗುತ್ತಾಳೆ. ಅಲ್ಲಿಯೂ ಬದುಕುಳಿದರೆ ವರದಕ್ಷಿಣೆ ಹತ್ಯೆ ಅಥವಾ ಮರ್ಯಾದಾ ಹತ್ಯೆಗಳಾಗಬಹುದು. ಕುಟುಂಬವೇ ಹೆಣ್ಣಿನ ಭದ್ರತೆಯ ತಾಣವಾಗಿತ್ತು. ಆದರೆ ಈಗದರ ಕಲ್ಪನೆಗಳು ಶಿಥಿಲವಾಗುತ್ತಿವೆ. ಕುಟುಂಬವೇ ಅವಳಿಗೆ ರಕ್ಷಣೆಯ ತಾಣವಾಗದಿದ್ದರೆ, ಅವಳು ತನಗಾಗಿ ಸುರಕ್ಷಿತ ತಾಣಗಳನ್ನು ಎಲ್ಲಿ ಹುಡುಕಿಕೊಳ್ಳಬೇಕು?

ಮಂಡ್ಯದ ಸುವರ್ಣ, ಸ್ಮೃತಿಯಂತಹ ಮಹಿಳೆಯರಿಗೆ ಮರ್ಯಾದೆಯ ಹೆಸರಿನಲ್ಲಿ ಆಯ್ಕೆಯ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳಲಾಯಿತು. ಎರಡೂ ಪ್ರಕರಣಗಳಲ್ಲಿ ಅವರು ಹತ್ಯೆಯಾದರು. ಪದವಿ ಕಾಲೇಜಿನ ಪ್ರಾಧ್ಯಾಪಕಿ ದಲಿತನನ್ನು ವರಿಸಿದ್ದಕ್ಕೆ ಸಹೋದರನಿಂದಲೇ ಕೊಲೆಯಾದಳು. ಧರ್ಮ, ಸಂಪ್ರದಾಯ, ಕಂದಾಚಾರ, ಆಚಾರ-ವಿಚಾರಗಳು ಹೆಣ್ಣನ್ನು ಬಲಿ ಮಾಡುತ್ತವೆ. ಆದ್ದರಿಂದ ಹೆಣ್ಣು ಆಂತರಿಕವಾಗಿ ಗಟ್ಟಿಗೊಳ್ಳಬೇಕಿದೆ. ನಿಜವಾದ ಅರ್ಥದಲ್ಲಿ ಸಬಲೀಕರಣಗೊಳ್ಳಬೇಕಾಗಿದೆ. ಅವಳ ಆಯ್ಕೆಯ ಹಕ್ಕನ್ನು ಗೌರವಿಸಬೇಕಾಗಿದೆ. ಇಂದಿಗೂ ಇಂತಹ ಮಹಿಳಾ ಹಕ್ಕುಗಳನ್ನು ಮಾನವ ಹಕ್ಕುಗಳಾಗಿ ಪರಿಗಣಿಸಿ ಎಂದು ಸರ್ಕಾರಕ್ಕೆ ಕೇಳಬೇಕಾದ ಶೋಚನೀಯ ಸ್ಥಿತಿಯಿರುವುದು ವಿಪರ್ಯಾಸವೇ ಸರಿ.

❑

ನಮ್ಮ ಮಾನಸಕ್ಕೆ ಲೇಖನ, ವಿಮರ್ಶೆ, ಕವನಗಳನ್ನು ಇ-ಮೇಲ್ ಮೂಲಕ ಕಳುಹಿಸುವವರು ನುಡಿ ಲಿಪಿಯಲ್ಲಿ ಮಾತ್ರ ಕಳುಹಿಸಿ.

ಪತ್ರಿಕೆಗೊಂದು ಪತ್ರ

ಆತ್ಮೀಯ ಮಾನಸ,

ಸಂಚಿಕೆಗಳು ಉತ್ತಮವಾಗಿ ಬರುತ್ತಿವೆ. ರೋಹಿಣಿಯವರ 'ಆರಾಧನಾ ರಂಗದಲ್ಲಿ ಮಹಿಳೆ' ಲೇಖನ ಚೆನ್ನಾಗಿತ್ತು. ಮಹಿಳೆ ಮತ್ತು ಭಕ್ತಿ ರಂಗದ ನಡುವಿನ ಹಲವಾರು ವಿಷಯಗಳನ್ನು ಬಹಳ ಸೊಗಸಾಗಿ ನಿರೂಪಿಸಿದ್ದಾರೆ. ಇಂತಹ ದೀರ್ಘವಾದ ಹಾಗೂ ಗಂಭೀರವಾದ ಇನ್ನಷ್ಟು ಲೇಖನಗಳು ಬರಲಿ ಎಂದು ಆಶಿಸುತ್ತೇನೆ

-ಪಲ್ಲವಿ

✦ ✦

ಕಳೆದ ಸಂಚಿಕೆಯಲ್ಲಿ ಪ್ರಕಟವಾದ ಲೇಖನಗಳು ಚೆನ್ನಾಗಿತ್ತು. ಮಹಿಳೆಯರ ಕುರಿತಾದ ಪರಿಚಯ ನೀಡುವ ಲೇಖನಗಳನ್ನು ಪ್ರತಿ ಸಂಚಿಕೆಯಲ್ಲಿಯೂ ಪ್ರಕಟಿಸಿದರೆ ಚೆನ್ನಾಗಿರುತ್ತದೆ ಎಂದು ನನ್ನ ಅಭಿಪ್ರಾಯ.

-ಲಕ್ಷ್ಮೀ

✦ ✦

ಆತ್ಮೀಯರೇ,

ಆಗಸ್ಟ್ ಸಂಚಿಕೆಯಲ್ಲಿ ಪ್ರಕಟವಾದ ನನ್ನ ದೇಹ ನನ್ನ ಹಕ್ಕು ಲೇಖನದಲ್ಲಿ ಮೂಡಿಬಂದಿರುವ ವಿಷಯವನ್ನು ಇನ್ನಷ್ಟು ಗಂಭೀರವಾಗಿ ಹಾಗೂ ವಿಷದವಾಗಿ ಪ್ರಕಟಿಸಿದರೆ ಚೆನ್ನ. ಮಾಧ್ಯಮದಲ್ಲಿ ಮಹಿಳೆಯರನ್ನು ಬಿಂಬಿಸುವ ರೀತಿಯನ್ನು ಹಾಗೂ ಅದರ ಕಾರಣ ಹಾಗೂ ಪರಿಣಾಮಗಳನ್ನು ವಿವಿಧ ಆಯಾಮಗಳಿಂದ ಸೆರೆ ಹಿಡಿಯುವಂತಹಾ ಸಂಶೋಧನಾ ಲೇಖನವೊಂದು ಬರಲಿ.

-ಸುಷ್ಮ

'ನಮ್ಮ ಮಾನಸ' ಓದುಗರಲ್ಲಿ ವಿನಂತಿ

ನಮ್ಮ ಮಾನಸ ಪತ್ರಿಕೆಯನ್ನು ಓದಿ ನಿಮ್ಮ ಅನಿಸಿಕೆಗಳನ್ನು ಇ-ಮೇಲ್ ಅಥವಾ 'ನಮ್ಮ ಮಾನಸ' ವಿಳಾಸಕ್ಕೆ ಕಳುಹಿಸಿ. ಲೇಖನಗಳಿಗೆ ಸಂಬಂಧಪಟ್ಟ ನಿಮ್ಮ ಅಭಿಪ್ರಾಯ ಮತ್ತು ಅನಿಸಿಕೆ ಸ್ವಾಗತಾರ್ಹ.

ಇ-ಮೇಲ್ ಐಡಿ: nammamanasa@gmail.com

ನಮ್ಮ ಮಾನಸ ವಿಳಾಸ:

'ನಮ್ಮ ಮಾನಸ'

114/5, 9ನೇ ತಿರುವು, 2ನೇ ಮುಖ್ಯರಸ್ತೆ, ಚಾಮರಾಜಪೇಟೆ,
ಬೆಂಗಳೂರು – 560 018

ಆತ್ಮೀಯರೇ,

ಪಿಂಕಿ ಪ್ರಮಾಣಿಕ್ ರವರು ಅನುಭವಿಸಬೇಕಾದ ಮುಜುಗರದ ಸನ್ನಿವೇಶಗಳನ್ನು ಹಾಗೂ ಅಸಹಾಯಕತೆಯನ್ನು 'ನಮ್ಮ ಮಾನಸ' ಪ್ರಸ್ತುತಪಡಿಸಿದ್ದು ಶ್ಲಾಘನೀಯ. ಪತ್ರಿಕೆ ಒಳ್ಳೆಯ ಆಶಯಗಳೊಡನೆ ಮೂಡಿ ಬರುತ್ತಿದೆ. ಆದರೆ 'ಸಂಪಾದಕೀಯ' ಬರೆಯುವ ಶೈಲಿ ಬಹಳಷ್ಟು ಉತ್ತಮಗೊಳಿಸಬೇಕು. ಕಳೆದ ಸಂಚಿಕೆಯ 'ನನ್ನ ದೇಹ ನನ್ನ ಹಕ್ಕು' ಲೇಖನವು ಮನಸ್ಸನ್ನು ತಟ್ಟುತ್ತದೆ ಹಾಗೂ ಸಮಸ್ಯೆಯನ್ನು ಅರ್ಥಮಾಡಿಸಲು ಪ್ರಾಮಾಣಿಕ ಪ್ರಯತ್ನ ಕಾಣುತ್ತದೆ. ಆದರೆ ಎಲ್ಲ ಲೇಖನಗಳಲ್ಲೂ ವಿಷಯದ ಸಮಗ್ರ ದೃಷ್ಟಿಕೋನಗಳ ಚರ್ಚೆ ಬೇಕು. ಅವಸರದಲ್ಲಿ ವಿಚಾರ ಸರಣಿ ತುಂಡಾಗಬಾರದು. ಹಾಗೂ 'ಸ್ವಾತಂತ್ರ್ಯದ ಹಾದಿ ಇನ್ನೆಷ್ಟು ದೂರ' ಹಾಗೂ 'ಮಹಿಳೆಯರಿಗೆ ಸ್ವಾತಂತ್ರ್ಯದ ವಿಚಾರವಿದೆಯೇ?' ಅಂತಹ ಮೇಲ್ನೋಟದ ಲೇಖನಗಳಲ್ಲಿ ಯಾವ ಸಮಸ್ಯೆಯ ಬಗ್ಗೆಯೂ ಗಾಢವಾಗಿ ಚರ್ಚೆ ಯಾಗದೇ, ಸಮಸ್ಯೆಯ ಆಳದ ವಿಶ್ಲೇಷಣೆ ನಡೆಯದೇ ಸರಳ ರೇಖಾತ್ಮಕ ಚಿಂತನೆ ಕಂಡು ಬರುತ್ತಿದೆ. ಲೇಖನದಲ್ಲಿ ಹೊಸತೇನೂ ಒಳನೋಟವಿಲ್ಲದಾಗ, ಚಿಂತನೆಯಿಲ್ಲದಾಗ ಓದುವದು ವ್ಯರ್ಥವೂ, ಕಷ್ಟವೂ ಎನಿಸಬಹುದು. 'ದೇಶಿಯ ಚಿಂತನೆಗಳಲ್ಲಿ ಸ್ತ್ರೀವಾದಿ ಪ್ರಜ್ಞೆ' ಲೇಖನದಲ್ಲಿ ನಮ್ಮ ಸಂಸ್ಕೃತಿಯನ್ನು ವೈಭವೀಕರಿಸುವ ಪ್ರಯತ್ನ ಕಾಣುತ್ತಿದೆಯೇ ಹೊರತು ಪ್ರಾಮಾಣಿಕ ಕಾಳಜಿ ಕಾಣುತ್ತಿಲ್ಲ. ಪ್ರತಿ ಸಂಚಿಕೆಯಲ್ಲೂ ಪುಸ್ತಕಗಳ ಪರಿಚಯದ ಅಂಕಣ ಚೆನ್ನಾಗಿ ಮೂಡಿ ಬರುತ್ತಿದೆ. ಕವನಗಳು ನಾಟುವಂತಿವೆ. ನಿಮ್ಮ ಮುಖಪುಟದ ಛಾಯಾಚಿತ್ರಗಳು ಬಹಳ ಚೆನ್ನಾಗಿರುತ್ತವೆ. 'ನಮ್ಮ ಮಾನಸ' ಇನ್ನೂ ಬಹಳಷ್ಟು ಜನರನ್ನು ತಲುಪಲಿ ಎಂದು ಆಶಿಸುತ್ತೇನೆ.

-ಸುಬ್ರಹ್ಮಣ್ಯ ಹೆಗಡೆ, ಮೈಸೂರು

ಚಂದಾದಾರರಲ್ಲಿ ಮನವಿ

ನವೀಕರಣ

ಈಗಾಗಲೇ ಚಂದಾ ಅವಧಿ ಮುಗಿದಿರುವ ಚಂದಾದಾರರು ಕೂಡಲೇ ನವೀಕರಿಸಿ. ಚಂದಾ ಅವಧಿ ಮುಗಿಯುವ 2-3 ತಿಂಗಳ ಮೊದಲೇ ಈ ಕುರಿತು ಚಂದಾದಾರರಿಗೆ ಮಾಹಿತಿ ನೀಡಲಾಗುವುದು. ದಯವಿಟ್ಟು ಕೂಡಲೇ ಚಂದಾ ನವೀಕರಿಸಬೇಕೆಂದು ವಿನಂತಿಸುತ್ತೇವೆ.

-ಸಂಪಾದಕ ಮಂಡಳಿ

ನಿಮ್ಮ ಸ್ನೇಹಿತರನ್ನೂ ಚಂದಾದಾರರನ್ನಾಗಿಸಿ

ಕತ್ತಲೆಯ ಜಗದಕಣ್ಣು

ಹೆಣ್ಣು ಹೆಣ್ಣಲ್ಲ ನೀ ಜಗದಕಣ್ಣು ಎಂದು
ನಿನ್ನ ಕಣ್ಣುಕಿತ್ತ
ಕೂಗಾಡಿದವರು ನಾವಲ್ಲವೆ.


ಕತ್ತಲೆಯ ಮಂಚಕ್ಕೆ
ಬರಸೆಳೆದರೂ ನಕ್ಕು
ಕತ್ತಲೆಯಲ್ಲೆ ಕುಳಿತವಳು ನೀನಲ್ಲವೆ.

ಸಲಿಕೆ, ಗುದ್ದಲಿ, ಹಾರಿಯಿಂದ
ಮೈ ಬಗೆದರೂ,
ಕಿಲಕಿಲನೆ ನಕ್ಕು
ಚಿಗುರುಟ್ಟಿಸುವವಳು ನೀನಲ್ಲವೆ.

ರಕ್ತ ಮಾಂಸ ನರನಾಡಿಗಳನ್ನೆ
ದಾರೆಯೆರದ ನಿನ್ನ ಗರ್ಭಸೀಳಿ
ನಿನ್ನೆದೆಗೆ ಒದ್ದರೂ,
ಅಯ್ಯೋ ನನ್ನಪ್ಪ.......
ಎಂದು ಮುದ್ದಾಡಿದವಳು ನೀನಲ್ಲವೆ.

ಹುಟ್ಟು ಹುಟ್ಟುತ್ತಲೇ ತಲೆಯಮೇಲೆ
ಎಳೆದುಕೊಂಡೆ ಸಮಾಜವನ್ನು
ಬೆಳೆಯುತ್ತ, ಬೆಳೆಯುತ್ತ ಕಲಿತೆ
ನಿಂದೆ, ಅಪಮಾನ ಎಲ್ಲವನ್ನೂ
ಸಹಿಸಿಕೊಂಡಿರುವುದನ್ನು

ಉರಿಗೆ ಸುಟ್ಟ ದೀಪದ ಬತ್ತಿ,
ತೇಯ್ದ ಗಂದ,
ಬೆಂದ ಅನ್ನವಾದವಳು ನೀನಲ್ಲವೆ.



■ ನಂದೀಶ್ವರ ದಂಡೆ
ಕೊಂಡನಾಯಕನಹಳ್ಳಿ

Registered with Registrar of Newspapers of India under No. KARKAN/2007/22289
'NAMMA MANASA', REGD.No.: MAG(3) NPP/399(A)/2006-07 **Reg.KA/BGS/2074/2010-12**

ಸತಿಯ ಸಮಾಧಿ

ನಮ್ಮೂರ ಸನಾತನ ಕೆರೆಯಲಿ
ಮಲೆತು ನಿಂತಿದೆ ನೀರು
ಪೂರಾ ತುಂಬಿದೆ ಪಾಚಿ ಅಲ್ಲಿ.

ಕೆರೆಯ ನಡುವೆಯೆ ನಿಂತಿದೆ
ಮೌನಿ ಮುಖಹೀನ ಮಾಸ್ತಿಕಲ್ಲು
ಈ ಗಲ್ಲುಗಂಭಕೆ ಚಿತ್ತಾರದ ಗುಡಿ.

ನಂಬಿಕೆಗಳ ಬಿತ್ತಿ ಹರಕೆಗಳ ಹೊತ್ತಿಹರು
ಕತ್ತಲೆಯ ಈ ಗಾಣಕೆ
ಕತ್ತನೆಂದೂ ನೀಡದಿರಿ ಗೆಳತಿಯರೆ.

ಮಡಿಲೊಳಗೆ ಮಗುವೊಂದಾಡಲಿ
ಗಂಡನೊಂದಿಗಿನ ವಿರಸ ದೂರಾಗಲಿ
ಮನೆಯೊಳಗೆ ಸಂತಸದ ಹೊನಲು ಹರಿಯಲಿ.

ಎಂದೆಲ್ಲಾ ಹರಕೆಗಳ ಹೊರೆಯದಿರಿ
ಆಸರೆಗೆಂದು ಸತಿಗಲ್ಲ ಕೈ ಹಿಡಿದೀರಿ
ಜೋಕೆ, ಬಿದ್ದೀರಿ ಮಲೆತ ನೀರಿನೊಳಗೆ

ಜಾರಿಬಿದ್ದರಿವು ಮೂಡುವುದರೊಳಗೇ
ಯಾರಾದರೂ ನಿಮ್ಮ ಹೊರಗೆಳೆಯುವುದರೊಳಗೇ
ಸಮಾಧಿಯಾದಿರಿ ಮಲೆತ ನೀರಿನೊಳಗೇ.

■ ಡಾ. ಕೆ. ಸರೋಜಾ

Registered Magazine

Posted on 9th of every month at MBC, Bangalore GPO
Total No. of Pages: 24

ವಿಳಾಸ :
ನಮ್ಮ ಮಾನಸ
114/5, 9ನೇ ತಿರುವು, 2ನೇ ಮುಖ್ಯರಸ್ತೆ,
ಚಾಮರಾಜಪೇಟೆ
ಬೆಂಗಳೂರು - 560 018